
ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ



ಪ್ರಜಾಪ್ರಭುತ್ವ ಹಕ್ಕುಗಳ
ಹೋರಾಟಗಾರ
ಧೀಮಂತ ಪತ್ರಕರ್ತ
ಕುಲದೀಪ್ ನಯ್ಯರ್

ಸಂಪುಟ 12 | ಸಂಚಿಕೆ 35 | ಆಗಸ್ಟ್ 27–ಸೆಪ್ಟಂಬರ್ 02, 2018 | ಪುಟ 16 | ರೂ.10/-

Web : www.janashakthi.co.in, e-mail : js_weekly@yahoo.com











ಕೊಡಗು–ಕೇರಳ

ಶತಮಾನದ ನೆರೆಯಿಂದ ಪಾಠ ಕಲಿಯೋಣ!

ಮುನಿಸಿಪಲ್ ಚುನಾವಣೆಗಳಿಗೆ ತಯಾರಿ

ಕಾರ್ಮಿಕ-ವಿರೋಧಿ ಕಾನೂನು ತಿದ್ದುಪಡಿ ಬೇಡ !

ಎಲ್ಲರಿಗೂ ಉದ್ಯೋಗ ! ಖಾಸಗೀಕರಣ ನಿಲ್ಲಿಸಿ !

ಸಾಮಾಜಿಕ ನ್ಯಾಯ ಬೇಕು !





ರಫೇಲ್ ಹಗರಣದ ಸುಂಟರಗಾಳಿ

ಪಾರ್ಲಿಮೆಂಟ್ ಚಲೋ

5 ಸೆಪ್ಟೆಂಬರ್ 2018, ನವದೆಹಲಿ

CITU - AIKS - AIAWU



ಮಾರ್ಕ್ಸ್‌ವಾದ ಎಂದಿಗೂ ಪ್ರಸ್ತುತ



ಹಿಂದುತ್ವ ಭಯೋತ್ಪಾದನಾ ಜಾಲ:

'ಸನಾತನ ಸಂಸ್ಥಾ' ನಿಷೇಧಿಸಿ

ಕೇರಳಕ್ಕೆ ನೆರೆ ಪರಿಹಾರ: 2000 ಕೋಟಿ ರೂ. ಕೇಂದ್ರೀಯ ತುರ್ತು ನೆರವು ಬೇಕು

ಮರುವಸತಿ ಕ್ರಮಗಳಿಗೆ ತುರ್ತು ನೆರವುಗಳನ್ನು ಒದಗಿಸಬೇಕು–ಪ್ರಧಾನಿಗಳಿಗೆ ಯೆಚುರಿ ಪತ್ರ

ಕೇರಳದಲ್ಲಿನ ಅಭೂತಪೂರ್ವ ನೈಸರ್ಗಿಕ ವಿಪತ್ತಿನಿಂದ ಆಗಿರುವ ಅಪಾರ ಹಾನಿಗಳ ಹಿನ್ನೆಲೆಯಲ್ಲಿ 500 ಕೋಟಿ ರೂ.ಗಳ ತುರ್ತು ನೆರವು ಏನೇನೂ ಸಾಲದು. ಇದನ್ನು 2000 ಕೋಟಿ ರೂ.ಗಳಿಗೆ ಏರಿಸಬೇಕು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಆಗಸ್ಟ್ 21ರಂದು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ.

ರಕ್ಷಣಾ ಕಾರ್ಯಾಚರಣೆಯ ಮೊದಲ ಘಟ್ಟ ಹೆಚ್ಚು–ಕಡಿಮೆ ಪೂರ್ಣಗೊಂಡಿದ್ದು, ಮರುವಸತಿಯ ಮುಂದಿನ ಘಟ್ಟದ ಸಮಸ್ಯೆಗಳನ್ನು ಎದುರಿಸಲು ರಾಜ್ಯ ಸರಕಾರಕ್ಕೆ ನೆರವಾಗುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಪ್ರಸ್ತಾವಗಳನ್ನೂ ಈ ಪತ್ರದಲ್ಲಿ ಮುಂದಿಡಲಾಗಿದೆ. ಅವು ಹೀಗಿವೆ:

* **ಪ್ರಧಾನ ಮಂತ್ರಿ ಆವಾಸ್ ಯೋಜನಾದಿಂದ ದೊಡ್ಡ ಪ್ರಮಾಣದಲ್ಲಿ ನಿಧಿಗಳ ಬಿಡುಗಡೆ,**
* **ಧ್ವಂಸಗೊಂಡಿರುವ ರಸ್ತೆ–ಸೇತುವೆಗಳು ಮತ್ತಿತರ ಸಂಪರ್ಕ ಜಾಲಗಳನ್ನು ಮತ್ತೆ ಏರ್ಪಡಿಸಲು ಎನ್‌ಎಹೆಚ್‌ಐ ಮತ್ತಿತರ ಸಂಬಂಧಪಟ್ಟ ಕೇಂದ್ರೀಯ ಸಂಸ್ಥೆಗಳ ಮತ್ತು ಭಾರತೀಯ ಸೇನೆಯ ಇಂಜಿನಿಯರಿಂಗ್ ತುಕಡಿಗಳ, ಗಡಿ ರಸ್ತೆಗಳ ಸಂಘಟನೆಯ ನೆರವು,**
* **ಆರೋಗ್ಯ ಪಾಲನೆಯ ಸಮಸ್ಯೆಗಳನ್ನು ಎದುರಿಸಲು ಸೇನಾ ವೈದ್ಯಕೀಯ ತುಕಡಿಗಳು, ಅಖಿಲಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತಿತರ ಸಂಸ್ಥೆಗಳ ನೆರವು**
* **ವಿದೇಶಗಳಿಂದ ಮಲೆಯಾಳಿಗಳ ಸಂಘಟನೆಗಳು ಕಳಿಸುವ ಸಾಧನ–ಸಾಮಗ್ರಿಗಳ ಮೇಲೆ ಸುಂಕ ವಿನಾಯ್ತಿ.**
* **ನೈಸರ್ಗಿಕ ವಿಪತ್ತಿನ ಸಂದರ್ಭದಲ್ಲಿ ರಾಜ್ಯಗಳಿಗೆ ಸಂಪನ್ಮೂಲ ಎತ್ತಲು ಜಿಎಸ್‌ಟಿಯಲ್ಲಿ ಅಗತ್ಯ ಅಂಶಗಳು.**
* **ವಸತಿ ಮತ್ತು ಆರೋಗ್ಯ ಕ್ರಮಗಳನ್ನು ಕುರಿತಂತೆ ವಿಶ್ವಸಂಸ್ಥೆಯ ವಿವಿಧ ಅಂಗ ಸಂಸ್ಥೆಗಳ ನೆರವಿಗಾಗಿ ಪ್ರಯತ್ನ.**

ಈ ಪ್ರಸ್ತಾವಗಳನ್ನು ಅವಕ್ಕೆ ಸಲ್ಲಬೇಕಾದ ಗಂಭೀರತೆಯಿಂದ ಪರಿಶೀಲಿಸಬೇಕು, ಮಾನವೀಯ ಪರಿಶೀಲನೆಗಳೊಂದಿಗೆ ಈ ಕ್ರಮಗಳನ್ನು ಅಗತ್ಯ ತುರ್ತಿನಿಂದ ಜಾರಿಗೊಳಿಸಬೇಕು ಎಂದು ಪ್ರಧಾನ ಮಂತ್ರಿಗಳನ್ನು ಸೀತಾರಾಮ್ ಯೆಚುರಿ ವಿನಂತಿಸಿಕೊಂಡಿದ್ದಾರೆ. ಅವರ ಪತ್ರದ ಪೂರ್ಣ ಪಾಟವನ್ನು ಮುಂದೆ ಕೊಡಲಾಗಿದೆ:

ಪ್ರಿಯ ಪ್ರಧಾನಮಂತ್ರಿಯವರೇ,

ನಾನು ಆಗಸ್ಟ್ 19–20ರಂದು ಕೇರಳಕ್ಕೆ ನೀಡಿದ ಭೇಟಿಯ ಬಗ್ಗೆ ತಿಳಿಸಲು ಮತ್ತು ಭಾರತ ಸರಕಾರ ಇತ್ತೀಚಿನ ನೆರೆಗಳಿಂದಾಗಿ ಅಭೂತಪೂರ್ವ ಹಾನಿಗಳಿಗೆ ಒಳಗಾಗಿರುವ ಲಕ್ಷಾಂತರ ಜನಗಳಿಗೆ ಪರಿಹಾರ ಮತ್ತು ಮರುವಸತಿಗೆ ಈ ಕೆಳಗಿನ ತುರ್ತು ಕ್ರಗಳನ್ನು ಪರಿಶೀಲಿಸಬೇಕೆಂದು ಕೋರಲು ತಮ್ಮ ಸಮಯ ಕೇಳುತ್ತಿದ್ದೇನೆ.

ಭಾರತದ ಜನತೆ ತಾವು ಭೇಟಿ ನೀಡಿ ಹಾನಿಯ ಅಂದಾಜು ಮಾಡಿದ್ದೀರಿ ಎಂದು ಸಂತಸಪಟ್ಟಿದ್ದಾರೆ. ಅಲ್ಲಿ ರಾಜ್ಯಸರಕಾರ ಮತ್ತು ಸಂಬಂಧಪಟ್ಟ ಅಧಿಕಾರಿಗಳು ನೆರೆಗಳಲ್ಲಿ ಸಿಲುಕಿಕೊಂಡ 10ಕ್ಷಕ್ಕೂ ಹೆಚ್ಚು ಜನಗಳನ್ನು ಪಾರು ಮಾಡುವ ಒಂದು ಬಹು ದೊಡ್ಡ ಕೆಲಸವನ್ನು ಮಾಡಿದ್ದಾರೆ ಎಂಬ ಸಂಗತಿಯನ್ನು ತಾವು ಮೆಚ್ಚಿಕೊಂಡಿದ್ದೀರಿ. ಇದು ಇತ್ತೀಚಿನ ದಿನಗಳಲ್ಲೇ ಅಭೂತಪೂರ್ವ ಪ್ರಮಾಣದ ಒಂದು ಕಾರ್ಯಾಚರಣೆ. ತಾವು 500 ಕೋಟಿ ರೂ.ಗಳ ಕೇಂದ್ರೀಯ ನೆರವನ್ನು ಮಂಜೂರು ಮಾಡಿದ್ದೀರಿ. ಆದರೆ ಆಗಿರುವ ವ್ಯಾಪಕ ಹಾನಿಗಳ ಹಿನ್ನೆಲೆಯಲ್ಲಿ ಇದು ಏನೇನೂ ಸಾಲದು. ಇದನ್ನು 2000 ಕೋಟಿ ರೂ.ಗಳಿಗೆ ಏರಿಸಬೇಕು ಎಂದು ನಾನು ಕೋರುತ್ತೇನೆ ಮತ್ತು ಅಗತ್ಯ ತುರ್ತಿನಿಂದ ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಬೇಕು ಎಂದು ತಮ್ಮನ್ನು ಆಗ್ರಹಿಸುತ್ತೇನೆ.

ನಾನು ಅತ್ಯಂತ ಹೆಚ್ಚು ಹಾನಿಗಳಿಗೆ ಒಳಗಾಗಿರುವ ಅಲಪುಳ ಸೇರಿದಂತೆ ಮೂರು ಜಿಲ್ಲೆಗಳಲ್ಲಿನ ಪರಿಹಾರ ಶಿಬಿರಗಳಿಗೆ ಭೇಟಿ ನೀಡಿದ್ದೇನೆ. ಶಿಬಿರಗಳಲ್ಲಿನ ಪರಿಸ್ಥಿತಿಗಳ ಬಗ್ಗೆ ಅಲ್ಲಿರುವವರಿಗೆ ತೃಪ್ತಿಯಿದೆ. ಆದರೆ ಅವರ ಮನೆಗಳೆಲ್ಲ ಕೊಚ್ಚಿ ಕೊಂಡು ಹೋಗಿವೆ, ಅವರ ವಸ್ತುಗಳೆಲ್ಲವೂ ನಾಶವಾಗಿವೆ ಎಂಬ ಬಗ್ಗೆ ಅತೀವ ಸಂಕಟದಲ್ಲಿದ್ದಾರೆ. ಭವಿಷ್ಯವನ್ನು ಎದುರಿಸುವುದು ಹೇಗೆ ಎಂಬುದೀಗ ಅವರ ಬಹುದೊಡ್ಡ ಚಿಂತೆಯಾಗಿದೆ. ಈ ಜನಗಳ ಮರುವಸತಿಗೆ ಬೃಹತ್ ಪ್ರಮಾಣದಲ್ಲಿ ಸಂಪನ್ಮೂಲಗಳು ಬೇಕಾಗಿವೆ. ಆದ್ದರಿಂದಲೇ ತಕ್ಷಣವೇ ಹೆಚ್ಚಿನ ಕೇಂದ್ರೀಯ ನೆರವನ್ನು ಬಿಡುಗಡೆ ಮಾಡಬೇಕು ಎಂದು ಈ ವಿನಂತಿ.

ಲಕ್ಷಾಂತರ ಜನಗಳಿಗೆ ಹೊಸ ಮನೆಗಳನ್ನು ಕಟ್ಟಿಸಬೇಕಾಗಿದೆ. ಈ ಉದ್ದೇಶಕ್ಕಾಗಿ ಕೇಂದ್ರೀಯ ಯೋಜನೆಯಾದ ಪ್ರಧಾನ ಮಂತ್ರಿ ಆವಾಸ್ ಯೋಜನಾದಿಂದ ದೊಡ್ಡ ಪ್ರಮಾಣದಲ್ಲಿ ನಿಧಿಗಳನ್ನು ಬಿಡುಗಡೆ ಮಾಡಬೇಕಾಗಿದೆ. ಈ ವಿಷಯವನ್ನು ವಿಶ್ವಸಂಸ್ಥೆಯ ವಿವಿಧ ಅಂಗ ಸಂಸ್ಥೆಗಳೊಡನೆಯೂ ಪ್ರಸ್ತಾಪಿಸಿ ಹೊಸ ಮನೆಗಳನ್ನು ಕಟ್ಟಲು ನೆರವನ್ನು ಕೋರಬೇಕು ಎಂದು ಕೇಂದ್ರ ಸರಕಾರವನ್ನು ಆಗ್ರಹಿಸುತ್ತೇನೆ.

ಈ ಅಭೂತಪೂರ್ವ ನೆರೆಗಳು ರಾಜ್ಯದಲ್ಲಿ ಹತ್ತಾರು ನೂರು ಸೇತುವೆಗಳನ್ನು ಮತ್ತು ರಸ್ತೆಗಳನ್ನು ಧ್ವಂಸಗೊಳಿಸಿವೆ. ರಾಜ್ಯದ 41ರಲ್ಲಿ 40 ನದಿಗಳು ಉಕ್ಕಿ ಹರಿಯುತ್ತಿದ್ದು, ಪರಿಹಾರ ಮತ್ತು ಮರುವಸತಿ ಕೆಲಸಗಳಿಗೆ ಅನಿವಾರ್ಯವಾದ ಸಂಪರ್ಕ ಗಂಭೀರವಾಗಿ ಅಸ್ತವ್ಯಸ್ತಗೊಂಡಿದೆ. ಸಂಪರ್ಕ ಜಾಲಗಳನ್ನು ಮತ್ತೆ ಕಟ್ಟಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮತ್ತಿತರ ಕೇಂದ್ರ ಸರಕಾರೀ ಸಂಸ್ಥೆಗಳು ತಮ್ಮ ಸಂಪನ್ಮೂಲಗಳು ಮತ್ತು ಸಿಬ್ಬಂದಿಯನ್ನು ನಿಯೋಜಿಸುವಂತೆ ತಿಳಿಸಬೇಕು ಎಂದು ಆಗ್ರಹಿಸಲಾಗುತ್ತಿದೆ. ಇದರೊಂದಿಗೆ ಕಷ್ಟಕರ ಪರಿಸ್ಥಿತಿಗಳಲ್ಲಿ ರಸ್ತೆಗಳು ಮತ್ತು ಸೇತುವೆಗಳನ್ನು ಕಟ್ಟುವ ಸಮೃದ್ಧ ಅನುಭವಗಳಿರುವ ಭಾರತೀಯ ಸೇನೆಯ ಇಂಜಿನಿಯರಿಂಗ್ ತುಕಡಿಗಳು ಮತ್ತು ಗಡಿ ರಸ್ತೆಗಳ ಸಂಘಟನೆಯ ನೆರವು ಈ ನಿಟ್ಟಿನಲ್ಲಿ ರಾಜ್ಯ ಸರಕಾರದ ಪ್ರಯತ್ನಗಳಿಗೆ ಸಿಗುವಂತೆ ಮಾಡಬೇಕಾಗಿದೆ.

ನೆರೆ ನೀರು ಇಳಿಯುತ್ತಿದ್ದಂತೆ ಆರೋಗ್ಯ ಕುರಿತಂತೆ ಗಂಭೀರ ಆತಂಕಗಳು ಏಳುತ್ತವೆ. ಈ ಸನ್ನಿವೇಶವನ್ನು ಎದುರಿಸುವಲ್ಲಿ ರಾಜ್ಯ ಸರಕಾರಕ್ಕೆ ನೆರವಾಗಲು



ಅಲಪುಳದಲ್ಲಿ ನೆರೆ ಸಂತ್ರಸ್ತರೊಂದಿಗೆ

ಕೇಂದ್ರ ಸರಕಾರ ಸೇನಾ ವೈದ್ಯಕೀಯ ತುಕಡಿಗಳನ್ನು ರಾಜ್ಯ ಸರಕಾರ ನಿರ್ಧರಿಸುವ ಪ್ರದೇಶಗಳಲ್ಲಿ ನಿಯೋಜಿಸಬೇಕು ಮತ್ತು ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಂತಹ ಸಂಸ್ಥೆಗಳು ಪರಿಹಾರ ಒದಗಿಸಲು ಮತ್ತು ಸಾಂಕ್ರಾಮಿಕ ರೋಗಗಳು ಹರಡದಂತೆ ತಡೆಯಲು ವೈದ್ಯಕೀಯ ತಂಡಗಳನ್ನು ರಚಿಸುವಂತೆ ಕೋರಬೇಕಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ನೆರವಿಗಾಗಿ ಕೇಂದ್ರ ಸರಕಾರ ವಿಶ್ವ ಆರೋಗ್ಯ ಸಂಘಟನೆಯನ್ನು ಕೂಡ ಕೇಳಬಹುದು.

ಕೇರಳದ ಜನತೆ ಪ್ರಸಕ್ತ ಸವಾಲುಗಳನ್ನು ಎದುರಿಸುವಲ್ಲಿ ಅದಮ್ಯ ಸ್ಫೂರ್ತಿ ಮತ್ತು ಸೌಹಾರ್ದವನ್ನು ಪ್ರದರ್ಶಿಸಿದ್ದಾರೆ. ವಿವಿಧೆಡೆಗಳಿಂದ ಹಣ ಮತ್ತು ಸಾಮಗ್ರಿಗಳ ದೇಣಿಗೆಗಳು ದೊಡ್ಡ ಪ್ರಮಾಣದಲ್ಲಿ ಬರುತ್ತಿವೆ. ವಿವಿಧ ದೇಶಗಳಲ್ಲಿನ ಮಲೆಯಾಳಿ ಜನಗಳ ಸಂಘಟನೆಗಳು ವೈದ್ಯಕೀಯ ಸಾಧನಗಳನ್ನು ಕಳಿಸುತ್ತಿದ್ದಾರೆ. ಇವು ತುರ್ತು ಪರಿಹಾರ ಮತ್ತು ಮರುವಸತಿಗಾಗಿ ಬರುತ್ತಿರುವುದರಿಂದಾಗಿ ಇವುಗಳ ಮೇಲಿನ ಸುಂಕಗಳಿಂದ ವಿನಾಯ್ತಿ ನೀಡಬೇಕು ಎಂದು ನಾನು ಕೋರುತ್ತೇನೆ.

ಸಂಸತ್ತಿನಲ್ಲಿ ಜಿಎಸ್‌ಟಿ ಮಸೂದೆಯ ಮೇಲಿನ ಚರ್ಚೆಯಲ್ಲಿ ನಾನು ಇಂತಹ ನೈಸರ್ಗಿಕ ವಿಪತ್ತುಗಳನ್ನು ಎದುರಿಸಲು ಬೇಕಾದ ಸಂಪನ್ಮೂಲಗಳನ್ನು ರಾಜ್ಯಗಳು ಹೇಗೆ ಸಂಗ್ರಹಿಸುವುದು ಎಂಬ ಬಗ್ಗೆ ಆತಂಕಗಳನ್ನು ಎತ್ತಿದ್ದೆ ಎಂಬುದು ನಿಮಗೆ ನೆನಪಿರಬಹುದು. ಆಗ ಕೇಂದ್ರ ಸರಕಾರ ಅಂತಹ ಸಂದರ್ಭಗಳು ಬಂದಾಗ ಅಂತಹ ಅಂಶಗಳನ್ನು ಒದಗಿಸಲಾಗುವುದು ಎಂದು ಆಶ್ವಾಸನೆ ನೀಡಿತ್ತು. ಅಂತಹ ಅಂಶಗಳನ್ನು ಒದಗಿಸಲಿಲ್ಲವಾದರೂ, ಈಗ ಸರಕಾರ ಸದನದಲ್ಲಿ ನೀಡಿರುವ ಆಶ್ವಾಸನೆಯನ್ನು ಈಡೇರಿಸುವ ಸಮಯ ಬಂದಿದೆ. ಕೇರಳದ ರಾಜ್ಯ ಸರಕಾರ ಸಂಬಂಧಪಟ್ಟ ಜಿಎಸ್‌ಟಿ ಅಂಶಗಳನ್ನು ಸಡಿಲಗೊಳಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಅವಕಾಶ ಒದಗಿಸಬೇಕು.

ಕೇರಳದ ಮುಖ್ಯಮಂತ್ರಿಗಳು ರಕ್ಷಣಾ ಕಾರ್ಯಾಚರಣೆಯ ಮೊದಲ ಘಟ್ಟ ಹೆಚ್ಚು–ಕಡಿಮೆ ಪೂರ್ಣಗೊಂಡಿದೆ ಎಂದು ಪ್ರಕಟಿಸಿದ್ದಾರೆ. ಈಗ ಮರುವಸತಿಯ ಮುಂದಿನ ಘಟ್ಟದ ಸಮಸ್ಯೆಗಳು ಬರುತ್ತವೆ; ಸಂಪರ್ಕ ಕೊಂಡಿಗಳನ್ನು ಮತ್ತೆ ಸ್ಥಾಪಿಸುವುದು ಮತ್ತು ಆರೋಗ್ಯಕ್ಕೆ ಬರಬಹುದಾದ ಅಪಾಯಗಳನ್ನು ಮೀರಿ ನಿಲ್ಲುವುದು ಮುಂತಾದವು.

ಈ ವಿಷಯಗಳ ಬಗ್ಗೆ ನಾನು ಮುಂದಿಟ್ಟಿರುವ ಪ್ರಸ್ತಾವಗಳನ್ನು ಅವಕ್ಕೆ ಸಲ್ಲಬೇಕಾದ ಗಂಭೀರತೆಯಿಂದ ಪರಿಶೀಲಿಸಬೇಕು ಎಂದು ವಿನಂತಿಸುತ್ತೇನೆ. ಮಾನವೀಯ ಪರಿಶೀಲನೆಗಳೊಂದಿಗೆ ಈ ಕ್ರಮಗಳನ್ನು ಅಗತ್ಯ ತುರ್ತಿನಿಂದ ಜಾರಿಗೊಳಿಸಬೇಕು ಎಂದು ತಮ್ಮನ್ನು ಆಗ್ರಹಿಸುತ್ತಿದ್ದೇನೆ.

ನಿಮ್ಮ ವಿಶ್ವಾಸಿ
ಸೀತಾರಾಮ್ ಯೆಚುರಿ
ಪ್ರಧಾನ ಕಾರ್ಯದರ್ಶಿ

ಶಿಕ್ಷಣ ವಂಚಿತ ಆದಿವಾಸಿ ರಾಷ್ಟ್ರೀಯ ಸಮಾವೇಶ

ಆದಿವಾಸಿ ಜನಗಳನ್ನು ಶಿಕ್ಷಣದಿಂದ ವಂಚಿತರಾಗಿಸುವ ಬಗ್ಗೆ ಒಂದು ರಾಷ್ಟ್ರೀಯ ಸಮಾವೇಶ ನವದೆಹಲಿಯಲ್ಲಿ ಆಗಸ್ಟ್ 18ರಂದು ನಡೆಯಿತು. ಆದಿವಾಸಿ ಅಧಿಕಾರ್ ರಾಷ್ಟ್ರೀಯ ಮಂಚ್(ಎಎಆರ್‌ಎಂ) ಎಸ್‌ಎಫ್‌ಐ ಮತ್ತು ಆದಿವಾಸಿ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರ (ಸಿಎಆರ್‌ಡಿ) ಇದನ್ನು ಜಂಟಿಯಾಗಿ ಸಂಘಟಿಸಿದ್ದವು. 117 ಆದಿವಾಸಿ ವಿದ್ಯಾರ್ಥಿಗಳು, ಹಲವು ಆದಿವಾಸಿ ಶಿಕ್ಷಕರು, ಪಾಲಕರು ಸೇರಿದಂತೆ 14ರಾಜ್ಯಗಳಿಂದ ಒಟ್ಟು 224 ಮಂದಿ ಭಾಗವಹಿಸಿದರು. ಇದು ಆದಿವಾಸಿ ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪಾಲಕರನ್ನು ಒಂದೇ ವೇದಿಕೆಗೆ ತಂದ ಮೊದಲ ರಾಷ್ಟ್ರೀಯ ಸಮಾವೇಶವಾಗಿತ್ತು. ಎಲ್ಲ ಮಟ್ಟಗಳಲ್ಲೂ ಆದಿವಾಸಿ ವಿದ್ಯಾರ್ಥಿಗಳಿಗೆ ಶಿಕ್ಷಣದ ಹಕ್ಕನ್ನು ಲಭ್ಯಗೊಳಿಸಲು ಒಂದು ಜಂಟಿ ಆಂದೋಲನವನ್ನು ಕಟ್ಟುವುದು ಮತ್ತು ಈ ಆಂದೋಲನವನ್ನು ಆದಿವಾಸಿಗಳು ವಾಸಿಸುವ ಹಳ್ಳಿಗಳಿಂದ ಆರಂಭಿಸಿ, ಬ್ಲಾಕ್, ಜಿಲ್ಲಾ ಮತ್ತು ರಾಜ್ಯ ಮಟ್ಟದ ವರೆಗೆ ಕಟ್ಟುವುದು ಇದರ ಉದ್ದೇಶವಾಗಿತ್ತು.


ಎಎಆರ್‌ಎಂನ ರಾಷ್ಟ್ರೀಯ ಸಂಯೋಜಕ ಜಿತೇಂದ್ರ ಚೌಧರಿ ಸಮಾವೇಶದ ನಿರ್ಣಯವನ್ನು ಮಂಡಿಸಿ ದರು. ಎಸ್‌ಎಫ್‌ಐ ಪ್ರಧಾನ ಕಾರ್ಯದರ್ಶಿ ವಿಕ್ರಂ ಸಿಂಗ್ ಅದನ್ನು ಅನುಮೋದಿಸಿ ಮಾತನಾಡಿದರು. 31 ಮಂದಿ ನಿರ್ಣಯದ ಮೇಲೆ ಮಾತಾಡುತ್ತ ತಮ್ಮ ಅನುಭವಗಳನ್ನು ಹಂಚಿಕೊಂಡರು.

ಸಮಾವೇಶದ ಸಮಾರೋಪ ದಲ್ಲಿ ಮಾತಾಡಿದ ಎಎಆರ್‌ಎಂ ಉಪಾಧ್ಯಕ್ಷರಾದ ಬೃಂದಾ ಕಾರಟ್ ಈ ಸಮಾವೇಶದಲ್ಲಿ ಬಿಂಬಿತವಾದ ನಿಲುವನ್ನು ಒತ್ತಿ ಹೇಳಿದರು, ಆದಿವಾಸಿಗಳನ್ನು ವಂಚಿಸುವುದರ ವಿರುದ್ಧ ಹೋರಾಟ ನಡೆಸಲು ಆದಿವಾದಿಗಳು ವಾಸಿಸುವ ಪ್ರದೇಶಗಳಲ್ಲಿ ಶಿಕ್ಷಣದ ಹಕ್ಕಿನ ಸಂದರ್ಭವನ್ನು ಅರಿತುಕೊಳ್ಳುವುದು ಅಗತ್ಯ ಎಂದು ಹೇಳಿದರು.





ದೇಶದ ಹಿರಿಯ ಮತ್ತು ಪ್ರತಿಷ್ಠಿತ ಪತ್ರಕರ್ತ



ಕುಲದೀಪ್ ನಯ್ಯರ್

ಆಗಸ್ಟ್ 23ರಂದು ನಿಧನರಾಗಿದ್ದಾರೆ. ಅವರಿಗೆ 95 ವರ್ಷ ವಾಗಿತ್ತು. 1975ರಲ್ಲಿ ತುರ್ತು ಪರಿಸ್ಥಿತಿ ಹೇರಿದಾಗ ದಿ ಸ್ಟೇಟ್ಸ್‌ಮನ್' ಪತ್ರಿಕೆಯ ಸಂಪಾದಕರಾಗಿದ್ದ ಅವರು ಅದನ್ನು ವಿರೋಧಿಸಿ ಬಂಧಿತರಾಗಿದ್ದರು. ಕಳೆದ ಕೆಲವು ವರ್ಷಗಳಿಂದ ಕನ್ನಡವೂ ಸೇರಿದಂತೆ ಸುಮಾರು 80 ಪತ್ರಿಕೆಗಳಲ್ಲಿ ಅವರ ಅಂಕಣ ಬರಹಗಳು ಪ್ರಕಟವಾಗುತ್ತಿದ್ದವು.

ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಕುಲದೀಪ್ ನಯ್ಯರ್ ಪ್ರಜಾಪ್ರಭುತ್ವ ಹಕ್ಕುಗಳ, ನಾಗರಿಕ ಸ್ವಾತಂತ್ರ್ಯದ ಪ್ರತಿಪಾದಕರಾಗಿದ್ದು, ಅದಕ್ಕೆ ಸಂಬಂಧಿಸಿದ ಹೋರಾಟಗಳಲ್ಲಿ ಮುಂಚೂಣಿಯಲ್ಲಿ ಇದ್ದವರು ಎಂದು ನೆನಪಿಸಿಕೊಂಡಿದ್ದಾರೆ. ಭಾರತ ಮತ್ತು ಪಾಕಿಸ್ತಾನದ ಜನಗಳ ನಡುವೆ ಸಂಬಂಧಗಳ ಪ್ರತಿಪಾದನೆ ಅವರ ವಿಶೇಷತೆಯಾಗಿತ್ತು. ಪ್ರಸಕ್ತ ಸಮರಗಳಲ್ಲಿ ಅವರ ಹಾಜರಿ ಒಂದು ಶಕ್ತಿಯ ಮೂಲವಾಗಬಹುದಿತ್ತು ಎಂದು ಯೆಚುರಿ ಹೇಳಿದ್ದಾರೆ.

ಕೊಡಗು: ಅಭೂತಪೂರ್ವ ಪ್ರಕೋಪದಿಂದ ಪಾಠ ಕಲಿಯೋಣ


ಸಂಪಾದಕೀಯ

ಕೊಡಗು ಮತ್ತು ಕೇರಳಗಳಿಗೆ ಅಭೂತಪೂರ್ವ ರೀತಿಯಲ್ಲಿ ಅಪ್ಪಳಿಸಿದ ಮಳೆ, ನೆರೆ, ಭೂಕುಸಿತಗಳ ಸರಣಿ ಅಪಾರ ಹಾನಿ ಮಾಡಿದೆ. ಸುಮಾರು ಒಂದು ಶತಮಾನದಲ್ಲಿ ಇಂತಹ ಪ್ರಕೋಪ ಕಂಡದ್ದಿಲ್ಲ ಎಂದು ಹೇಳಲಾಗಿದೆ. ಕೊಡಗಿನ ಮಡಿಕೇರಿ ಮತ್ತು ಕುಶಾಲನಗರ ತಾಲೂಕುಗಳು, ಭಾಗಶಃ ಹಾಸನದ ಅರಕಲಗೂಡು ಮತ್ತು ಸಕಲೇಶಪುರ ತಾಲೂಕಿನ ಕೆಲವು ಹೋಬಳಿಗಳು ಸಂಕಷ್ಟಕ್ಕೊಳಗಾದ ಪ್ರದೇಶಗಳು. ಕೊಡಗು ಜಿಲ್ಲೆ ತೀವ್ರವಾಗಿ ಸಂಕಷ್ಟಗೊಳಗಾದ ಪ್ರದೇಶ. ಅಗಸ್ಟ್ 23ರ ಹೊತ್ತಿಗೆ 17 ಜನ ಸತ್ತಿದ್ದಾರೆ. ಸುಮಾರು 50 ಸಾವಿರ ಜನ ಸಂಕಷ್ಟಕ್ಕೊಳಗಾಗಿದ್ದಾರೆ. ಮನೆ ಕಳೆದುಕೊಂಡು ಸಂಕಷ್ಟಕ್ಕೊಳಗಾದ ಪ್ರದೇಶಗಳಲ್ಲಿದ್ದ ಸುಮಾರು 6 ಸಾವಿರ ಜನರನ್ನು ಸುಮಾರು 50 ನಿರಾಶ್ರಿತರ ಕ್ಯಾಂಪುಗಳಿಗೆ ಸಾಗಿಸಬೇಕಾಯಿತು. ಕರಾವಳಿಯ ದ.ಕ, ಉಡುಪಿ ಜಿಲ್ಲೆಗಳಿಂದ ಕೊಡಗು ಚಿಕ್ಕಮಗಳೂರು, ಹಾಸನ, ಶಿವಮೊಗ್ಗ ಜಿಲ್ಲೆಗಳಿಗೆ ಸಂಪರ್ಕ ಕಲ್ಪಿಸುವ ಹಲವು ಹೆದ್ದಾರಿಗಳು ಹಲವು ಕಡೆ ಭೂಕುಸಿತದಿಂದ ಬಂದಾಗಿವೆ. ರೈಲು ಹಳಿಗಳೂ ಹಲವು ಕಡೆ ಹಾಳಾಗಿದ್ದು ರೈಲು ಸಂಚಾರ ಸಹ ಕಡಿತಗೊಂಡಿದೆ. ಚಾರ್ಮಾಡಿ, ಶಿರಾಡಿ, ಸಂಪಾಜೆ, ಆಗುಂಬೆ ಮುಂತಾದ ಘಟ್ಟದ ಹಾದಿಗಳ ಉದ್ದಕ್ಕೂ ಹಲವು ಕಡೆ ಕುಸಿತಗಳನ್ನು ಕಂಡಿದೆ. ಕೊಡಗಿಗೆ ಸಂಪರ್ಕ ಕಲ್ಪಿಸುವ 125 ಕಿ.ಮಿ. ನಷ್ಟು ಉದ್ದದ ರಸ್ತೆ ಹಲವು ಕಡೆ ಒಡೆದು ಹೋಗಿದ್ದು ಪುನಃ ಮಾಡಬೇಕಾಗಿದೆ. ಹಲವು ಗುಡ್ಡಗಳು, ರಸ್ತೆಗಳು, ಊರುಗಳು ಮಾಯವಾಗಿವೆ. ಕೊಡಗು ಒಂದರಲ್ಲೇ ಸುಮಾರು 845 ಮನೆಗಳು ನಾಶವಾಗಿವೆ. ಹಲವಾರು ಕಾಫಿ, ಯಾಲಕ್ಕಿ, ಮೆಣಸು ತೋಟಗಳು ಪೂರ್ಣವಾಗಿ ಭೂಕುಸಿತದಲ್ಲಿ ಮಾಯವಾಗಿವೆ. ಹಲವಾರು ರೆಸಾರ್ಟುಗಳು, ಹೋಂ ಸ್ಟೇಗಳು ನಾಶವಾಗಿವೆ. ಹಲವು ಕಾಲುದಾರಿಗಳು, ಸಣ್ಣ ದೊಡ್ಡ ಸೇತುವೆಗಳು ನಾಶವಾಗಿವೆ. ಸಂತ್ರಸ್ತ ಪ್ರದೇಶಗಳಲ್ಲಿ ಬಹುತೇಕ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಕೊಡಗಿನಲ್ಲಿ 3500 ವಿದ್ಯುತ್ ಕಂಬಗಳು, 300 ಟ್ರಾನ್ಸ್ ಫಾರ್ಮರುಗಳ ಹಾನಿಯಾಗಿದ್ದು, 35–40 ಕಿ.ಮಿ. ವಿದ್ಯುತ್ ಮಾರ್ಗಕ್ಕೆ ಹಾನಿಯಾಗಿದೆ.



ಹೆಚ್ಚಿನ ಹಾನಿ ತೀವ್ರ ಮಳೆಯಿಂದುಂಟಾದ ನೆರೆಗಿಂತ ಭೂಕುಸಿತಗಳಿಂದ ಹೆಚ್ಚಾಗಿ ಆಗಿದೆ. ಇದು ಪರೋಕ್ಷವಾಗಿ ಸತತ ಮಳೆಯಿಂದಾಗಿದ್ದು ಎಂಬುದು ಊಹೆಯಾಗಿದ್ದರೂ ಖಚಿತವಾಗಿಲ್ಲ. ಈವರೆಗಿನ ಹಂತ ಜನರನ್ನು ಸಂಕಷ್ಟಗೊಳಗಾದ ಪ್ರದೇಶಗಳಿಂದ ರಕ್ಷಿಸಿ ನಿರಾಶ್ರಿತರ ಕ್ಯಾಂಪುಗಳಿಗೆ ಸಾಗಿಸಿ ಅವರಿಗೆ ಆಹಾರ, ಚಳಿ–ಮಳೆಗಳಿಂದ ರಕ್ಷಣೆ, ಬಟ್ಟೆ ಬರೆ, ಆರೋಗ್ಯ ಸೇವೆಗಳನ್ನು ಒದಗಿಸುವುದು. ಈ ವರೆಗಿನ ಈ ರಕ್ಷಣಾ ಕಾರ್ಯ ತಕ್ಕ ಮಟ್ಟಿಗೆ ಸರಿಯಾಗಿಯೇ ನಡೆದಿದೆ. ಅಗತ್ಯವಿದ್ದಷ್ಟು ಸೇನಾಪಡೆ, ನೌಕಾಪಡೆ, ಎನ್.ಡಿ.ಆರ್.ಎಫ್., ಅಗ್ನಿಶಾಮಕ ಸಿಬ್ಬಂದಿಗಳು ಮತ್ತು ಅಗತ್ಯ ರಕ್ಷಣಾ ಉಪಕರಣಗಳ ಲಭ್ಯತೆಯಲ್ಲಿ ಕೊರತೆಯಾಗಿಲ್ಲ. ನಿರಾಶ್ರಿತರ ಕ್ಯಾಂಪುಗಳಿಗೆ ಆಹಾರ, ಔಷಧಿ ಮತ್ತಿತರ ಅಗತ್ಯ ಸಾಮಗ್ರಿಗಳ ಪೂರೈಕೆಯಲ್ಲಿ ದೊಡ್ಡ ಕೊರತೆಗಳು ಕಂಡಿಲ್ಲ. ಸರಕಾರ ಅಲ್ಲದೆ ರಾಜ್ಯದ ಹಲವು ಕಡೆಯಿಂದ ವ್ಯಕ್ತಿಗಳು, ಸಂಘಟನೆಗಳಿಂದ ನೆರವು ಹರಿದು ಬಂದಿದೆ. ನೂರಾರು ಸ್ವಯಂಸೇವಕರು ಸಹ ಸಂಕಷ್ಟಗೊಳಗಾದ ಪ್ರದೇಶಗಳಿಗೆ ತೆರಳಿ ರಕ್ಷಣಾ ಮತ್ತು ಆಡಳಿತದ ಸಿಬ್ಬಂದಿಗೆ ನೆರವು ನೀಡುತ್ತಿದ್ದಾರೆ.

ಇನ್ನೂ ಮುಂದಿನ ಹಂತದ ಸವಾಲುಗಳು ಅನೇಕ ಮತ್ತು ಕಠಿಣವಾದದ್ದು. ಮನೆ ಕಳೆದುಕೊಂಡವರಲ್ಲಿ ಕೆಲವರು ನಿರಾಶ್ರಿತರ ಕ್ಯಾಂಪುಗಳಿಂದ ನೆಂಟರ ಮನೆಗಳಿಗೆ ತೆರಳುತ್ತಿದ್ದಾರೆ. ಇನ್ನೂ ಕೆಲವರು ತಮ್ಮ ಮನೆಗಳ ಸ್ಥಿತಿ ಏನು ಎಂದು ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಹಲವಾರು, ಊರುಗಳು, ರಸ್ತೆಗಳು, ಕಾಲುದಾರಿಗಳು, ಕಾಲು ಸೇತುವೆಗಳು ಭೂಕುಸಿತದಿಂದ ಮಾಯವಾಗಿರುವುದರಿಂದ, ಇನ್ನೂ ಹಲವು ಪ್ರದೇಶಗಳಿಗೆ ಸಂಪರ್ಕ ಹಾದಿ ಕಲ್ಪಿಸುವುದು ಸಾಧ್ಯವಾಗಿಲ್ಲ. ಹೆದ್ದಾರಿಗಳನ್ನು, ಮುಖ್ಯ ರಸ್ತೆಗಳ ರಿಪೇರಿ, ಅಥವಾ ತಾತ್ಕಾಲಿಕ ಹಾದಿಗಳ ನಿರ್ಮಾಣ ಅತ್ಯಂತ ಜರೂರಿನದ್ದು. ಹಲವು ಜನರು ತಮ್ಮ ಹಿಂದಿನ ಊರುಗಳಿಗೆ ಮರಳಲು ಬಯಸಿದ್ದು, ಆ ಪ್ರದೇಶಗಳು ಮತ್ತೆ ಭೂಕುಸಿತಕ್ಕೆ ಒಳಗಾಗಬಹುದೇ, ವಾಸ ಯೋಗ್ಯವೇ ಎಂದು ಭೂಗರ್ಭಶಾಸ್ತ್ರಜ್ಞರು ಅಧ್ಯಯನ ನಡೆಸಿ ನಿರ್ಧರಿಸಬೇಕಾಗಿದೆ. ಇದಕ್ಕೆ ಮಳೆ ನಿಲ್ಲುವುದು ಮತ್ತು ತಾತ್ಕಾಲಿಕ ಹಾದಿಗಳಾದರೂ ಆಗಬೇಕಾದ್ದು ಅಗತ್ಯ. ಹಲವಾರು ಎಸ್ಟೇಟುಗಳು, ಗದ್ದೆ ತೋಟಗಳು, ರೆಸಾರ್ಟು, ಹೋಂ ಸ್ಟೇಗಳು ನಾಶವಾಗಿದ್ದು ಜೀವನೋಪಾಯದ ಪ್ರಶ್ನೆಯೂ ಭೂತಾಕಾರವಾಗಿ ಎದ್ದಿದೆ. ಎಸ್ಟೇಟು ಕಾರ್ಮಿಕರಲ್ಲಿ ಹಲವರು ವಲಸೆ ಕಾರ್ಮಿಕರಿದ್ದು ಅವರು ತಮ್ಮ ಊರುಗಳಿಗೆ ಮರಳುವುದೇ ಇರುವುದೇ ಎಂಬ ಪ್ರಶ್ನೆ ಎದುರಾಗಿದೆ. ಇವೆಲ್ಲದಕ್ಕೂ 3–4 ತಿಂಗಳುಗಳು ಬೇಕಾಗಿದ್ದು ಅಷ್ಟರ ವರೆಗೆ ಅಗತ್ಯವಿದ್ದವರಿಗೆ ನಿರಾಶ್ರಿತರ ಕ್ಯಾಂಪುಗಳನ್ನು ನಡೆಸಬೇಕಾಗುತ್ತದೆ. ಈ ನಡುವೆ ವಿದ್ಯುತ್ ಹಾದಿಗಳನ್ನು ಪುನಃ ಹಾಕಿ ವಿದ್ಯುತ್ ಸಂಪರ್ಕವನ್ನು ಪುನಃ ಸ್ಥಾಪಿಸುವ ಕೆಲಸ ಯುದ್ಧೋಪಾದಿಯಲ್ಲಿ ನಡೆಸಬೇಕಾಗಿದೆ. ಹೆದ್ದಾರಿ, ರೈಲು ಸಂಪರ್ಕ ಪುನಃ ಸ್ಥಾಪಿಸುವ ಕೆಲಸ ಸಹ ತುರ್ತಿನದೇ. ಈ ನಡುವೆ ಮಳೆ ಮುಂದುವರೆಯುತ್ತಿರುವುದರಿಂದ ಭೂಕುಸಿತ, ನೆರೆ, ಮನೆ ನಾಶಗಳ ಬಗ್ಗೆ ಎಚ್ಚರವಹಿಸಬೇಕಾಗಿದೆ. ಹವಾಮಾನ ಇಲಾಖೆ ಭೂಕಂಪನ, ವಿಪರೀತ ಮಳೆ ಇತ್ಯಾದಿಗಳ ಮುನ್ಸೂಚನೆ ಬಗ್ಗೆ ಎಚ್ಚರಿಕೆ ವಹಿಸಬೇಕಾಗಿದೆ. ಒಟ್ಟು ಆಸ್ತಿಪಾಸ್ತಿ ನಷ್ಟ ಪರಿಹಾರ, ಮೂಲಸೌಕರ್ಯಗಳ ಪುನರ್ರಚನೆಗೆ ಅಂದಾಜು ವೆಚ್ಚ ಇನ್ನಷ್ಟೇ ಹಾಕಬೇಕಾಗಿದೆ. ಸುಮಾರು 2000–3000 ಕೋಟಿ ರೂ. ಬೇಕಾಗಬಹುದು ಎಂದು ಹೇಳಲಾಗಿದೆ. ಈ ಬಗ್ಗೆ ಯೋಜನೆಗಳನ್ನು ರೂಪಿಸಬೇಕಾಗಿದೆ. ನಾಶವಾದ ಆರ್ಥಿಕ ಚಟುವಟಿಕೆಗಳ ಆರಂಭ ಯಾವಾಗ ಹೇಗೆ ಎಷ್ಟು ಎಂಬುದರ ಬಗ್ಗೆ ನಿರ್ಣಯಿಸಬೇಕಾಗಿದೆ. ಇಲ್ಲವೇ ಸಂತ್ರಸ್ತರಿಗೆ ಇತರ ಜೀವನೋಪಾಯ ಕಲ್ಪಿಸುವ ಯೋಜನೆ ಆಗಬೇಕಾಗಿದೆ.



ಈ ಮಹಾ ನೆರೆ ಮತ್ತು ಸರಣಿ ಭೂಕುಸಿತಗಳಿಗೆ ಏನು ಕಾರಣ ಎಂಬುದರ ಬಗ್ಗೆ ವೈಜ್ಞಾನಿಕ ಅಧ್ಯಯನ ವಿಶ್ಲೇಷಣೆ ಅಗತ್ಯವಾಗಿದೆ. ಇದು ಹವಾಮಾನ ಬದಲಾವಣೆಯ ಕಾರಣದಿಂದ ನಡಯುತ್ತಿರುವ ಅತಿವೃಷ್ಟಿ ಮತ್ತಿತರ ವೈಪರೀತ್ಯ ಮಾತ್ರವೇ ಎಂದು ತಿಳಿಯಬೇಕಾಗಿದೆ. ಇದು ಎಷ್ಟರ ಮಟ್ಟಿಗೆ ಪ್ರಾಕೃತಿಕ ಪ್ರಕೋಪ ಮತ್ತು ಇಂತಹ ವಿಪತ್ತಿಗೆ ಎಷ್ಟರ ಮಟ್ಟಿಗೆ ಪರಿಸರ–ವಿರೋಧಿ ಮಾನವ ಚಟುವಟಿಕೆ ಕಾರಣ ಎಂಬುದರ ಬಗ್ಗೆ ಈಗಾಗಲೇ ಚರ್ಚೆ ಆರಂಭವಾಗಿದೆ. ಅಗಸ್ಟ್ 2–3 ನೇ ವಾರಗಳಲ್ಲಿ ಬಿದ್ದ ಮಹಾಮಳೆ ಸಾಮಾನ್ಯವಾಗಿದ್ದರೂ ಕೇರಳ ಮತ್ತು ಕೊಡಗಿನ ವಿಕೋಪಗಳಿಗೆ ವ್ಯತ್ಯಾಸಗಳೂ ಇವೆ. ಕೇರಳದಲ್ಲಿ ಇರುವ ಸರಣಿ ಆಣೆಕಟ್ಟುಗಳು ಮತ್ತು ಯಾವ ಹಂತದಲ್ಲಿ ಎಷ್ಟು ನೀರು ಬಿಡುಗಡೆ ಮಾಡಬೇಕಾಗಿತ್ತು ಇತ್ಯಾದಿ ಒಂದು ವ್ಯತ್ಯಾಸ. ಕೊಡಗಿನಲ್ಲಿ ಬಿದ್ದದ್ದು ಅಭೂತಪೂರ್ವ ಮಹಾಮಳೆಯೇ, ಅಥವಾ ಪಶ್ಚಿಮ ಘಟ್ಟದಲ್ಲಿ ವ್ಯಾಪಕ ಅರಣ್ಯನಾಶದಿಂದ ನೀರು ಇಂಗುವ ಮಹಾಮಳೆಯ ನೀರಿನ ಪ್ರವಾಹದ ವಿರುದ್ಧವೂ ಭೂಪದರವನ್ನು ಹಿಡಿದಿಟ್ಟುಕೊಳ್ಳುವ ಕ್ಷಮತೆ ತೀವ್ರವಾಗಿ ಕಡಿಮೆಯಾಗಿರುವುದು ಕಾರಣವೇ ಎಂಬುದೂ ವಿಶ್ಲೇಷಣೆಗೆ ಒಳಪಡಬೇಕಾಗಿದೆ. ದಟ್ಟ ಮರಗಳು ಇದ್ದ ಕಡೆ ಭೂಕುಸಿತವಾಗಿಲ್ಲ. ಅರಣ್ಯ ನಾಶ ಮಾಡಿ ವ್ಯಾಪಕವಾಗಿ ಕಟ್ಟಡ ನಿರ್ಮಾಣವಾದಲ್ಲಿ, ರಸ್ತೆಗಳ ಸುತ್ತ ಮುತ್ತವೇ ಹೆಚ್ಚಿನ ಭೂಕುಸಿತವಾಗಿದೆ ಎನ್ನಲಾಗಿದೆ.

ಬಹಳ ಹಿಂದೆನೇ ವೀರಪ್ಪ ಮೊಯ್ಲಿ ಮುಖ್ಯಮಂತ್ರಿಗಳಾಗಿದ್ದಾಗ ನೇಮಿಸಿದ್ದ ಡಾ ಯಲ್ಲಪ್ಪ ರೆಡ್ಡಿ ಸಮಿತಿ ನೀಡಿದ ವರದಿಯಲ್ಲಿ ಟಿಂಬರ್ ಮಾಫಿಯಾ ವ್ಯಾಪಕವಾಗಿ ಪಶ್ಚಿಮ ಘಟ್ಟದಲ್ಲಿ ಅರಣ್ಯ ನಾಶ ಮಾಡುತ್ತಿದ್ದು ಅದಕ್ಕೆ ತಡೆ ಹಾಕದಿದ್ದರೆ ಹವಾಮಾನ ವೈಪರೀತ್ಯ ಸಂಭವಿಸಬಹುದು ಎಂದು ಎಚ್ಚರಿಸಿದ್ದರು. ಅದೇ ರೀತಿ ಅರಣ್ಯವನ್ನು ಒತ್ತುವರಿ ಮಾಡಿ ಕಾಫಿ ಮುಂತಾದ ಹಣದ ಬೆಳೆಗಳ ಎಸ್ಟೇಟುಗಳನ್ನು, ಅಥವಾ ಸ್ಥಳೀಯವಲ್ಲದ ಸಸ್ಯಪ್ರಕಾರಗಳ ತೋಟಗಳನ್ನು ಮಾಡುವುದು ಹಾನಿಕಾರಕ. ಕೊಡಗು ಜಿಲ್ಲೆಯಲ್ಲಿ 10 ವರ್ಷಗಳ ಅವಧಿಯಲ್ಲಿ (2005–15) 2800 ಎಕರೆ ಅರಣ್ಯ ಭೂಮಿಯನ್ನು ವಾಣಿಜ್ಯ ಉದ್ದೇಶಕ್ಕೆ ಪರಿವರ್ತನೆ ಮಾಡಲಾಗಿದೆ. ಮೂರು ಪ್ರಮುಖ ವ್ಯಕ್ತಿಗಳು 2600 ಎಕರೆಗಳಷ್ಟು ಕಾಫಿ ತೋಟ ಮಾಡಿಕೊಂಡಿದ್ದಾರೆ. ಇವಲ್ಲದೆ ರೆಸಾರ್ಟು, ಹೋಂ ಸ್ಟೇ ಹೆಸರಿನಲ್ಲಿ ಅರಣ್ಯದ ವ್ಯಾಪಕ ವಾಣಿಜ್ಯ ಬಳಕೆ ಆರಂಭವಾಗಿದ್ದು ಅದರ ಹಿಂದೆ ದೊಡ್ಡ ಲಾಬಿ ಇದೆ. ಪಶ್ಚಿಮ ಘಟ್ಟದಲ್ಲಿ ಪರಿಸರ ತಾಳುವ ಶಕ್ತಿ ಗಮನಿಸದೆ ಅವೈಜ್ಞಾನಿಕವಾಗಿ ವಾಣಿಜ್ಯ ಚಟುವಟಿಕೆ ವಿಸ್ತರಿಸಿದ್ದು ಪ್ರಾಕೃತಿಕ ಪ್ರಕೋಪಗಳಿಗೆ ಕಾರಣವಾಗಬಹುದು ಎಂದು ಐ.ಐ.ಎಸ್.ಸಿ. ಯ 2016ರ ವರದಿಯೊಂದು ಹೇಳಿತ್ತು. ಹಿಂದೆ ಮಾಧವ ಗಾಡ್ಗೀಳ ಮತ್ತು ಕಸ್ತೂರಿ ರಂಗನ್ ಸಮಿತಿ ವರದಿಯಲ್ಲಿ ಪಶ್ಚಿಮ ಘಟ್ಟದಲ್ಲಿ ಸೂಕ್ಮ ಪ್ರದೇಶಗಳ ಗುರುತಿಸುವಿಕೆಯನ್ನು ಪುನರ್ಮನನ ಮಾಡಬೇಕಾಗಿದೆ. ಈ ಎರಡು ಸಮಿತಿಗಳ ವರದಿಗಳು ಅರಣ್ಯವಾಸಿಗಳ ಮತ್ತು ಅದರ ಹತ್ತಿರ ವಾಸಿಸುವವರ ಕನಿಷ್ಟ ಅಗತ್ಯಗಳನ್ನು ಗಮನಿಸದೆ ಇದ್ದದ್ದು ಅದಕ್ಕೆ ಸಾರಾಸಗಟು ವಿರೋಧಕ್ಕೆ ಕಾರಣವಾಗಿತ್ತು. ಟಿಂಬರ್ ಮಾಫಿಯಾ, ರೆಸಾರ್ಟು ಕಾಫಿ ಎಸ್ಟೇಟ್ ಲಾಬಿಗಳ ಅತಿರೇಕಕ್ಕೆ ಅವಕಾಶ ಕೊಡದೆ, ಅರಣ್ಯವಾಸಿಗಳ ಹಕ್ಕುಗಳನ್ನು ಗಮನದಲ್ಲಿಟ್ಟುಕೊಂಡು ಅರಣ್ಯ ರಕ್ಷಣೆಯ ನೀತಿಯನ್ನು ಜಾಗರೂಕತೆಯಿಂದ ರೂಪಿಸಬೇಕಾಗಿದೆ. ಅದೇ ರೀತಿ ಕೇರಳದಲ್ಲಿ ಆದಷ್ಟು ವಿಪತ್ತು ಕರ್ನಾಟಕದ ಪಶ್ಚಿಮ ಘಟ್ಟದಲ್ಲಿ ಸಂಭವಿಸಲಿಲ್ಲ. ಅದು ಆಕಸ್ಮಿಕವೇ ಅಥವಾ ಅಂತಹ ವಿಪತ್ತು ಕರ್ನಾಟಕದಲ್ಲಿಯೂ ಸಂಭವಿಸಬಹುದೇ, ಹೌದಾದರೆ ಹೇಗೆ ಅದನ್ನು ತಡೆಯಬಹುದು ಎಂಬುದರ ಬಗ್ಗೆ ವಿಶ್ಲೇಷಣೆ ಬೇಕಾಗಿದೆ. ●

ಕನಿಷ್ಟ ಕೂಲಿಗಾಗಿ ಉಡುಪಿಯಲ್ಲಿ ಬೀಡಿ ಕಾರ್ಮಿಕರ ಪ್ರತಿಭಟನೆ

ಸಾವಿರ ಬೀಡಿಗೆ ರೂ.350 ಕೂಲಿ ನೀಡಬೇಕು. ಬೀಡಿ ಕಾರ್ಮಿಕರಿಗೆ ಗುರುತಿನ ಚೀಟಿ, ಪ್ರಾವಿಡೆಂಟ್ ಫಂಡ್, ಬೋನಸ್, ವಾರಕ್ಕೆ 6 ದಿನ ಕೆಲಸ, ಸಮಾನ ವೇತನ ಸೇರಿದಂತೆ ಹಲವು ಸೌಲಭ್ಯಗಳನ್ನು ನೀಡಬೇಕು. ಬಿಪಿಎಲ್ ಪಡಿತರ ಕಾರ್ಡು ಹಾಗೂ ಉಚಿತ ವಸತಿ ಯೋಜನೆಯನ್ನು ಜಾರಿಗೊಳಿಸಬೇಕು. ಇತ್ಯಾದಿ ಬೇಡಿಕೆಗಳನ್ನು ಮಂಡಿಸಿ, ಉಡುಪಿ ಜಿಲ್ಲೆಯ ಬೀಡಿ ಕಾರ್ಮಿಕರು ಉಡುಪಿ ಜಿಲ್ಲಾ ಬೀಡಿ ಕಾರ್ಮಿಕ ಫೆಡರೇಶನ್ (ಸಿಐಟಿಯು) ನೇತೃತ್ವದಲ್ಲಿ ಆಗಸ್ಟ್ 18ರಂದು ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ಸರಕಾರ ಕನಿಷ್ಟ ಕೂಲಿ ನೀಡುವಂತೆ ಬೀಡಿ ಕಂಪೆನಿಗಳ ಮಾಲಿಕರಿಗೆ ಆದೇಶ ನೀಡಿದೆ. ಸರಕಾರದ ಆದೇಶ ಎಪ್ರಿಲ್ 1 ರಿಂದ ಜಾರಿಯಾಗಬೇಕಾಗಿದ್ದು, ಅಲ್ಲಿಂದೀಚೆಗಿನ ಬಾಕಿ ಕನಿಷ್ಟ ಕೂಲಿಯನ್ನು ಮಾಲಕರು ಇನ್ನೂ ನೀಡಿರುವುದಿಲ್ಲ. ಮಾಲಿಕರು ತನ್ನ ಆದೇಶವನ್ನು ಜಾರಿಗೊಳಿಸುತ್ತಿಲ್ಲ ಎಂಬುದನ್ನು ಕಂಡೂ ಸರಕಾರ ಕಣ್ಮುಚ್ಚಿದೆ ಎಂಬುದಾಗಿ ಪ್ರತಿಭಟನಾಕಾರರು ಟೀಕಿಸಿದರು.

ಪ್ರತಿಭಟನೆಯನ್ನುದ್ದೇಶಿಸಿ ಜಿಲ್ಲಾ ಬೀಡಿ ಕಾರ್ಮಿಕ ಫೆಡರೇಶನಿನ ಅಧ್ಯಕ್ಷ ಮಹಾಬಲ ವಡೇರಹೋಬಳಿ ಮಾತನಾಡಿದರು. ಪ್ರತಿಭಟನೆಯಲ್ಲಿ ಸಿಐಟಿಯು ಮುಖಂಡರಾದ ವಿಶ್ವನಾಥ ರೈ, ಫೆಡರೇಶನ್ ಕಾರ್ಯದರ್ಶಿ ಉಮೇಶ್ ಕುಂದರ್, ಕೋಶಾಧಿಕಾರಿ ಕೆ.ಲಕ್ಷ್ಮಣ್ ಕಾರ್ಯಕಾರಿ ಸಮಿತಿ ಸದಸ್ಯರಾದ ಸಂಜೀವ, ಸುನೀತಾ ಶೆಟ್ಟಿ, ನಳಿನಿ, ಕವಿರಾಜ್, ಬಲ್ಕೀಸ್ ಬಾನು ಉಪಸ್ಥಿತರಿದ್ದರು.

ಪ್ರತಿಭಟನೆಗೂ ಮೊದಲು ನೂರಾರು ಬೀಡಿ ಕಾರ್ಮಿಕರು ಮಣಿಪಾಲದ ಟೈಗರ್ ವೃತ್ತದಿಂದ ಸಿಂಡಿಕೇಟ್ ಬ್ಯಾಂಕ್ ಮಾರ್ಗವಾಗಿ ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ ನಡೆಸಿದರು.





ಕೇರಳ ಪ್ರವಾಹ ಸಂತ್ರಸ್ತರಿಗೆ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿಯಿಂದ ನಿಧಿ ಸಂಗ್ರಹ:

ಎರಡು ವಾರ ಕೇರಳ ರಾಜ್ಯದಲ್ಲಿ ವಿಪರೀತ ಮಳೆ ಸುರಿದು, ಪ್ರವಾಹ ಉಂಟಾಗಿ, ಅನೇಕ ಸಾವುನೋವುಗಳು ಹಾಗೂ ಆಸ್ತಿ ಸೊತ್ತುಗಳು ನಾಶ ಹೊಂದಿರುವುದಕ್ಕೆ ಪರಿಹಾರ ಹಾಗೂ ನೆರವು ಒದಗಿಸಲು ಸಿಪಿಐ(ಎಂ) ಪಕ್ಷ ಸಮಿತಿಗಳು ದೇಶದ ಎಲ್ಲೆಡೆ ಮುಂದಾಗಿದ್ದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಪಕ್ಷದ ಜಿಲ್ಲಾ ಸಮಿತಿ ಬೀದಿ ಸಂಚಾರದ ಮೂಲಕ ದೇಣಿಗೆ ಹಾಗೂ ಆಹಾರ ಸಾಮಾಗ್ರಿಗಳನ್ನು ಸಂಗ್ರಹಿಸಿ, ಕೇರಳ ರಾಜ್ಯಕ್ಕೆ ಕಳುಹಿಸಿ ಕೊಡುವ ವ್ಯವಸ್ಥೆ ಮಾಡುತ್ತಿದೆ.

ಆಗಸ್ಟ್ 20ರ ಬೆಳಿಗ್ಗೆ ಮಂಗಳೂರಿನ ಜಿಲ್ಲಾಧಿಕಾರಿ ಕಚೇರಿ ಎದುರು ಸಹಾಯನಿಧಿ ಸಂಗ್ರಹ ಅಭಿಯಾನವನ್ನು ಹಿರಿಯ ಸಿಪಿಐ(ಎಂ) ಮುಖಂಡರಾದ ಕೆ.ಆರ್.ಶ್ರೀಯಾನ್ ಉದ್ಘಾಟಿಸಿ ಮಾತನಾಡಿದರು.

ಬಳಿಕ ಮಂಗಳೂರು ನಗರ ಕೇಂದ್ರದಲ್ಲಿ ವ್ಯಾಪಾರಿಗಳು ಹಾಗೂ ಜನರ ಮುಂದೆ ಕಾರ್ಯಕರ್ತರು ಗುಂಪುಗಳಲ್ಲಿ ಹೋಗಿ, ಹುಂಡಿಯಲ್ಲಿ ಹಣ ಸಂಗ್ರಹಿಸಿದರು. ಬಂದರು ಪ್ರದೇಶದ ವ್ಯಾಪಾರಿಗಳು ಅಕ್ಕಿ ಮತ್ತಿತರ ಆಹಾರ ದಾನ್ಯ ಚೀಲಗಳನ್ನು ಧಾರಾಳವಾಗಿ ನೀಡಿರುತ್ತಾರೆ.

ಎರಡು ದಿನಗಳ ಅವಧಿಯಲ್ಲಿ ಮಂಗಳೂರು ಸೇರಿದಂತೆ ಜಿಲ್ಲೆಯ ವಿವಿಧ ಕಡೆಗಳಲ್ಲಿ ನಿಧಿ ಸಂಗ್ರಹ ಹಾಗೂ ವಸ್ತು ರೂಪದ ಸಂಗ್ರಹಕ್ಕೆ ಕರೆ ನೀಡಲಾಗಿದ್ದು, ಜನತೆಯಿಂದ ವ್ಯಾಪಕ ಸ್ಪಂದನೆ ಬರುತ್ತಿದೆ. ಅಕ್ಕಿ, ಸಕ್ಕರೆ, ಎಣ್ಣೆ, ತೆಂಗಿನಕಾಯಿ ಸೇರಿದಂತೆ ಆಹಾರ ಸಾಮಾಗ್ರಿಗಳು, ಬಟ್ಟೆಬರೆಗಳು, ಶೈಕ್ಷಣಿಕ ಸಾಮಾಗ್ರಿಗಳು ಸಂಗ್ರಹವಾಗಿದ್ದು ಅದನ್ನು ವಾಹನದ ಮೂಲಕ ಕಾಸರಗೋಡು ಜಿಲ್ಲೆಗೆ ಸಾಗಿಸಲಾಯಿತು. ಅಲ್ಲಿನ ಜಿಲ್ಲಾಧಿಕಾರಿಗಳ ಮೂಲಕ ನೆರೆ ಸಂತ್ರಸ್ತರಿಗಾಗಿ ತೆರೆಯಲಾಗಿದ್ದ ವಸ್ತು ಸಂಗ್ರಹಣಾ ಕೇಂದ್ರಕ್ಕೆ ಮುಟ್ಟಿಸಲಾಯಿತು. ಅಲ್ಲಿನ ಉಸ್ತುವಾರಿಯಾದ ಕಾಸರಗೋಡು ತಾಹಶೀಲ್ದಾರರವರು ವಸ್ತುಗಳನ್ನು ಸ್ವೀಕರಿಸಿದರು. ದ.ಕ.ಜಿಲ್ಲೆಯಾದ್ಯಂತ ಸಂಗ್ರಹವಾಗಿದ್ದ ನಿಧಿಯನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಮೂಲಕ ಕೇರಳ ರಾಜ್ಯದ ಮುಖ್ಯಮಂತ್ರಿಗಳ ಪರಿಹಾರ ನಿಧಿ ಖಾತೆಗೆ ವರ್ಗಾಯಿಸಲಾಗಿದೆ.

ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸುನಿಲ್ ಕುಮಾರ್ ಬಜಾಲ್‌ರವರ ನೇತೃತ್ವದಲ್ಲಿ ಕಾಸರಗೋಡಿಗೆ ತೆರಳಿದ ನಿಯೋಗದಲ್ಲಿ ಡಿವೈಎಫ್ಐ ದ.ಕ.ಜಿಲ್ಲಾ ಕಾರ್ಯದರ್ಶಿ ಸಂತೋಷ್ ಕುಮಾರ್ ಬಜಾಲ್, ಸಿಪಿಐ(ಎಂ) ಮುಖಂಡರಾದ ಮಹಾಬಲ ದೆಪ್ಪೆಲಿಮಾರ್, ಸಂತೋಷ್ ಶಕ್ತಿನಗರ, ಅಶೋಕ್ ಸಾಲಿಯಾನ್, ಕಿಶೋರ್, ಡಿವೈಎಫ್ಐ ಮುಖಂಡರಾದ ದಿವ್ಯರಾಜ್, ಎಸ್ಎಫ್ಐ ಮುಖಂಡರಾದ ವಿಕಾಸ್ ಕುತ್ತಾರ್ ರವರು ಉಪಸ್ಥಿತರಿದ್ದರು.








ಬೆಂಗಳೂರಿನ ಯಂಗ್ ವರ್ಕರ್ಸ್ ಕಲೆಕ್ಟಿವ್ ಒಂದು ಲಾರಿಯಷ್ಟು ಅಗತ್ಯ ಸಾಮಗ್ರಿ ಸಂಗ್ರಹಿಸಿ ಕೇರಳಕ್ಕೆ ಕಳಿಸಿದರು.



ಸರ್ಕಾರಿ ಶಾಲೆಗಳ ವಿಲೀನ/ ಮುಚ್ಚವಿಕೆ ವಿರೋಧಿಸಿ ಬೆಂಗಳೂರಿನ ಮೈಸೂರು ಬ್ಯಾಂಕ್ ವೃತ್ತದಲ್ಲಿ ಎಸ್.ಎಫ್.ಐ., ಕೆವಿಎಸ್, ಎಐಡಿಎಸ್.ಒ. ಸಮಾನ ಶಿಕ್ಷಣಕ್ಕಾಗಿ ಜನಾಂದೋಲನ ಸಂಘಟನೆಗಳ ಸದಸ್ಯರು ಪ್ರತಿಭಟನೆ ನಡೆಸಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಮೂಲಕ ಆಯುಕ್ತರಿಗೆ ಮನವಿ ಸಲ್ಲಿಸಿದರು.

ಮಾತೆಂದರೆ ಇದು

ನಿಜ, ವಿಮರ್ಶೆಯ ಅಸ್ತ್ರವು ಅಸ್ತ್ರದ ವಿಮರ್ಶೆಗೆ ಬದಲಿಯಾಗದು, ಭೌತಿಕ ಶಕ್ತಿಯನ್ನು ಭೌತಿಕ ಶಕ್ತಿಯಿಂದಲೇ ಕಿತ್ತೆಸೆಯಬೇಕು; ಆದರೆ ತತ್ವವೊಂದು ಜನಸಮೂಹಗಳನ್ನು ಬಿಗಿಯಿತೆಂದರೆ ಅದು ಭೌತಿಕ ಶಕ್ತಿಯಾಗಿ ಬಿಡುತ್ತದೆ. ಒಂದು ತತ್ವ ಜನಸಮೂಹಗಳನ್ನು ಬಿಗಿಯಲು ಸಮರ್ಥವಾಗುವುದು ಅದು ವೈಯಕ್ತಿಕವಾಗಿ ತೋರಿಸಿಕೊಟ್ಟ ಕೂಡಲೇ, ಮತ್ತು ವೈಯಕ್ತಿಕವಾಗಿ ತೋರಿಸುವುದು, ಅದು ತೀವ್ರಗಾಮಿಯಾದ ಕೂಡಲೇ. ತೀವ್ರಗಾಮಿ ಯಾಗುವುದೆಂದರೆ, ವಿಷಯದ ಬೇರನ್ನು ಗ್ರಹಿಸುವುದು. ಆದರೆ ಮನುಷ್ಯನಿಗೆ, ಸ್ವತಃ ಮನುಷ್ಯನೇ ಬೇರು.



–ಕಾರ್ಲ್ ಮಾರ್ಕ್ಸ್

ನಾಳಿನ ಕಾರ್ಯಕ್ರಮಗಳು

‘ಸಂವಿಧಾನದ ಓದು’ ಕಾರ್ಯಾಗಾರ ಅಗಸ್ಟ್ 25, ಬೆಂಗಳೂರು
ಅಭಿಯಾನದ ಸಂಪನ್ಮೂಲ ವ್ಯಕ್ತಿಗಳಿಗೆ ಕಾರ್ಯಾಗಾರ ಸೆನೆಟ್ ಹಾಲ್, ಬೆಂಗಳೂರು

ಭಾರತದಲ್ಲಿ ಚುನಾವಣಾ ಸುಧಾರಣೆಗಳು–ಸಂವಾದ ಅಗಸ್ಟ್ 30
ಶಾಸಕರ ಭವನ ಸಭಾಂಗಣ–2 ಬೆಂಗಳೂರು

ಮಜದೂರ್ ಕಿಸಾನ್ ಸಂಘರ್ಷ ರ್‍ಯಾಲಿ ಸೆಪ್ಟೆಂಬರ್ 5
ನವದೆಹಲಿಗೆ ಪಾರ್ಲಿಮೆಂಟ್ ಚಲೋ, ಕಾರ್ಮಿಕ ರೈತ ಕೃಷಿಕೂಲಿ ಸಂಘಟನೆಗಳಿಂದ ಜಂಟಿ ಕರೆ

ಇದೇ ತಿಂಗಳಲ್ಲಿ ನಡೆಯಲಿರುವ ನಗರಸಭೆಗಳಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳು ಕುಂದಾಪುರ, ಗಜೇಂದ್ರಗಡ ನಗರಸಭೆಗಳಲ್ಲಿ ಸ್ಪರ್ಧಿಸುತ್ತಿದ್ದು ಅಲ್ಲಿನ ಸಿಪಿಐ(ಎಂ) ಅಭ್ಯರ್ಥಿಗಳ ಹೆಸರು, ವಾರ್ಡು ಇತ್ಯಾದಿ ವಿವರಗಳನ್ನು ಜತೆಗಿರುವ ಪೋಸ್ಟರಿನಲ್ಲಿ ಕೊಡಲಾಗಿದೆ. ಇತರ ನಗರಗಳಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳ ವಿವರಗಳು ಈ ಕೆಳಗಿನಂತಿವೆ

ರಾಜ್ಯದ ನಗರಸಭೆಗಳಲ್ಲಿ ಸಿಪಿಐ(ಎಂ) ಸ್ಪರ್ಧೆ





ಉಲ್ಲಾಳ

ಪಟ್ಲ	ಪದ್ಮಾವತಿ ಎಸ್ ಶೆಟ್ಟಿ
ಪಟ್ಲಗಂಡಿ	ದಿವಾಕರ
ಭಟ್ನಗರ	ಪ್ರಮೀಳಾ ರಂಜನ್
ಕೆರೆಬೈಲು	ಲಕ್ಷ್ಮಣ ಅಮೀನ್
ಚೆಂಬುಗುಡ್ಡೆ	ದಿವಾಕರ
ಬಂಡಿಕೊಟ್ಯ	ಶೋಭಾ ಗೋಪಾಲ್ (ಪಕ್ಷೇತರ – ಬೆಂಬಲಿತ)

ತುಮಕೂರು

ವಾರ್ಡ್ ನಂ.12	ಸೈಯದ್ ಮುಜೀಬ್ ಅಹಮದ್
ವಾರ್ಡ್ ನಂ.11	ಶಂಕರಪ್ಪ ಗಾರೆ ಮೇಸ್ತ್ರಿ
ವಾರ್ಡ್ ನಂ.4	ರೇಖಾ ಬಿ ಉಮೇಶ್

ಚಿಂಚೋಳಿ

ವಾರ್ಡ್ ನಂ.17	ಪ್ರದೀಪಕುಮಾರ ತಿಲ್ಲಾಪುರ

ದಾಂಡೇಲಿ

ವಾರ್ಡ್ ನಂ. 1	ಡಿ. ಸ್ಯಾಮ್ಸನ್

ರಾಯಚೂರು

ವಾರ್ಡ್ ನಂ. 1	ನಾಗಮ್ಮ



ಮಿಲಿಟರಿ ಯುನಿಫಾರ್ಮ್ ತೊಟ್ಟ ವ್ಯಕ್ತಿಯೊಬ್ಬ "ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಸೇನೆಯವರಿಗೆ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಕೆಲಸ ಮಾಡಲು ಬಿಡುತ್ತಿಲ್ಲ" ಅಂತ ಹೇಳುವ ವಿಡಿಯೋ ಒಂದು ಸಾಮಾಜಿಕ ಜಾಲತಾಣಗಳಲ್ಲಿ ಕಾಣಿಸಿಕೊಂಡಿತ್ತು.

ಈ ವಿಡಿಯೋವನ್ನು RSS - BJP ಸದಸ್ಯರು ಮತ್ತು ಸಮರ್ಥಕರೇ ಹೆಚ್ಚು ಶೇರ್ ಮಾಡಿಕೊಂಡಿದ್ದರು.

ಈಗ ಈ ವಿಡಿಯೋದ ಅಸಲಿಯತ್ತು ಹೊರಬಿದ್ದಿದೆ. ಈ ವಿಡಿಯೋ ಫೇಕ್ ಎಂದೂ, ಅದರೊಳಗಿರುವ ವ್ಯಕ್ತಿ ಸೇನೆಯವನೇ ಅಲ್ಲವೆಂದೂ ಖಾತ್ರಿಪಡಿಸಿದೆ. ಈ ಕುರಿತು ಸ್ವತಃ **Additional Directorate General of Public Information, ntegrated Head Quarters of the Ministry of Defence (Army)** ವತಿಯಿಂದ ಮಾಡಲಾದ ಟ್ವೀಟ್ ಇಲ್ಲಿ ಲಗತ್ತಿಸಲಾಗಿದೆ.

So... ಈ ವಿಡಿಯೋ ಹಿಂದೆ ಯಾರ ಕೈವಾಡ ಇದೆ ಅನ್ನೋದನ್ನು ಪ್ರತ್ಯೇಕ ಹೇಳಬೇಕಾ?

ಸಾವಿನ ಮನೆಯಲ್ಲೂ ಗಳ ಹಿರಿಯುವ ಈ ಜನರು ಯಾವ ಕೃಟಗರಿಗೆ ಸೇರುತ್ತಾರೆ ನೀವೇ ನಿರ್ಧರಿಸಿ

– ನವೀನ್ ಕುಮಾರ್



ಮಂಗಳೂರಿನಲ್ಲಿ ಮಾರ್ಕ್ಸ್200–ಕ್ಯಾಪಿಟಲ್ 150

ವಿಜ್ಞಾನ ಹೇಗೆ ಅಪ್ರಸ್ತುತವಾಗಲು ಸಾಧ್ಯ?

ವಸಂತರಾಜ ಎನ್.ಕೆ.

"ಮಾರ್ಕ್ಸ್‌ವಾದ ಒಂದು ವಿಜ್ಞಾನ. ಒಂದು ಕ್ರಾಂತಿಕಾರಿ ವಿಜ್ಞಾನ. ವಿಜ್ಞಾನದ ಸಂಶೋಧನೆಯಲ್ಲಿ, ಅದು ಕಂಡು ಹಿಡಿಯುವ ವಿಷಯಗಳಲ್ಲಿ ಬದಲಾವಣೆಯಾಗಬಹುದು. ಆದರೆ ಯಾವತ್ತೂ ವಿಜ್ಞಾನ ಅಪ್ರಸ್ತುತವಾಗುವುದಿಲ್ಲ. ಹಾಗೆನೇ ಮಾರ್ಕ್ಸ್‌ವಾದ ಅಪ್ರಸ್ತುತವಾಗುವುದಿಲ್ಲ. ಮಾರ್ಕ್ಸ್‌ವಾದ ಬಂಡವಾಳಶಾಹಿಯ ವ್ಯವಸ್ಥೆಯನ್ನು ಅಧ್ಯಯನ ಮಾಡಿ ಅದರ ಚಲನೆಯ ಮೂಲನಿಯಮಗಳನ್ನು ಅನ್ವೇಷಣೆ ನಡೆಸುತ್ತದೆ. ಆದ್ದರಿಂದ ಬಂಡವಾಳಶಾಹಿ ವ್ಯವಸ್ಥೆ ಇರುವರೆಗೆ ಅದು ಪ್ರಸ್ತುತವಾಗಿಯೇ ಇರುತ್ತದೆ." ಹೀಗೆಂದವರು ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ.

"ಮಾರ್ಕ್ಸ್‌ವಾದ ಅರಳಿಮರದ ಕೆಳಗೆ ಕುಳಿತು ಮಾರ್ಕ್ಸ್ ಪಡೆದ ದಿವ್ಯಜ್ಞಾನವಲ್ಲ. ಮಾರ್ಕ್ಸ್ ಬೆಳೆಸಿದ ಒಂದು ವಿಜ್ಞಾನ. ವಿಜ್ಞಾನಗಳ ವಿಜ್ಞಾನ. ಆದ್ದರಿಂದ ಅದು ಅಪ್ರಸ್ತುತವಾಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲ." ಹೀಗೆಂದವರು ಉಡುಪಿಯ ಲೇಖಕ ಚಿಂತಕ ಎ.ಎಸ್.ಆಚಾರ್ಯ.

"ಸಂಪತ್ತು ಮತ್ತು ಅಧಿಕಾರವನ್ನು ಹೇಗೆಗೋ ಸಂಪಾದಿಸಿದ ಉಳ್ಳವರು, ಅವರ ಬಾಲಬಡುಕರು ಮತ್ತು ಅವರ ಚಾಕರಿಯಲ್ಲಿ ತೊಡಗಿರುವ ಮಾಧ್ಯಮಗಳು ಮಾರ್ಕ್ಸ್‌ವಾದದ ಮರಣವಾರ್ತೆಯನ್ನು ಮತ್ತೆ ಮತ್ತೆ ಸಾರುತ್ತಲೇ ಬಂದಿವೆ. ಮಾರ್ಕ್ಸ್‌ವಾದ ಪ್ರಸ್ತುತ ಎಂದು ತಿಳಿಯಲು ಇದಕ್ಕಿಂತ ಹೆಚ್ಚಿನ ಪುರಾವೆ ಬೇಕೆ?" ಎಂದು ಕೇಳಿದವರು ಉಡುಪಿಯ ಲೇಖಕ ಚಿಂತಕ ಜಿ.ರಾಜಶೇಖರ್.

"ವಿಮೋಚನಾಕಾರಿ ಸಾಧ್ಯತೆ ಇರುವ ಬಂಡವಾಳಶಾಹಿ ತಂತ್ರಜ್ಞಾನದ ಉತ್ಪಾದಕತೆ ಮತ್ತು ಅದರ ಬಳಕೆಯ ಮೂಲಕ ದುಡಿಯುವ ಜನರ ಬಾಳನ್ನು ಇನ್ನಷ್ಟು ದುರ್ಭರಗೊಳಿಸುವ ಅದರ ಅನೈತಿಕತೆ –ಇವುಗಳ ನಡುವೆ ಇರುವ ವೈರುಧ್ಯವನ್ನು ಮಾರ್ಕ್ಸ್ 150 ವರ್ಷಗಳ ಹಿಂದೆ ಬಂಡವಾಳ ಗ್ರಂಥದಲ್ಲಿ ಯಂತ್ರಗಳು ಮತ್ತು ತಂತ್ರಜ್ಞಾನದ ಬಗೆಗೆ ಬರುವ ಅಧ್ಯಾಯದಲ್ಲಿ ಸ್ಪಷ್ಟವಾಗಿ ಗುರುತಿಸಿದ್ದರು. ಇಂದಿಗೂ ಅದು ನಿಜ. ಆದ್ದರಿಂದ ತಂತ್ರಜ್ಞಾನದ ಪರಿಣಾಮಗಳಂತಹ ಬಹಳ ತೀವ್ರವಾಗಿ ವೇಗವಾಗಿ ಬದಲಾದ ಮತ್ತು ಬದಲಾಗುತ್ತಿರುವ ಕ್ಷೇತ್ರದಲ್ಲೂ ಮಾರ್ಕ್ಸ್ ವಿಶ್ಲೇಷಣೆ ಮತ್ತು ಹಲವು ಒಳನೋಟಗಳು ಇಂದಿಗೂ ಪ್ರಸ್ತುತವಾಗಿವೆ. ಹಲವು ವಿಷಯಗಳ ಬಗೆಗೆ ಇದು ನಿಜ. ಆದ್ದರಿಂದ ಮಾರ್ಕ್ಸ್‌ವಾದ ಇಂದಿಗೂ ಪ್ರಸ್ತುತ." ಹೀಗೆಂದವರು ಎನ್.ಐ.ಟಿ. ಸುರತ್ಕಲ್ ಲೋಹಶಾಸ್ತ್ರ ವಿಭಾಗದ ಪ್ರೊ. ರಾಜೇಂದ್ರ ಉಡುಪ.

"ಎಲ್ಲಾ ಕಾಲ–ದೇಶಗಳಿಗೂ ಸಲ್ಲುವ ವಿಚಾರಗಳನ್ನು ಪ್ರತಿಪಾದಿಸುವುದು ಸಾಧ್ಯವಿಲ್ಲ. ಆದರೆ ಮಾರ್ಕ್ಸ್ ಬೆಳೆಸಿದ ತಾತ್ವಿಕತೆ ಎಂಗೆಲ್ಸ್, ಲೆನಿನ್, ಮಾವೋ, ಹೊ ಚಿ ಮಿನ್, ಕ್ಯಾಸ್ಟ್ರೋರಿಂದ ನಮ್ಮ ದೇಶ–ಕಾಲಕ್ಕೆ ಅನ್ವಯಿಸಿದ ಇ.ಎಂ.ಎಸ್–ರಣದಿವೆ ಯಂತಹ ಚಿಂತಕ–ನಾಯಕರ ವರೆಗೆ ಮತ್ತಷ್ಟು ಸೈದ್ಧಾಂತಿಕ ಬೆಳವಣಿಗೆ ಮತ್ತು ಹಲವು ದೇಶ–ಕಾಲಗಳಲ್ಲಿ ಅನ್ವಯಗಳ ಮೂಲಕ ವಿಕಾಸವಾಗುತ್ತಾ ಬಂದಿರುವುದರ ಫಲಿತಾಂಶವೇ ಇಂದಿನ 'ಮಾರ್ಕ್ಸ್‌ವಾದ'. ಈಗಲೂ ಸತತವಾಗಿ ಸಮಕಾಲೀನಗೊಳ್ಳುತ್ತಿದೆ. ಆದ್ದರಿಂದ ಮಾರ್ಕ್ಸ್‌ವಾದ ಪ್ರಸ್ತುತವೇ ಎಂಬ ಪ್ರಶ್ನೆ ಅಥವಾ ಅದು ಅಪ್ರಸ್ತುತ ಎಂಬ ಹೇಳಿಕೆ ಅರ್ಥಹೀನ" ಎಂದವರು ಉಡುಪಿಯ ಲೇಖಕ–ಚಿಂತಕ ಡಾ. ಭಾಸ್ಕರ ಮಯ್ಯ.

ಈ ಮಾತುಗಳು ಕೇಳಿ ಬಂದಿದ್ದು ಅಗಸ್ಟ್ 19ರಂದು ಮಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿದ್ದ "ಮಾರ್ಕ್ಸ್‌ವಾದ ಎಂದಿಗೂ ಪ್ರಸ್ತುತ" ಎಂಬ ವಿಚಾರ ಸಂಕಿರಣದಲ್ಲಿ. ಮಾರ್ಕ್ಸ್‌ವಾದ ಪ್ರಸ್ತುತತೆಯ ಬಗ್ಗೆ ಈ ಚಿಂತಕರು ವಿವಿಧ ಕೋನಗಳಿಂದ ವಿವಿಧ ರೀತಿಯಲ್ಲಿ ಸಿದ್ಧ ಪಡಿಸಿರುವುದು ಕಂಡು ಬಂದಿತು.

ರಾಜ್ಯದ ಹಲವೆಡೆ ಮಾರ್ಕ್ಸ್ ದ್ವಿಶತಾಬ್ದಿ ಮತ್ತು ಕ್ಯಾಪಿಟಲ್ ಪ್ರಕಟಣೆಗೆ 150 ವರ್ಷ ತುಂಬಿದ ನೆನಪಿನಲ್ಲಿ, ನಾಡಿನ ಎರಡು ಪ್ರಮುಖ ಪ್ರಗತಿಪರ ಪ್ರಕಟಣಾ ಸಂಸ್ಥೆಗಳಾದ ನವಕರ್ನಾಟಕ ಮತ್ತು ಕ್ರಿಯಾ ಹಮ್ಮಿಕೊಂಡಿರುವ "ಮಾರ್ಕ್ಸ್200–ಕ್ಯಾಪಿಟಲ್150' ಯೋಜನೆಯ ಭಾಗವಾಗಿ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು. ಇದನ್ನು ಮಂಗಳೂರಿನ ಕರ್ನಾಟಕ ಬ್ಯಾಂಕ್ ನೌಕರರ ಸಂಘದ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಇದರ ಜತೆಗೆ ಇದೇ ಯೋಜನೆಯ ಭಾಗವಾಗಿ ನವಕರ್ನಾಟಕ–ಕ್ರಿಯಾ ಜಂಟಿಯಾಗಿ ಪ್ರಕಟಿಸುತ್ತಿರುವ 7 ಪುಸ್ತಕಗಳಲ್ಲಿ 4 ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ಅಂದು ಬಿಡುಗಡೆಯಾದ ಪುಸ್ತಕಗಳು "ಫ್ರಾನ್ಸ್ ನಲ್ಲಿ ಅಂತರ್ಯುದ್ಧ–ಪ್ಯಾರೀಸ್ ಕಮ್ಯೂನ್", "ತತ್ವಶಾಸ್ತ್ರದ ದಾರಿದ್ರ್ಯ", "ಭಾರತ ಕುರಿತು ಮಾರ್ಕ್ಸ್", "ರಾಜಕೀಯ ಅರ್ಥಶಾಸ್ತ್ರದ ವಿಮರ್ಶೆಗೆ ಒಂದು ಕೊಡುಗೆ". ಎ.ಎಸ್. ಆಚಾರ್ಯ ಅವರು ಪುಸ್ತಕದ ಬಿಡುಗಡೆ ಮತ್ತು ವಿಚಾರ ಸಂಕಿರಣದ ಉದ್ಘಾಟನೆಯನ್ನು ನೇರವೇರಿಸಿದರು. "ಮಾರ್ಕ್ಸ್200–ಕ್ಯಾಪಿಟಲ್150' ಯೋಜನೆ, ಪ್ರಕಟವಾದ 4 ಪುಸ್ತಕಗಳು ಮತ್ತು ವಿಚಾರ ಸಂಕಿರಣಗಳ ಬಗ್ಗೆ, ಕ್ರಿಯಾದ ನಿರ್ದೇಶಕ ವಸಂತರಾಜ ಎನ್.ಕೆ. ಪ್ರಾಸ್ತಾವಿಕವಾಗಿ ಮಾತನಾಡಿದರು.

'ಕಿಲ್ವೆನ್ಮಣಿ ಬಂಡವಾಳದ ಕ್ರೌರ್ಯದ ಭೀಕರ ರೂಪಕ'

ಗೋಷ್ಠಿ 1 ರ ಮುಖ್ಯ ಭಾಷಣಕಾರರಾಗಿದ್ದ ಜಿ. ರಾಜಶೇಖರ್ "ಬಂಡವಾಳದ ಕ್ರೌರ್ಯ"ದ ಬಗ್ಗೆ ಪ್ರಬಂಧ ಮಂಡಿಸಿದರು. ಬಂಡವಾಳ ಮತ್ತು ಪಾಳೆಯಗಾರಿಶಾಹಿಯ ಕ್ರೌರ್ಯಕ್ಕೆ ವಿಷಯವನ್ನು ಅವರು ವಿಸ್ತರಿಸಿ ಮಾತನಾಡಿದರು. ಬಂಡವಾಳ ಮತ್ತು ಪಾಳೆಯಗಾರಿಶಾಹಿಯ ಕ್ರೌರ್ಯದ ಭೀಕರ ರೂಪಕ ಎಂದು ಹೇಳಬಹುದಾದ ಕಿಲ್ವೆನ್ಮಣಿ ಎಂಬ ಹಳ್ಳಿಯಲ್ಲಿ ಹತ್ಯಾಕಾಂಡದ 50ನೇ ವಾರ್ಷಿಕ ಈ ವರ್ಷ ಎಂದು ಅವರು ನೆನಪಿಸಿದರು. ಡಿಸೆಂಬರ್ 25, 1968ರಂದು ನಡೆದ ಈ ಕಿಲ್ವೆನ್ಮಣಿ ಹತ್ಯಾಕಾಂಡದಲ್ಲಿ 44 ದಲಿತರನ್ನು (ಅವರಲ್ಲಿ 16 ಮಹಿಳೆಯರು, 23 ಮಕ್ಕಳು) ರಾತ್ರಿ ವೇಳೆ ನಡೆದ ದಾಳಿಯಲ್ಲಿ ಜೀವಂತ ಸುಡಲಾಯಿತು. ಅದರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದವರನ್ನು ಪುನಃ ಬೆಂಕಿಯೊಳಗೆ ಬಿಸಾಕಲಾಯಿತು ಅಥವಾ ಕೊಚ್ಚಿ ಕೊಲೆ ಮಾಡಲಾಯಿತು. ಆಗಿನ ತಂಜಾವೂರು (ಈಗಿನ ನಾಗಪಟ್ಟಿನಂ) ಜಿಲ್ಲೆಯ ಈ ಹಳ್ಳಿಯಲ್ಲಿ ಸಿಪಿಐ(ಎಂ) ನಾಯಕತ್ವದಲ್ಲಿ ಸಂಘಟಿತರಾದ ದಲಿತ ಕೃಷಿ ಕೂಲಿಕಾರರು ಕೂಲಿ ಏರಿಕೆಯ ಬಗ್ಗೆ ಒತ್ತಾಯಕ್ಕೆ ನಡೆದ ಮುಷ್ಕರ ಮತ್ತು ಆ ಮೇಲೆ ನಡೆದ ತೀವ್ರ ವರ್ಗ ಸಂಘರ್ಷ ಅಲ್ಲಿನ ಭೂಮಾಲಕರಿಗೆ ಕೋಪ ತರಿಸಿತ್ತು. ದಲಿತ ಕೃಷಿ ಕೂಲಿಕಾರರು ಕೆಂಬಾವುಟದಲ್ಲಿ ಸಂಘಟಿತವಾಗಿ ಕೂಲಿ ಹೆಚ್ಚಳಕ್ಕೆ ಒತ್ತಾಯಿಸುವುದು ಅವರಿಗೆ ನುಂಗಲಾರದ ತುತ್ತಾಗಿತ್ತು. ಈ ಹತ್ಯಾಕಾಂಡದ ಬಗ್ಗೆ ಭಾರೀ ದೇಶವ್ಯಾಪಿ ಆಕ್ರೋಶ ವ್ಯಕ್ತವಾದರೂ ಭೂಮಾಲಕರ ಜತೆ ಪೋಲಿಸು, ಕೋರ್ಟು, ಸರಕಾರ ಅಸಡ್ಡೆ ಶಾಮೀಲುಗಳಿಂದಾಗಿ ಹತ್ಯಾಕಾಂಡದ ಪಿತೂರಿ ಮಾಡಿದ ಭೂಮಾಲಕರೂ ಅವರ ಬಾಡಿಗೆ ಬಂಟರು ಕೆಳ ಕೋರ್ಟುಗಳಲ್ಲಿ ತಪ್ಪಿತಸ್ಥರು ಎಂದು ಘೋಷಿತವಾದರೂ ಮೇಲಿನ ಕೋರ್ಟುಗಳಲ್ಲಿ ಖುಲಾಸೆಯಾದರು. ಗಾಯದ ಮೇಲೆ ಬರೆ ಎಳೆಯುವಂತೆ ಮತ್ತು ಆಳುವ ವರ್ಗದ ಗೋಸುಂಬೆತನವನ್ನು ಬಯಲು ಮಾಡುವಂತೆ, 'ಸಾಮಾಜಿಕವಾಗಿ ಪ್ರತಿಷ್ಠಿತ'ರಾದ ಮತ್ತು 'ವಿದ್ಯಾವಂತರಾದ' ಆರೋಪಿಗಳು 'ಇಂತಹ ಹೀನಕೃತ್ಯ ನಡೆಸಿರಲಾರರು' ಎಂದು ತೀರ್ಪಿನಲ್ಲಿ ಹೇಳಲಾಗಿತ್ತು. ಇಂದಿಗೂ ಹುತಾತ್ಮರ ಸ್ಮಾರಕ ಇರುವ, ವಾರ್ಷಿಕ ಆಚರಿಸಲಾಗುವ ದಲಿತ ಕೃಷಿ ಕಾರ್ಮಿಕರ ಈ ಪ್ರತಿರೋಧದ ಬಗ್ಗೆ ಕಾದಂಬರಿ, ಫಿಲಂ, ಪುಸ್ತಕಗಳು ಬಂದಿವೆ. ಕಿಲ್ವೆನ್ಮಣಿ ಒಂದು ಬಂಡವಾಳ ಮತ್ತು ಪಾಳೆಯಗಾರಿಶಾಹಿಯ ಕ್ರೌರ್ಯದ ಭೀಕರ ರೂಪಕ ಮತ್ತು ಕೋಡ್ ವರ್ಡ್ ಆಗಿದೆ ಎಂದರು ಜಿ.ರಾಜಶೇಖರ್.

ಅದೇ ರೀತಿ ಜನವರಿ 1, 1818ರಲ್ಲಿ ಬ್ರಿಟಿಶರು ಮತ್ತು ಮನುವಾದಿ ಆಡಳಿತ ನಡೆಸುತ್ತಿದ್ದ ಪೇಶ್ವೆಗಳ ನಡುವೆ ನಡೆದ ಭೀಮಾ ಕೋರೆಗಾಂವ್ ಸಮರದಲ್ಲಿ ದ್ವಿಶತಾಬ್ದಿಯ ಆಚರಣೆ ಸಂದರ್ಭಧಲ್ಲಿ ದಲಿತರ ಮೇಲೆ ದಾಳಿ ನಡೆಸಿದ ಘಟನಾವಳಿಗಳ ಬಗೆಗೂ ಅವರು ಗಮನ ಸೆಳೆದರು. ಅದನ್ನು ಮಾಡಿದ ಸಂಭಾ ಟ್ರಸ್ಟ್ ನ ನಾಯಕ–ಕಾರ್ಯಕರ್ತರ ಮೇಲೆ ಕೇಸು ಹಾಕುವ ಬದಲು ಆರು ದ್ವಿಶತಾಬ್ದಿ ಸಂಘಟಕರ ಮೇಲೆ ಅವರು 'ನಗರ–ನಕ್ಸಲರು' ಎಂಬ ಹಣೆ ಪಟ್ಟಿ ಹಚ್ಚಿ, ಅವರು ಪ್ರಧಾನಿ ಕೊಲೆಗೆ ಸಂಚು ರೂಪಿಸಿದ್ದಾರೆ ಎಂಬ ಕೇಸು ಹಾಕಲಾಗಿದೆ. ಇದು ದುಡಿಯುವ ಜನರ ದಟ್ಟದರಿದ್ರ ವಿಭಾಗಗಳ ವಿರುದ್ಧ ಬಂಡವಾಳಶಾಹಿ–ಭೂಮಾಲಕ ಆಳುವ ವರ್ಗಗಳ ಪ್ರಭುತ್ವದ (ಅಂತಿಮವಾಗಿ ಬಂಡವಾಳದ) ಕ್ರೌರ್ಯದ ಇತ್ತೀಚಿನ ರೂಪಕ ಮತ್ತು ಕೋಡ್‌ವರ್ಡ್ ಆಗಿದೆ ಎಂದರು. ಈ ಹಿನ್ನೆಲೆಯಲ್ಲಿ ಬಂಡವಾಳದ ಸಂಪುಟ 1ರಲ್ಲಿ 19ನೇ ಶತಮಾನದ ಯುರೋಪಿನ ಕಾರ್ಮಿಕರ 'ದುಡಿಮೆಯ ದಿನ' ಕುರಿತು ಅಧ್ಯಾಯದಲ್ಲಿ ಮಾರ್ಕ್ಸ್ ವಿಶ್ಲೇಷಣೆ ಬಗೆಗೆ ಅವರು ಮಾತನಾಡಿದರು. ಅಲ್ಲಿ ಬರುವ – ದುಡಿಮೆಯ ದಿನದ ಮಿತಿ, ಮಿಗುತಾಯ ಮೌಲ್ಯ ಗರಿಷ್ಟಗೊಳಿಸಲು ದುಡಿಮೆಯ ಗಂಟೆಗಳನ್ನು ಗರಿಷ್ಟಗೊಳಿಸುವ ಮಾಲಕರ ಪ್ರಯತ್ನ, ಹಗಲು–ರಾತ್ರಿ ರಿಲೇ ದುಡಿತ, ಮಹಿಳಾ ಮತ್ತು ಬಾಲ ಕಾರ್ಮಿಕರ ಬವಣೆಗಳು, ಕಾರ್ಮಿಕರ ಮೇಲೆ ಅದರ ದುಷ್ಪರಿಣಾಮಗಳು, ದುಡಿಮೆಯ ದಿನಕ್ಕೆ ಮಿತಿಗೊಳಿಸುವ ಪ್ರಯತ್ನಗಳು ಮತ್ತು ಕಾನೂನುಗಳ ಬಗ್ಗೆ – ಕೆಲವು ಉದಾಹರಣೆಗಳ ಸಮೇತ ವಿವರಿಸಿದರು.

ಬೆಳಿಗ್ಗೆ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿ.ವಿ.ಶ್ರೀರಾಮರೆಡ್ಡಿ ಬಂಡವಾಳದ ಕ್ರೌರ್ಯದ ಬಗ್ಗೆ ಮಾರ್ಕ್ಸ್ ಅವರ ಪ್ರಸಿದ್ಧ ಹೇಳಿಕೆಯನ್ನು (ಶೇ.50 ಲಾಭ ಕಂಡರೆ ಗಾಂಚಾಲಿತನ ತೋರಿಸುತ್ತದೆ, ಶೇ. 100 ಲಾಭ ಕಂಡರೆ ಎಲ್ಲಾ ಮಾನವೀಯ ನಿಯಮಗಳನ್ನು ಹೊಸಕಿ ಹಾಕುತ್ತದೆ, ಶೇ. 300 ಲಾಭ ಕಂಡರೆ ತನ್ನ ಮಾಲಕನನ್ನು ನೇಣು ಹಾಕುವುದು ಸೇರಿದಂತೆ ಯಾವ ಅಪರಾಧಕ್ಕೂ ಹೇಸುವುದಿಲ್ಲ) ಉದ್ಧರಿಸಿ ಮಾತನಾಡಿದರು. ಮಾರ್ಕ್ಸ್‌ವಾದ ಪ್ರಸ್ತುತವಲ್ಲ ಆದ್ದರಿಂದ ಅದು ಯುವಜನರನ್ನು ಆಕರ್ಷಿಸುತ್ತಿಲ್ಲ ಎಂಬ ವಾದಕ್ಕೆ ಪ್ರತಿಕ್ರಿಯಿಸುತ್ತಾ, ಒಂದು ಕಡೆ ವ್ಯವಸ್ಥೆ ಬಗ್ಗೆ ಭ್ರಮೆ ಬಿತ್ತುವ ಪ್ರತಿಗಾಮಿ ಬಂಡವಾಳಶಾಹಿ ಶಿಕ್ಷಣ ವ್ಯವಸ್ಥೆ ಮತ್ತು ಇನ್ನೊಂದೆಡೆ ಇಂದಿನ ಯುವಜನರು ಸೇರಿದಂತೆ ಎಲ್ಲಾ ಜನರತ್ತ ಮಾರ್ಕ್ಸ್‌ವಾದವನ್ನು ಒಯ್ಯುವ ಹೊಸ ಪರಿಣಾಮಕಾರಿ ವಿಧಾನ ರೂಪಿಸುವುದರಲ್ಲಿ ನಮ್ಮ (ಮಾರ್ಕ್ಸ್‌ವಾದಿಗಳ) ವೈಫಲ್ಯವೇ ಕಾರಣ ಎಂದರು. ಬೆಳಗ್ಗಿನ ಗೋಷ್ಠಿಯನ್ನು ಸಹ–ಸಂಘಟಕರಾಗಿದ್ದ ಸಮದರ್ಶಿ ವೇದಿಕೆಯ ನಾಗೇಶ್ ಕಲ್ಲೂರ್ ಅವರು ನಿರೂಪಿಸಿದರು. ಸಮದರ್ಶಿ ವೇದಿಕೆಯ ಎಚ್.ವಿ. ರಾವ್ ಉಪಸ್ಥಿತರಿದ್ದರು.

ತಂತ್ರಜ್ಞಾನದ ಉತ್ಪಾದಕತೆ ಮತ್ತು ನೈತಿಕತೆ ನಡುವೆ ವೈರುಧ್ಯ

ಮಧ್ಯಾಹ್ನದ ಗೋಷ್ಠಿಯಲ್ಲಿ ಪ್ರೊ. ರಾಜೇಂದ್ರ ಉಡುಪ ಅವರು 'ಮಾರ್ಕ್ಸ್ ಮತ್ತು ತಂತ್ರಜ್ಞಾನ' ಎಂಬ ವಿಷಯದ ಬಗ್ಗೆ ಪ್ರಬಂಧ ಮಂಡಿಸಿದರು. ಮೊದಲಿಗೆ ವಿಜ್ಞಾನದ ಸಂಶೋಧನೆ ಮತ್ತು ತಂತ್ರಜ್ಞಾನದ ಆವಿಷ್ಕಾರಗಳು ಅದರ ಬಗ್ಗೆ ಗೀಳು ಇರುವ ಕೆಲವು ವ್ಯಕ್ತಿಗಳ ಹವ್ಯಾಸಿ ಚಟುವಟಿಕೆಯಾಗಿತ್ತು. ಬಂಡವಾಳಿಗರು ವಿಜ್ಞಾನ ಮತ್ತು ತಂತ್ರಜ್ಞಾನಗಳಲ್ಲಿ ಹೂಡಿಕೆಯನ್ನೇನೂ ಮಾಡಿರಲಿಲ್ಲ. ಆಗ ನಿಯಮಿತವಾಗಿ ನಡೆಯುತ್ತಿದ್ದ ಕೈಗಾರಿಕಾ ವಸ್ತು ಪ್ರದರ್ಶನಗಳಲ್ಲಿ ಹವ್ಯಾಸಿಗಳು ವಿನ್ಯಾಸ ಮಾಡಿ ತೋರಿಸುತ್ತಿದ್ದ ಯಂತ್ರಗಳನ್ನು ಬಳಸತೊಡಗಿದರು. ಮಾರ್ಕ್ಸ್ ಸಹ ಈ ವಸ್ತು ಪ್ರದರ್ಶನಗಳಿಗೆ ಭೇಟಿ ನೀಡಿ ಯಂತ್ರಗಳ ಮೂಲಸ್ವರೂಪ ಮತ್ತು ಅವುಗಳನ್ನು

ಪುಟ 16 ಕ್ಕೆ

ದುಡಿವ ಜನರು ಬರೆವರು ಚರಿತ್ರೆ, ಧಾನ್ಯಗಳ
ತೆನೆಯಲ್ಲಿ ಕಾಲದ ಕುಲುಮೆಯಲ್ಲಿ
ಹೆಗಲೇರಿ ಕುಳಿತವರ ಕೆಳಗೆಳೆದು ಹಾಕುವರು
ಶ್ರಮಜೀವಿಗಳ ಧ್ವಜದ ಗೆಲುವಿನಲ್ಲಿ

– ಸು.ರಂ.ಎಕ್ಕುಂಡಿ (ಕಿಡಕಿ ಮತ್ತು ಗಾಲಿಗಳು)

ಪುಸ್ತಕ ಬಿಡುಗಡೆ ಮತ್ತು ವಿಚಾರ ಸಂಕಿರಣದ ವಿವಿಧ ಹಂತಗಳಲ್ಲಿ ಮಾರ್ಕ್ಸ್ ಕುರಿತು ಪ್ರಸಿದ್ಧ ಕವಿ ಸು.ರಂ.ಎಕ್ಕುಂಡಿ ಬರೆದ **"ಕಿಡಕಿ ಮತ್ತು ಗಾಲಿಗಳು"**, **"ಗಿರವಿ ಅಂಗಡಿಯಲ್ಲಿ"**, **"ಕದವ ತಟ್ಟಿದರು"** ಮತ್ತು **"ಆಂಡರ್ಸನ್ ಬೀದಿ, ಲಂಡನ್ನಿನಲ್ಲಿ"** ಕಥನ ಕವನಗಳನ್ನು ಓದಲಾಯಿತು.

ಬೆಳಿಗ್ಗೆ **'ಪ್ಯಾರೀಸ್ ಕಮ್ಯೂನಿ'**ನ ಬಗ್ಗೆ, ಸಂಜೆ **'ಯಂಗ್ ಕಾರ್ಲ ಮಾರ್ಕ್ಸ್'** ಫಿಲಂ ಪ್ರದರ್ಶನ ಮಾಡಲಾಯಿತು.



ಹಿಂದುತ್ವ ಭಯೋತ್ಪಾದನಾ ಜಾಲ ಮತ್ತೊಮ್ಮೆ ಬಯಲಿಗೆ

ಕಳೆದ ಐದು ವರ್ಷಗಳಲ್ಲಿ ನಡೆದ ನಾಲ್ಕು ವಿಚಾರವಾದಿಗಳ ಹತ್ಯೆಗಳ ವಿಚಾರದಲ್ಲಿ ಮುಂದೆ ಸಾಗುವ ದಾರಿಯನ್ನು ತೆರೆಸಲು ಕರ್ನಾಟಕದಲ್ಲಿನ ಒಂದು ಬಿಜೆಪಿಯೇತರ ಸರಕಾರದ ಪೊಲೀಸ್ ಪಡೆಯೇ ಬೇಕಾಯಿತು. ಈ ಎಲ್ಲಾ ಹತ್ಯೆಗಳು ಯಾವುದೋ ಕೆಲವು ವ್ಯಕ್ತಿಗಳ ಇಚ್ಛಾನುಸಾರ ನಡೆದಿದ್ದಲ್ಲ, 'ಸನಾತನ ಸಂಸ್ಥಾ' ಎಂಬ ಒಂದು ಮಾತ್ರ ಸಂಘಟನೆಯೊಂದಿಗೆ ಸಂಬಂಧವಿರುವ ಒಂದು ಜಾಲದ ಭಾಗ ಎಂಬುದು ಸ್ಪಷ್ಟವಾಗಿದೆ.

ಪ್ರಕಾಶ ಕಾರಟ್



ಗೌರಿ ಲಂಕೇಶ್ ಹತ್ಯೆ ಪ್ರಕರಣದಲ್ಲಿ ಕರ್ನಾಟಕ ಪೊಲೀಸರು ಪಡೆದ ಮಹತ್ವದ ಮುನ್ನಡೆ ಪ್ರೊಫೆಸರ್ ಎಂ.ಎಂ. ಕಲಬುರ್ಗಿ ಮತ್ತು ಮಹಾರಾಷ್ಟ್ರದಲ್ಲಿ ನಡೆದ ನರೇಂದ್ರ ಧಾಬೋಲ್ಕರ್ ಹಾಗೂ ಗೋವಿಂದ ಪನ್ಸಾರೆ ಅವರ ಹತ್ಯೆ ಪ್ರಕರಣಗಳನ್ನು ಭೇದಿಸಲು ಅವಕಾಶ ಮಾಡಿಕೊಟ್ಟಿದೆ.

ಗೌರಿ ಲಂಕೇಶ್ ಹತ್ಯೆ ಪ್ರಕರಣದಲ್ಲಿ ಬಂಧಿತರಾದ ಎಲ್ಲಾ 12 ಜನರು 'ಸನಾತನ ಸಂಸ್ಥಾ' ಅಥವಾ ಅದರ ಸಹವರ್ತಿ ಸಂಘಟನೆಯಾದ 'ಹಿಂದೂ ಜನಜಾಗೃತಿ ಸಮಿತಿ' (ಎಚ್‌ಜೆಎಸ್) ಮತ್ತು ಸಂಬಂಧಿತ ಇತರೆ ಹಿಂದುತ್ವ ಉಗ್ರಗಾಮಿ ಸಂಘಟನೆಗಳ ಜೊತೆ ಸಂಪರ್ಕ ಹೊಂದಿದವರಾಗಿದ್ದಾರೆ.

ಪ್ರಮುಖ ಶಂಕಿತರಲ್ಲಿ ಒಬ್ಬನಾದ ಅಮೋಲ್ ಕಾಳೆಯನ್ನು ಬಂಧಿಸಿದ ನಂತರ ಕಲೆ ಹಾಕಲಾದ ಸಾಕ್ಷ್ಯಗಳನ್ನು ಪರಿಶೀಲಿಸಿದ ಮೇಲೆ ಮಹಾರಾಷ್ಟ್ರದಲ್ಲಿನ ಜಾಲದೊಂದಿಗೆ ಸಂಪರ್ಕದ ವಿಚಾರ ಬಹಿರಂಗಗೊಂಡಿತು. ಕಾಳೆ ಪುಣೆಯಲ್ಲಿ ಹಿಂದೆ ಎಚ್‌ಜೆಎಸ್‌ನ ಸಂಚಾಲಕನಾಗಿದ್ದ. ಕರ್ನಾಟಕ ಪೊಲೀಸ್‌ನ ವಿಶೇಷ ತನಿಖಾ ತಂಡ (ಎಸ್‌ಐಟಿ) ಒದಗಿಸಿದ ಮಾಹಿತಿಯ ಆಧಾರದಲ್ಲಿ ಮಹಾರಾಷ್ಟ್ರದ ಭಯೋತ್ಪಾದನೆ ನಿರೋಧಕ ತಂಡ (ಎಟಿಎಸ್) ಮೂವರನ್ನು ಅಂದರೆ ವೈಭವ್ ರಾವುತ್, ಸುಧನ್ವ ಗೊಂಡೆಲ್ಕರ್ ಮತ್ತು ಶರದ್ ಕಸಲ್ಕರ್‌ನನ್ನು ಬಂಧಿಸಿತು. ರಾವುತ್‌ನ ಮನೆಯಲ್ಲಿ ಶೋಧ ನಡೆಸಿದಾಗ ಕಚ್ಚಾ ಬಾಂಬ್‌ಗಳು ಮತ್ತು ಸ್ಫೋಟಕಗಳನ್ನು ತಯಾರಿಸುವ ಸಲಕರಣೆಗಳು ಸಿಕ್ಕವು. ಬಕ್ರಿದ್ ಹಬ್ಬದ ಸಂದರ್ಭದಲ್ಲಿ ಮಹಾರಾಷ್ಟ್ರದ ಐದು ನಗರಗಳಲ್ಲಿ ಬಾಂಬ್ ಸ್ಫೋಟ ನಡೆಸಲು ಈ ಗುಂಪು ಯೋಜಿಸಿತ್ತು. ಕಸಲ್ಕರ್ ತನಿಖೆಯ ವೇಳೆ ಸಚಿನ್ ಅಂದುರೆ ಬಗ್ಗೆ ಮಾಹಿತಿ ಸಿಕ್ಕಿ ಆತನನ್ನು ಬಂಧಿಸಲಾಯಿತು. ಧಾಬೋಲ್ಕರ್‌ರನ್ನು ಕೊಂದವರಲ್ಲಿ ಅಂದುರೆಯೂ ಒಬ್ಬ. ಧಾಬೋಲ್ಕರ್ ಹತ್ಯೆಗೆ ಬಳಸಿದ ಪಿಸ್ತೂಲ್ ಪತ್ತೆಯಾಗಿದೆ. ಎಲ್ಲಾ ನಾಲ್ವರು ಪ್ರಮುಖ ಬುದ್ಧಿಜೀವಿಗಳು ಮತ್ತು ವಿಚಾರವಾದಿಗಳ ಹತ್ಯೆ ಒಂದಕ್ಕೊಂದು ಸಂಬಂಧಿಸಿವೆ. ಗೌರಿ ಲಂಕೇಶ್ ಹತ್ಯೆ ಸಂಬಂಧ ಬಂಧಿತನಾಗಿರುವ ಒಬ್ಬ ಆರೋಪಿ ಕಲಬುರ್ಗಿ ಹತ್ಯೆಯಲ್ಲಿ ತನ್ನ ಪಾತ್ರವಿರುವುದನ್ನು ಒಪ್ಪಿಕೊಂಡಿದ್ದಾನೆ.

ಧಾಬೋಲ್ಕರ್ ಹತ್ಯೆ ಪ್ರಕರಣವನ್ನು 2014ರ ಮೇ ತಿಂಗಳಲ್ಲಿ ಸಿಬಿಐಗೆ ಒಪ್ಪಿಸಿದರೂ ಅದರಲ್ಲಿ ನಿಜವಾದ ಪ್ರಗತಿಯಾಗಲು ಸುದೀರ್ಘ ಐದು ವರ್ಷ ಬೇಕಾಯಿತು. ಒಬ್ಬ ಪ್ರಮುಖ ಪಿತೂರಿಗಾರನ ಬಂಧನವೂ ಸೇರಿದಂತೆ, ಈ ದಾಳಿಗಳಲ್ಲಿ 'ಸನಾತನ ಸಂಸ್ಥಾ' ಮತ್ತದರ ಸಂಘಟನೆಗಳ ಪಾತ್ರದತ್ತ ಬೆಟ್ಟು ಮಾಡುವ ಸಾಕಷ್ಟು ಪುರಾವೆಗಳು ಇದ್ದರೂ ಮಹಾರಾಷ್ಟ್ರ ಮತ್ತು ಗೋವಾ ಸರಕಾರಗಳು ಈ ಉಗ್ರಗಾಮಿ ಸಂಘಟನೆಯ ಪಾತ್ರದ ಬಗ್ಗೆ ತನಿಖೆ ನಡೆಸಲು ಯಾವುದೇ ಕ್ರಮಗಳನ್ನು ಕೈಗೊಳ್ಳಲಿಲ್ಲ.

ಗೋವಾದಲ್ಲಿ 'ಸನಾತನ ಸಂಸ್ಥಾ'ದ ಕೇಂದ್ರ ಕಚೇರಿಯಿದೆ. ಹಾಗೂ ಅದು ಮಹಾರಾಷ್ಟ್ರ, ಕರ್ನಾಟಕ ಮತ್ತು ಗೋವಾದಲ್ಲಿ ಸಕ್ರಿಯವಾಗಿದೆ. ಭಯೋತಾದನೆ ಮತ್ತು ಹಿಂಸಾತ್ಮಕ ಚಟುವಟಿಕೆಗಳಲ್ಲಿ ತೊಡಗುವ ಹಿಂದೂತ್ವ ಉಗ್ರಗಾಮಿ ಸಂಘಟನೆಗಳು ಇವೆ ಎಂಬುದು ಒಂದು ದಶಕದ ಹಿಂದಿನ ಮಲೆಗಾಂವ್, ಮೆಕ್ಕಾ ಮಸೀದಿ ಮತ್ತು ಇತರ ಸ್ಫೋಟಗಳ ತನಿಖೆಗಳಿಂದ ಗೊತ್ತಾಗಿತ್ತು. 'ಅಭಿನವ ಭಾರತ' ಅಂಥ ಸಂಘಟನೆಗಳಲ್ಲಿ ಒಂದು. ಆದಾಗ್ಯೂ, ಮೋದಿ ಸರಕಾರ ಅಧಿಕಾರಕ್ಕೆ ಬಂದ ನಂತರ, ಮಲೆಗಾಂವ್, ಅಜ್ಮೇರ್ ಷರೀಫ್ ಮತ್ತಿತರ ಪ್ರಕರಣಗಳ ಆರೋಪಿಗಳಿಗೆ ಶಿಕ್ಷೆಯಾಗುವುದನ್ನು ತಪ್ಪಿಸಲು ರಾಷ್ಟ್ರೀಯ ತನಿಖಾ ಸಂಸ್ಥೆ ಮೂಲಕ ಪ್ರಯತ್ನಿಸಲಾಯಿತು.

ಈ ನಾಲ್ಕು ಹತ್ಯೆಗಳ ವಿಚಾರದಲ್ಲಿ ಕೂಡ ಮುಂದೆ ಸಾಗುವ ದಾರಿಯನ್ನು ತೆರೆಸಲು ಕರ್ನಾಟಕದಲ್ಲಿನ ಒಂದು ಬಿಜೆಪಿಯೇತರ ಸರಕಾರದ ಪೊಲೀಸ್ ಪಡೆಯೇ ಬೇಕಾಯಿತು. ಇದು ಮಹಾರಾಷ್ಟ್ರ ಮತ್ತು ಗೋವಾಗಳಲ್ಲಿನ ಕುತ್ಸಿತ ಜಾಲದ ಮೇಲೆ ಬೆಳಕು ಚೆಲ್ಲಲು ಸಹಾಯಕವಾಗಿದೆ. ಈ ಎಲ್ಲಾ ಹತ್ಯೆಗಳು ಯಾವುದೋ ಕೆಲವು ವ್ಯಕ್ತಿಗಳ ಇಚ್ಛಾನುಸಾರ ನಡೆದಿದ್ದಲ್ಲ, 'ಸನಾತನ ಸಂಸ್ಥಾ' ಎಂಬ ಒಂದು ಮಾತ್ರ ಸಂಘಟನೆಯೊಂದಿಗೆ ಸಂಬಂಧವಿರುವ ಒಂದು ಜಾಲದ ಭಾಗ ಎಂಬುದು ಸ್ಪಷ್ಟವಾಗಿದೆ.

ದ್ವೇಷ ಮತ್ತು ಹಿಂಸೆಯನ್ನು ಪ್ರಚೋದಿಸುವ ಸಂಸ್ಥೆ ಎಂದು ಘೋಷಿಸಿ ಈ 'ಸನಾತನ ಸಂಸ್ಥಾ' ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ತನಿಖೆಗಳು ಮತ್ತು ಲಭ್ಯ ವರದಿಗಳನ್ನು ಆಧರಿಸಿ ಕೇಂದ್ರ ಸರಕಾರ ಕಾನೂನಿನ ಅಗತ್ಯ ಅಂಶಗಳನ್ನು ಬಳಸಬೇಕು ಹಾಗೂ 'ಸನಾತನ ಸಂಸ್ಥಾ' ಒಂದು ನಿಷೇಧಿತ ಸಂಘಟನೆ ಎಂದು ಘೋಷಿಸಬೇಕು.

ಅನು: ವಿಶ್ವ

ಸಮೀರ್ ಅಮೀನ್: ಮಾರ್ಕ್ಸ್‌ವಾದಿ ಚಿಂತಕ ಇನ್ನಿಲ್ಲ

ವಸಂತರಾಜ ಎನ್.ಕೆ.



ಪ್ರಸಿದ್ಧ ಮಾರ್ಕ್ಸ್‌ವಾದಿ ಚಿಂತಕ ಅರ್ಥಶಾಸ್ತ್ರಜ್ಞ ಸಮೀರ್ ಅಮೀನ್ ತಮ್ಮ 87ನೇ ಇಳಿವಯಸ್ಸಿನಲ್ಲಿ ಇದೇ ಅಗಸ್ಟ್ 13ರಂದು ನಿಧನ ಹೊಂದಿದ್ದಾರೆ. ಕೈರೋದಲ್ಲಿ ವೈದ್ಯ ದಂಪತಿಗಳಾಗಿದ್ದ ಈಜಿಪ್ಟಿನ ತಂದೆ ಮತ್ತು ಫ್ರೆಂಚ್ ತಾಯಿಗೆ ಹುಟ್ಟಿದ ಸಮೀರ್ ತಮ್ಮ ಶಿಕ್ಷಣವನ್ನು ಈಜಿಪ್ಟಿನಲ್ಲೇ ಪಡೆದರು. 1947ರಿಂದ 1957ರವರೆಗೆ ಉನ್ನತ ಶಿಕ್ಷಣಕ್ಕಾಗಿ ಪ್ಯಾರೀಸಿನಲ್ಲಿ ನೆಲೆಸಿದಾಗ ಅವರು ಮಾರ್ಕ್ಸ್‌ವಾದದತ್ತ ಆಕರ್ಷಿತರಾದರು. ಅವರು ಈ ಅವಧಿಯಲ್ಲಿ ಫ್ರೆಂಚ್ ಮುಂದೆ ಈಜಿಪ್ತಿಯನ್ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿದ್ದರು. ಅವರು ರಾಜಕೀಯ ಅರ್ಥಶಾಸ್ತ್ರದಲ್ಲಿ ಡಾಕ್ಟರೇಟ್ ಪಡೆದು, 1957ರಲ್ಲಿ ಈಜಿಪ್ಟಿಗೆ ವಾಪಸಾಗಿ 1960ರ ವರೆಗೆ ಅಲ್ಲಿನ ಆರ್ಥಿಕ ನಿರ್ವಹಣೆಯ ಸಂಸ್ಥೆಯಲ್ಲಿ ಅರ್ಥಶಾಸ್ತ್ರಜ್ಞರಾಗಿ ಕೆಲಸ ಮಾಡಿದರು. 1960ರಲ್ಲಿ ಜನರಲ್ ನಾಸೆರ್ ಸರ್ಕಾರ ಕಮ್ಯುನಿಸ್ಟರ ದಮನ ಆರಂಭಿಸಿದಾಗ, ಅವರು ಈಜಿಪ್ಟ್ ಬಿಟ್ಟು ಸೆನೆಗಲ್‌ನ ಡಾಕಾರ್ ನಲ್ಲಿ ನೆಲೆಸಬೇಕಾಯಿತು. ಅವರು ಮೊದಲು ಡಾಕಾರ್ ನಲ್ಲಿರುವ ವಿಶ್ವಸಂಸ್ಥೆಯ ಆಫ್ರಿಕನ್ ಆರ್ಥಿಕ ಅಭಿವೃದ್ಧಿ ಮತ್ತು ಯೋಜನಾ ಸಂಸ್ಥೆಯಲ್ಲಿ ಮತ್ತು ಆ ಮೇಲೆ ಮೂರನೇ ಜಗತ್ತಿನ ವೇದಿಕೆಯ (ಥರ್ಡ್ ವರ್ಲ್ಡ್ ಫೋರಂ) ಆಫ್ರಿಕನ್ ಕಚೇರಿಯಲ್ಲಿ ಕೆಲಸ ಮಾಡಿದರು. ಅವರು ಮೂರನೇ ಜಗತ್ತಿನಲ್ಲಿ ನೆಲೆಸಿದ್ದು ಅಂತರ್ರಾಷ್ಟ್ರೀಯ ಮಟ್ಟದ ಮಾರ್ಕ್ಸ್‌ವಾದಿ ಚಿಂತಕ ಮತ್ತು ಅರ್ಥಶಾಸ್ತ್ರಜ್ಞ ಎಂದು ಪರಿಗಣಿತರಾದ ಬೆರಳೆಣಿಕೆಯ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು. 'ಮಂಥ್ಲೀ ರಿವ್ಯೂ', 'ನ್ಯೂ ಲೆಫ್ಟ್ ರಿವ್ಯೂ' ಮುಂತಾದ ಅಂತರ್ರಾಷ್ಟ್ರೀಯ ಮಟ್ಟದ ಮಾರ್ಕ್ಸ್‌ವಾದಿ ಸೈದ್ಧಾಂತಿಕ ಪತ್ರಿಕೆಗಳಲ್ಲಿ ಮತ್ತು ಸಂಶೋಧನಾ ಜರ್ನಲುಗಳಲ್ಲಿ ನಿಯಮಿತವಾಗಿ ಅವರು ಬರೆಯುತ್ತಿದ್ದರು.

ಮಾರ್ಕ್ಸ್‌ವಾದಿ ಚಿಂತಕರಲ್ಲೇ ಸಮೀರ್ ಅಮೀನ್ ಅವರ ಎರಡು ವಿಶಿಷ್ಟತೆಗಳತ್ತ ಬೊಟ್ಟು ಮಾಡುತ್ತಾರೆ, ಅವರ ಜತೆ ನಿಕಟ ಸಂಬಂಧ ಹೊಂದಿದ್ದ ಹಾಗೂ ಮೂರನೇ ಜಗತ್ತಿನಲ್ಲಿ ನೆಲೆಸಿದ್ದೂ ಅಂತರ್ರಾಷ್ಟ್ರೀಯ ಮಟ್ಟದ ಮಾರ್ಕ್ಸ್‌ವಾದಿ ಚಿಂತಕ ಮತ್ತು ಅರ್ಥಶಾಸ್ತ್ರಜ್ಞ ಎಂದು ಪರಿಗಣಿತರಾದ ಇನ್ನೊಬ್ಬ ವ್ಯಕ್ತಿ ಪ್ರೊ. ಪ್ರಭಾತ್ ಪಟ್ನಾಯಕ್. ಮೊದಲನೆಯದು ಸಮಾಜವಾದದ ಗುರಿ ಸಾಧನೆಯತ್ತ ಅವರ ಸಂಪೂರ್ಣ ಬದ್ಧತೆ. ಅವರು ಬರಿಯ 'ಆರಾಮ ಖುರ್ಚಿ ಮಾರ್ಕ್ಸ್‌ವಾದಿ ಬುದ್ಧಿಜೀವಿ' ಆಗಿರಲಿಲ್ಲ. ಸಮಕಾಲೀನ ಬೆಳವಣಿಗೆಗಳನ್ನು ಮಾರ್ಕ್ಸ್‌ವಾದಿ ಪರಿಕರಗಳಿಂದ ವಿಶ್ಲೇಷಣೆಗೆ ಒಳಪಡಿಸುವ ಬೌದ್ಧಿಕ ಚಟುವಟಿಕೆಯಿಂದ ಮಾತ್ರ ಅವರು ಸಂತೃಪ್ತರಾಗಿರಲಿಲ್ಲ. ಅದು ರಾಜಕೀಯ ಸಾಮಾಜಿಕ ಮಧ್ಯಪ್ರವೇಶಕ್ಕೆ ಮಾರ್ಗದರ್ಶಕವಾಗಬೇಕೆಂದು ತುಡಿಯುತ್ತಿದ್ದರು. ಹಿಂದೆ ಫ್ರೆಂಚ್ ಮತ್ತು ಈಜಿಪ್ಟ್ ಕಮ್ಯುನಿಸ್ಟ್ ಪಕ್ಷಗಳಲ್ಲಿ ಸದಸ್ಯರಾಗಿದ್ದ ಅವರು, ಈಗ ನೆಲೆಸಿದ್ದ ಸೆನೆಗಲ್ ನಲ್ಲೂ ಕಮ್ಯುನಿಸ್ಟ್ ಚಳುವಳಿಯಲ್ಲದೆ ಇತರ ಹಲವು ಸಾಮಾಜಿಕ ರಾಜಕೀಯ ಚಳುವಳಿಗಳ ಜತೆ ನಿಕಟ ಸಂಬಂಧ ಹೊಂದಿದ್ದು, ಅವುಗಳಿಗೆ ತಮ್ಮ ಬೆಂಬಲ ಮಾರ್ಗದರ್ಶನ ನೀಡುತ್ತಿದ್ದರು.

ಸಮಕಾಲೀನ ಜಾಗತಿಕ ವಿದ್ಯಮಾನಗಳ ಮಾರ್ಕ್ಸ್‌ವಾದಿ ವಿಶ್ಲೇಷಣೆಯಲ್ಲಿ ಅವರು ಸಾಮ್ರಾಜ್ಯಶಾಹಿಗೆ ಕೊಟ್ಟ ಪ್ರಾಧಾನ್ಯತೆ ಅವರ ಎರಡನೇ ವಿಶಿಷ್ಟತೆಯಾಗಿತ್ತು. ಬಂಡವಾಳಶಾಹಿ ದೇಶಗಳ ಮತ್ತು ಕೆಲವು ಮೂರನೇ ಜಗತ್ತಿನ ಮಾರ್ಕ್ಸ್‌ವಾದಿ ಚಿಂತಕರು (ಕೆಲವು ಅಪವಾದಗಳನ್ನು ಬಿಟ್ಟರೆ) ತಮ್ಮ ವಿಶ್ಲೇಷಣೆಯಲ್ಲಿ ಸಾಮ್ರಾಜ್ಯಶಾಹಿಯ ಪಾತ್ರವನ್ನು ಪ್ರಧಾನವಾಗಿ ಗ್ರಹಿಸದಿರುವುದು ಸಾಮಾನ್ಯ. 'ಜಾಗತೀಕರಣ', 'ಜಾಗತಿಕ ಹಣಕಾಸು ಬಂಡವಾಳ'ದ ಬೆಳವಣಿಗೆಯ ನಂತರ ಸಾಮ್ರಾಜ್ಯಶಾಹಿ ಕುಂದಿದೆ ಎಂದು ಅವರು ವಾದಿಸುತ್ತಾರೆ. ಆದರೆ, ಇಂದಿನ ಬಂಡವಾಳಶಾಹಿಯ ವಿಶ್ಲೇಷಣೆಯಲ್ಲಿ ಸಾಮ್ರಾಜ್ಯಶಾಹಿಯ ಪಾತ್ರವನ್ನು ಪ್ರಧಾನವಾಗಿ ಗ್ರಹಿಸಬೇಕು ಎಂಬುದು ಸಮೀರ್ ಅಮೀನ್ ಅವರ ಅಭಿಪ್ರಾಯವಾಗಿತ್ತು. ಶ್ರಮದ ಮೌಲ್ಯ ಸಿದ್ಧಾಂತದ ಚೌಕಟ್ಟಿನಲ್ಲಿ, ಸಾಮ್ರಾಜ್ಯಶಾಹಿ ಮತ್ತು ಮೂರನೇ ಜಗತ್ತಿನ ನಡುವೆ 'ಅಸಮಾನ ಮೌಲ್ಯ ವಿನಿಮಯ'ದ ಮೂಲಕ 'ಸೂಪರ್ ಶೋಷಣೆ' ಆಗುತ್ತಿದೆ ಎಂಬ ಅವರ ಸಿದ್ಧಾಂತಕ್ಕೆ ಅವರು ಪ್ರಸಿದ್ಧರಾಗಿದ್ದರು. 'ಅಸಮಾನ ಮೌಲ್ಯ ವಿನಿಮಯ'ದ ಸಿದ್ಧಾಂತವನ್ನು ಹಲವರು ಒಪ್ಪಿದ್ದರೂ, ಅವರ ಇನ್ನೂ ಹೆಚ್ಚಿನ ಮೂಲಭೂತವಾದ 'ಸೂಪರ್ ಶೋಷಣೆ'ಯ ಸಿದ್ಧಾಂತ ಅವರ ವಿಶಿಷ್ಟ ಕೊಡುಗೆಯಾಗಿತ್ತು. ಈ ಸೂಪರ್ ಶೋಷಣೆಯಲ್ಲಿ (ಅಭಿವೃದ್ಧ ಬಂಡವಾಳಶಾಹಿ ದೇಶಗಳಲ್ಲಿ ಉಚ್ಚ ತಂತ್ರಜ್ಞಾನ ಬಳಸುವ ಹೆಚ್ಚಿನ ಬೆಲೆ ಬರುವ ವಸ್ತುಗಳ ಮತ್ತು ಮೂರನೇ ಜಗತ್ತಿನಲ್ಲಿ ಶ್ರಮ-ಪ್ರಧಾನ ವಸ್ತು ಹಾಗೂ ಕೈಗಾರಿಕಾ ಕಚ್ಚಾ ವಸ್ತುಗಳ ಉತ್ಪಾದನೆಯ) 'ಅಂತರ್ರಾಷ್ಟ್ರೀಯ ಶ್ರಮ ವಿಭಜನೆ'ಯ ಅಂಶ ಇದೆ. ಆದರೆ 'ಜಾಗತೀಕರಣ'ದ ಹಲವು ಹಂತಗಳಲ್ಲಿ ಹಾದು ಹೋಗುತ್ತಿರುವಾಗ 'ಅಂತರ್ರಾಷ್ಟ್ರೀಯ ಶ್ರಮ ವಿಭಜನೆ'ಯಲ್ಲಿ ಮೂಡಿ ಬರುವ ಬದಲಾವಣೆಯ ಎಲ್ಲಾ ಹಂತಗಳಲ್ಲೂ 'ಸೂಪರ್ ಶೋಷಣೆ' ಮುಂದುವರೆಯಯುತ್ತದೆ ಎಂಬುದು ಪ್ರೊ. ಅಮೀನ್ ಅವರ ಅಭಿಮತವಾಗಿತ್ತು. ಇದರ ಪರಿಣಾಮವಾಗಿ ಯಾವುದೇ ಮೂರನೇ ಜಗತ್ತಿನ ದೇಶ ನೈಜವಾಗಿ ಅಭಿವೃದ್ಧಿ ಹೊಂದಬೇಕಾದರೆ ಜಾಗತಿಕ ಬಂಡವಾಳಶಾಹಿ ವ್ಯವಸ್ಥೆಯಿಂದ ಕಳಚಿಕೊಳ್ಳುವ ನೀತಿ ಅನುಸರಿಸಬೇಕು ಎಂಬುದು ಅವರ ಅಭಿಪ್ರಾಯವಾಗಿತ್ತು, ಎನ್ನುತ್ತಾರೆ ಪ್ರೊ. ಪಟ್ನಾಯಕ್.

'ದಿ ಲಿಬರಲ್ ವೈರಸ್: ಪರ್ಮನೆಂಟ್ ವಾರ್ ಅಂಡ್ ಅಮೆರಿಕನೈಸೇಶನ್ ಆಫ್ ದಿ ವರ್ಲ್ಡ್', 'ದಿ ಲಾ ಆಫ್ ವರ್ಲ್ಡ್-ವೈಡ್ ವ್ಯಾಲ್ಯೂ', 'ಅಕ್ಯುಮುಲೇಶನ್ ಆನ್ ಎ ವರ್ಲ್ಡ್ ಸ್ಕೇಲ್: ಎ ಕ್ರಿಟಿಕ್ ಆಫ್ ಥಿಯರಿ ಆಫ್ ಅಂಡರ್ ಡೆವಲೆಪ್‌ಮೆಂಟ್', 'ದಿ ರಿ-ಅವೇಕನಿಂಗ್ ಆಫ್ ಅರಬ್ ವರ್ಲ್ಡ್', 'ದಿ ಇಂಪ್ಲೋಶನ್ ಆಫ್ ಕಂಟೆಂಪರರಿ ಕ್ಯಾಪಿಟಲಿಸಂ', 'ದಿ ಎಂಪೈರ್ ಆಫ್ ಕ್ಯಾವೋಸ್', 'ಯುರೋಸೆಂಟ್ರಿಸಂ' – ಇವು ಅವರ ಕೆಲವು ಪ್ರಮುಖ ಕೃತಿಗಳು.





ಶತಮಾನದ ಭೀಷಣ ಬಿಕ್ಕಟ್ಟನ್ನು ಎದುರಿಸಿ ನಿಂತ ಕೇರಳ



ಕೇರಳ ಅಭೂತಪೂರ್ವ ಪರಿಸ್ಥಿತಿಯೊಂದನ್ನು ಎದುರಿಸುತ್ತಿದೆ. ಆದರೆ ಕೇರಳದ ಸರಕಾರ ಮತ್ತು ಜನತೆ ಈ ಗಂಭೀರ ವಿಪತ್ತಿಗೆ ಸ್ಪಂದಿಸಿದ ರೀತಿ ಭಾರತದ ಇತರರೆಲ್ಲರಿಗೂ ಹಲವು ಪಾಟಗಳನ್ನು ನೀಡಿದ್ದಾರೆ

ಬೃಂದಾ ಕಾರಟ್

ವಿಪತ್ತುಗ್ರಸ್ತ ಕೇರಳದಲ್ಲಿ ಪ್ರವಾಹದ ನೀರು ಇಳಿಯುತ್ತಿರುವಂತೆ ಹಾನಿಯ ಪ್ರಮಾಣ ಎಷ್ಟು ಎಂದು ತುಸು ಹೆಚ್ಚು ನಿಖರವಾಗಿ ಅಂದಾಜು ಮಾಡಬಹುದು, ಹಾಗೆಂಯೇ ಪಾಟಗಳನ್ನು ಕಲಿತು ಮುಂದೆ ನಡೆಯಬೇಕಾದ 'ಹಾದಿಯನ್ನು ನಿರ್ಧರಿಸಬಹುದು.

1924ರ ನಂತರ ಅತ್ಯಂತ ತೀವ್ರತರವೆನ್ನುವ ಈ ನೆರೆ ಮಾಡಿದ ವಿನಾಶಗಳು ಭಾರತದಲ್ಲೆಲ್ಲ ಮಾಧ್ಯಮಗಳ ಮೂಲಕ ಹೊಮ್ಮಿವೆ. ಸುಮಾರು 300ಕ್ಕೂ ಹೆಚ್ಚು ಅಮೂಲ್ಯ ಜೀವಗಳನ್ನು ಕಳಕೊಂಡಿದ್ದೇವೆ. 32 ಮಂದಿ ಇನ್ನೂ ಸಿಕ್ಕಿಲ್ಲ. ಲಕ್ಷಾಂತರ ಮಂದಿಯನ್ನು ಇದು ತಟ್ಟಿದೆ. ಉಕ್ಕಿ ಹರಿಯುತ್ತಿದ್ದ ನದಿ ನೀರು ಮನೆಗಳನ್ನು, ರಸ್ತೆಗಳನ್ನು ಮತ್ತು ಸೇತುವೆಗಳನ್ನು ಅವಿರತ ಅಬ್ಬರದಿಂದ ಕೊಚ್ಚಿಕೊಂಡು ಹೋಗುವುದನ್ನು ನೋಡಿದೆವು; ಸಾವಿರಾರು ಜನಗಳು ಸುತ್ತಲೂ ತುಂಬಿರುವ ನೀರಿನ ನಡುವೆ ಪೇಚಾಡುವುದನ್ನು ನೋಡಿದೆವು; ಪರಿಹಾರ ಶಿಬಿರಗಳಲ್ಲಿ ಲಕ್ಷಾಂತರ ಮಂದಿಯ ನೋವು, ಸಂಕಟ, ಭೀತಿಯನ್ನು ಟಿವಿ ಪರದೆಗಳಲ್ಲಿ ಕಂಡೆವು. ಇನ್ನೊಂದು ಕಡೆ ರಕ್ಷಣಾ ಪಡೆಗಳ ಧೀರ ರಕ್ಷಣಾ ಕಾರ್ಯಾಚರಣೆಗಳನ್ನು ನೋಡಿದೆವು ಮತ್ತು ತಮ್ಮ ಜೀವಗಳನ್ನೇ ಪಣಕ್ಕಿಟ್ಟು ಇತರರನ್ನು ಉಳಿಸಲು ಹೆಣಗಿದ ಸಾವಿರಾರು ಜನಸಾಮಾನ್ಯರನ್ನು ಕೂಡ ನೋಡಿದೆವು.



ಜಾತಿಗಳು ಮತ್ತು ಸಮುದಾಯಗಳನ್ನು ಮೀರಿದ ಸಾಮುದಾಯಿಕ ಮತ್ತು ಸಾಮಾಜಿಕ ಕೆಲಸದ ಸಂಸ್ಕೃತಿಗಳ ದೀರ್ಘಕಾಲೀನ ಪರಂಪರೆಗಳ ಪ್ರತಿಬಿಂಬ, ಜನಸಾಮಾನ್ಯರ ಧೈರ್ಯ, ಸಾಹಸಗಳ ಸಂಕೇತ.

ನೆರೆಗಳು ಆರಂಭವಾದಾಗ ರಾಜ್ಯ ಸರಕಾರ ನೀರು ನುಗ್ಗುತ್ತಿದ್ದ ಪ್ರದೇಶಗಳಲ್ಲಿ ಇದ್ದ ಕುಟುಂಬಗಳನ್ನು ರಕ್ಷಿಸುವ ಮತ್ತು ಅವರಿಗೆ ಪರಿಹಾರ ಶಿಬಿರಗಳನ್ನು ಏರ್ಪಡಿಸುವ ಮತ್ತು ನಡೆಸುವ ಕೆಲಸಕ್ಕೆ ಗಮನ ಕೇಂದ್ರೀಕರಿಸಬೇಕಾಗಿತ್ತು. ಆಗಸ್ಟ್ 17ರಿಂದ 19ರ ವರೆಗಿನ ಮೂರೇ ದಿನಗಳಲ್ಲಿ ಮತ್ತೆ–ಮತ್ತೆ ಭಾರಿ ಮಳೆ ಸುರಿಯುತ್ತಿದ್ದಾಗ ಎರಡು ಲಕ್ಷಕ್ಕೂ ಹೆಚ್ಚು ಮಂದಿಯ ಪ್ರಾಣ ರಕ್ಷಣೆ ಮಾಡಲಾಯಿತು. 3274 ಶಿಬಿರಗಳಲ್ಲಿ 10 ಲಕ್ಷ ಮಂದಿಗೆ ಆಶ್ರಯ ಒದಗಿಸಲಾಯಿತು. ಇಂದಿಗೂ ಲಕ್ಷಾಂತರ ಮಂದಿ ತಮ್ಮ ಮನೆಗಳಿಗೆ ಹಿಂದಿರುಗುವ ಪರಿಸ್ಥಿತಿಯಲ್ಲಿಲ್ಲ. ಅವರಲ್ಲಿ ಕೆಲವರು ಮನೆ–ಮಾರು ಕಳಕೊಂಡಿದ್ದಾರೆ. ಇನ್ನು ಕೆಲವರ ಮನೆಗಳು ಅಪಾರ ಹಾನಿಗೊಳಗಾಗಿವೆ, ವಾಸ ಯೋಗ್ಯವಾಗಿಲ್ಲ, ಅಥವ ಸ್ವಚ್ಛಗೊಳಿಸಲು ದಿನಗಳೇ ಬೇಕು. ಆದ್ದರಿಂದ ಪರಿಹಾರ ಶಿಬಿರಗಳು ಮುಂದುವರೆಯಬೇಕು. ಇದಕ್ಕೆ ಅಪಾರ ಸಂಪನ್ಮೂಲಗಳು ಬೇಕು.

ಆಗಿರುವ ಹಾನಿಗಳ ಪ್ರಾಥಮಿಕ ಅಂದಾಜು 20,000 ಕೋಟಿ ರೂ., ಆದರೆ ಅದು ಇದನ್ನೂ ಮೀರಬಹುದು ಎಂದು ಕೇರಳ ಸರಕಾರ ಎಚ್ಚರಿಸಿದೆ. ಅದು ಪಟ್ಟಿ ಮಾಡಿರುವ ತಕ್ಷಣದ ಸವಾಲುಗಳೆಂದರೆ, ಸಾಂಕ್ರಾಮಿಕಗಳು ಹರಡದಂತೆ ತಡೆಯುವುದು, ಶುದ್ಧ ಕುಡಿಯುವ ನೀರನ್ನು ಒದಗಿಸುವುದು, ವಿದ್ಯುತ್ ಮತ್ತು ದೂರಸಂಪರ್ಕಗಳನ್ನು ಮತ್ತೆ ನೆಲೆಗೊಳಿಸುವುದು, ಲಕ್ಷಾಂತರ ಮನೆಗಳ ಪುನರ್ರಚನೆ, ರಸ್ತೆಗಳು ಮತ್ತು ಸೇತುವೆಗಳನ್ನು ಕಟ್ಟುವುದು ಅಥವ ರಿಪೇರಿ ಮಾಡುವುದು. ಇವಕ್ಕೆಲ್ಲ ತಕ್ಷಣದ ಪರಿಹಾರವಾಗಿ ರಾಜ್ಯ ಸರಕಾರ ಕೇಂದ್ರ ಸರಕಾರದಿಂದ 2600 ಕೋಟಿ ರೂ.ಗಳನ್ನು ಕೇಳಿದೆ. ಇದುವರೆಗೆ ಕೇಂದ್ರ ಸರಕಾರ 600 ಕೋಟಿ ರೂ.ಗಳನ್ನು ಹಣಸಹಾಯವಾಗಿ ಕೊಟ್ಟಿದೆ. ರಾಜ್ಯ ಸರಕಾರ ತಾನು ಮಾರುಕಟ್ಟೆಯಿಮದ ಹಣ ಸಂಗ್ರಹಿಸಲು ಸಾಧ್ಯವಾಗುವಂತೆ ಕೇಂದ್ರ ಒಂದಿಷ್ಟು ಧೋರಣಾ ನಿರ್ಧಾರಗಳನ್ನು ಕೈಗೊಳ್ಳಬೇಕು ಎಂದೂ ಕೇಳಿದೆ. ರಾಜ್ಯ ಸರಕಾರ "ನವಕೇರಳ" ವೊಂದನ್ನು ಪುನರ್ರಚಿಸುವ ಕಣ್ಣೋಟವನ್ನು ಕೊಟ್ಟಿದೆ.

ಕೇರಳ ಅಭೂತಪೂರ್ವ ಪರಿಸ್ಥಿತಿಯೊಂದನ್ನು ಎದುರಿಸುತ್ತಿದೆ. ಆದರೆ ಕೇರಳದ ಸರಕಾರ ಮತ್ತು ಜನತೆ ಈ ಗಂಭೀರ ವಿಪತ್ತಿಗೆ ಸ್ಪಂದಿಸಿದ ರೀತಿ ಭಾರತದ ಇತರರೆಲ್ಲರಿಗೂ ಒಂದು ಪಾಟ ನೀಡಿದೆ.

ಮೊದಲ ಮಹತ್ವದ ಪಾಟವೆಂದರೆ ಯಾವುದೇ ಪಕ್ಷಪಾತದ ಛಾಯೆಯಿಲ್ಲದೆ ಹತ್ತಾರು ಸವಾಲುಗಳನ್ನು ಗುರುತಿಸಿ ಎದುರಿಸುವ ರಾಜಕೀಯ ಇಚ್ಚಾಶಕ್ತಿ , ಆಡಳಿತ ಸೂಕ್ಷ್ಮತೆ ಮತ್ತು ದಕ್ಷತೆ. ಪಿಣರಾಯಿ ವಿಜಯನ್ ನೇತೃತ್ವದ ಎಲ್‌ಡಿಎಫ್ ಸರಕಾರದ ಅಡಿಯಲ್ಲಿ ಪರಿಹಾರ ಮತ್ತು ಮರುವಸತಿಯ ಕಾರ್ಯಾಚರಣೆ ಎಲ್ಲೆಡೆಗಳಿಂದಲೂ ಪ್ರಶಂಸೆ ಪಡೆದಿದೆ, ಇದು "ಇತ್ತೀಚಿನ ಅತ್ಯುತ್ತಮ ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆ" ಎಂದು ವರ್ಣಿಸಲಾಗುತ್ತಿದೆ. ಅತ್ಯಂತ ಕಷ್ಟಕರ ಅವಧಿಯಲ್ಲಿ ಪರಿಸ್ಥಿತಿಯು

ಪುಟ 12 ನೋಡಿ



ಮಹಾಪ್ರವಾಹದ ವಿನಾಶದ ನಂತರ ನವಕೇರಳ ಕಟ್ಟುವುದು ಎಂದರೇನು?

ಇಂಡಿಯನ್ ಎಕ್ಸ್‌ಪ್ರೆಸ್ ದಿನ ಪತ್ರಿಕೆಗೆ ನೀಡಿದ ಸಂದರ್ಶನವೊಂದರಲ್ಲಿ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಈ ಕುರಿತ ಪ್ರಶ್ನೆಗಳಿಗೆ ನೀಡಿದ ಉತ್ತರಗಳು ಹೀಗಿವೆ:

* **ಮರುವಸತಿಯ ಬಗ್ಗೆ ಮಾತಾಡುತ್ತ ನೀವು ಇದು ಮತ್ತೆ ಕಟ್ಟುವುದಲ್ಲ, ಒಂದು ನವ ಕೇರಳವನ್ನು ಕಟ್ಟುವುದು ಎಂದಿದ್ದೀರಿ. ಅಂದರೆ ಏನು?**

ರಕ್ಷಣಾ ಕಾರ್ಯ ಮುಗಿದಿದೆ, ಈಗ ಪರಿಹಾರ, ಮರುವಸತಿಯ ಸಮಯ. ಮರುವಸತಿಯೆಂದರೆ ಹಿಂದಿದ್ದ ರಚನೆಗಳನ್ನೇ ಅಲ್ಲಿಡುವ ಕೆಲಸ ವಾಗಬಾರದು ಎಂಬುದು ನಮ್ಮ ಆಶಯ. ಆದ್ದರಿಂದಲೇ ನಾನು ಮತ್ತೆ ಕಟ್ಟುವ ಬದಲು ಒಂದು ನವ ಕೇರಳವನ್ನು ಕಟ್ಟಲು ಗಮನ ಕೇಂದ್ರೀಕರಿಸಬೇಕು ಎಂದಿದ್ದೆ. ಸಮಗ್ರ ಯೋಜನೆ ರೂಪಿಸುತ್ತೇವೆ. ಪ್ರತಿಯೊಂದು ಮೂಲೆಯಿಂದ ಪರಿಣಿತರನ್ನು ತರುತ್ತೇವೆ. ಒಂದು ಮೂರ್ತ ಯೋಜನೆಯನ್ನು ಕಾರ್ಯಗತಗೊಳಿಸುತ್ತೇವೆ. ನಾನು ಈ ಮೊದಲು ಹೇಳಿರುವ ಹಾಗೆ ಕೇರಳ ಪುಟಿದೇಳುವ ಸಾಮರ್ಥ್ಯವನ್ನು ಪ್ರದರ್ಶಿಸಿದೆ. ಈಗ ಜಗತ್ತಿಗೆ ಇನ್ನೊಂದು ಮಾದರಿಯನ್ನು ಒದಗಿಸುವ ಸಮಯ.

ಪುಟ 12 ನೋಡಿ







ವ್ಯಂಗ್ಯಚಿತ್ರ: ಮಂಜುಲ್, ಮಿಡ್‌ಡೇ

0.1ಶೇ. ಶ್ರೀಮಂತರ ಪರವಾದ ಧೋರಣೆಗಳ ವಿರುದ್ಧ 99.9ಶೇ. ಜನಸಾಮಾನ್ಯರ-ಪರ ಧೋರಣೆಗಳಿಗಾಗಿ



ಸಪ್ಟಂಬರ್ 5: ಎಲ್ಲರ ನಡಿಗೆ-ದಿಲ್ಲಿಯ ಕಡೆಗೆ

ಇದು ದೇಶದ ಕೋಟ್ಯಂತರ ಕಾರ್ಮಿಕರು, ರೈತರು ಮತ್ತು ಕೃಷಿ ಕೂಲಿಕಾರರ ನಡುವೆ ಕೆಲಸ ಮಾಡುತ್ತಿರುವ ಸಿಐಟಿಯು, ಎಐಕೆಎಸ್(ಅಖಿಲ ಭಾರತ ಕಿಸಾನ್ ಸಭಾ) ಮತ್ತು ಎಐಎಡಬ್ಲ್ಯುಯು (ಅಖಿಲ ಭಾರತ ಕೃಷಿಕೂಲಿಕಾರರ ಸಂಘ) ನೀಡಿರುವ ಕರೆ.

ಕೇವಲ 0.1%ದಷ್ಟು ಶ್ರೀಮಂತರ ಸಮೃದ್ಧಿಗಾಗಿ ಕಲ್ಪಿಸಿರುವ ಧೋರಣೆಗಳನ್ನು ಒಪ್ಪಲು ಸಾಧ್ಯವಿಲ್ಲ ಎಂದು ದುಡಿಯುವ ಜನಗಳು ಒಕ್ಕೊರಲಿನಿಂದ ಹೇಳಬೇಕಾದ ಸಮಯ ಬಂದಿದೆ;

ಜಾತಿ-ಧರ್ಮ-ಪ್ರಾದೇಶಿಕ ಭಾವನೆಗಳನ್ನು ಕೆರಳಿಸಿ ಜನರ ಐಕ್ಯತೆಯನ್ನು ಮುರಿಯುವ ಕೋಮುವಾದಿ ಹುನ್ನಾರಗಳನ್ನು ಸೋಲಿಸಲು ದೃಢ ಐಕ್ಯತೆಯನ್ನು ಕಟ್ಟ ಬೇಕಾದ ಸಮಯ ಬಂದಿದೆ;

ಒಟ್ಟಿನಲ್ಲಿ, ಈ ದೇಶದ ಬಹುಸಂಖ್ಯೆಯ ಜನರ ಹಿತ ಕಾಪಾಡಲು ಅಗತ್ಯವಾದ ಪರ್ಯಾಯ ಧೋರಣೆಗಳಿಗಾಗಿ ಒತ್ತಾಯ ಮಾಡಲೇಬೇಕಾದ ಸಮಯ ಬಂದಿದೆ ಎಂದು ಮನಗಂಡಿರುವ ಈ ಸಂಘಟನೆಗಳು ಒಂದು ದೃಢ ಹೋರಾಟದ ಕರೆ ನೀಡಿವೆ.

ಆಗಸ್ಟ್ 9, 2018ರಂದು ಜೈಲು ಭರೋ, ಇದನ್ನನುಸರಿಸಿ ಸ್ವಾತಂತ್ರ್ಯ ದಿನಾಚರಣೆಯ ಹಿಂದಿನ ದಿನ ಆಗಸ್ಟ್ 14-15ರ ರಾತ್ರಿಯಿಡೀ ಸ್ವಾತಂತ್ರ್ಯೋತ್ಸವ ಸಾಮೂಹಿಕ ಜಾಗರಣೆ ನಡೆಸಿದ ನಂತರ ಈಗ ಸೆಪ್ಟೆಂಬರ್ 5, 2018ರಂದು ದೇಶದ ರಾಜಧಾನಿಗೆ ಲಗ್ಗೆಯಿಟ್ಟು 99.9% ದಷ್ಟಿರುವ ಜನಸಾಮಾನ್ಯರ ಪರ ಪರ್ಯಾಯ ಧೋರಣೆಗಳನ್ನು ಒತ್ತಾಯಿಸಿ "ಮಜ್ದೂರ್-ಕಿಸಾನ್ ಪ್ರತಿಭಟನಾ ಪ್ರದರ್ಶನ" ನಡೆಸಲು ಸಿದ್ಧರಾಗುತ್ತಿದ್ದಾರೆ.

ದೇಶದ ದುಡಿಯುವ ಜನಗಳ ಆಕ್ರೋಶ ಏಕೆ, ಅವರು ಈ ದೇಶದ ಆಳರಸರಿಂದ ಕೇಳುತ್ತಿರುವುದಾದರೂ ಏನು ಎಂಬ ದೇಶದ ದುಡಿಯುವ ಜನರ ಕೆಲುವ ಪ್ರಮುಖ ಬೇಡಿಕೆಗಳ ಬಗ್ಗೆ ಹಿಂದಿನ ಸಂಚಿಕೆಗಳಲ್ಲಿ ಓದಿದ್ದೀರಿ. ಈ ವಾರ ಇನ್ನು 4 ಪ್ರಮುಖ ಬೇಡಿಕೆಗಳ ಬಗ್ಗೆ....

ಉದ್ಯೋಗರಹಿತ ಬೆಳವಣಿಗೆಯಿಂದ ಉದ್ಯೋಗನಾಶದ ವಿಷವರ್ತುಲದೊಳಕ್ಕೆ

ಮೋದಿ ಸರಕಾರ ವರ್ಷಕ್ಕೆ 2 ಕೋಟಿ ಉದ್ಯೋಗಗಳನ್ನು ನಿರ್ಮಿಸುವುದಂತೂ ದೂರ, ಅದು ಉದ್ಯೋಗನಾಶಕ ಸರಕಾರವಾಗಿ ಬಿಟ್ಟಿದೆ ಎಂಬುದು ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ. ಉದ್ಯೋಗ ನಷ್ಟದಿಂದ ಮತ್ತಷ್ಟು ಉದ್ಯೋಗನಾಶದತ್ತವೇ ಸಾಗುವ ವಿಷವರ್ತುಲಕ್ಕೆ ತಳ್ಳದ ವಿನಾಶಕಾರಿ ಧೋರಣೆಗಳನ್ನು ಬದಲಿಸಬೇಕು, ಕೆಲಸ ಮಾಡಲು ಸಿದ್ಧರಿರುವ ಎಲ್ಲರಿಗೂ, ವಿಶೇಷವಾಗಿ ಯುವ ಜನರಿಗೆ ಘನತೆಯುಳ್ಳ ಉದ್ಯೋಗ ನಿರ್ಮಿಸಬಲ್ಲ ಧೋರಣೆಗಳನ್ನು ರೂಪಿಸಿ ಅನುಸರಿಸಬೇಕು ಎಂಬುದು ರೈತ-ಕಾರ್ಮಿಕ ಸಂಘರ್ಷ ರ್ಯಾಲಿಯ ಒಂದು ಪ್ರಮುಖ ಆಗ್ರಹ.

ಬಿಜೆಪಿ 2014ರಲ್ಲಿ ಅಧಿಕಾರ ಪಡೆಯಲು ಒಂದು ಮುಖ್ಯ ಕಾರಣ ಪ್ರಧಾನ ಮಂತ್ರಿ ಅಭ್ಯರ್ಥಿ ಎಂದು ಅದು ಜನಗಳ ಮುಂದಿಟ್ಟಿದ್ದ ನರೇಂದ್ರ ಮೋದಿಯವರು ಯುವಜನರಿಗೆ ಕೊಟ್ಟ ವರ್ಷಕ್ಕೆ ಎರಡು ಕೋಟಿ ಉದ್ಯೋಗಗಳ ಆಶ್ವಾಸನೆ. ಹಿಂದಿನ ಒಂದು ದಶಕದ ಯುಪಿಎ ಆಳ್ವಿಕೆಯ ಉದ್ಯೋಗರಹಿತ ಬೆಳವಣಿಗೆಯಿಂದ ಕಂಗೆಟ್ಟಿದ್ದ ಜನರು, ಅದರಲ್ಲೂ ಯುವಜನರು ಇದನ್ನು ಹಾರ್ದಿಕವಾಗಿ ಸ್ವಾಗತಿಸಿದರು. ಆದರೆ ನಾಲ್ಕು ವರ್ಷಗಳು ಕಳೆದರೂ ಆ ಆಶ್ವಾಸನೆ ಈಡೇರಿಲ್ಲ. ಈಡೇರಲೂ ಸಾಧ್ಯವಿಲ್ಲ. ಏಕೆಂದರೆ ಮೋದಿ ಸರಕಾರವೂ ಅನುಸರಿಸುತ್ತಿರುವುದು ಅದೇ ಉದ್ಯೋಗ ನಾಶ ಮಾಡುವ ಧೋರಣೆಗಳನ್ನೇ-ಅದೂ ಇನ್ನಷ್ಟು ರಭಸದಿಂದ, ನಿಷ್ಕರುಣೆಯಿಂದ.

ಈ ಆಶ್ವಾಸನೆಗಳ ನಾಲ್ಕುವರ್ಷಗಳ ನಂತರವೂ, ರೈಲ್ವೆಯಲ್ಲಿ 1ಲಕ್ಷ ಹುದ್ದೆಗಳಿಗೆ 2.5 ಕೋಟಿ ಅರ್ಜಿಗಳು ಬರುತ್ತವೆ, ಉತ್ತರಪ್ರದೇಶದಲ್ಲಿ 368 ಹುದ್ದೆಗಳಿಗೆ 23ಲಕ್ಷ ಅರ್ಜಿಗಳು, ಹರ್ಯಾಣದಲ್ಲಿ ಒಂಭತ್ತು ಹುದ್ದೆಗಳಿಗೆ 18 ಸಾವಿರ, ರಾಜಸ್ಥಾನ ಸಚಿವಾಲಯದ 18 ಹುದ್ದೆಗಳಿಗೆ 12 ಸಾವಿರ ಅರ್ಜಿಗಳು ಬರುತ್ತವೆ,

ಸಿಎಂಐಇ ಅಂಕಿ-ಅಂಶಗಳ ಪ್ರಕಾರ 2016ರಲ್ಲಿ 15 ವರ್ಷ ಮೇಲ್ಪಟ್ಟ ವಯೋಗುಂಪಿನ ಜನಸಂಖ್ಯೆಯಲ್ಲಿ 43% ಉದ್ಯೋಗ ಮಾಡುತ್ತಿದ್ದರು. 2018ರಲ್ಲಿ ಇದು 40%ಕ್ಕೆ ಇಳಿದಿದೆ. 1.43 ಕೊಟಿ ಜನ ಉದ್ಯೋಗ ಕಳಕೊಂಡಿದ್ದಾರೆ. ಈ ವಯೋಗುಂಪಿನ 22% ಮಹಿಳೆಯರು ಮಾತ್ರ ಉದ್ಯೋಗದಲ್ಲಿದ್ದಾರೆ. ಇದು ವಿಶ್ವದಲ್ಲೇ ಅತಿ ಕಡಿಮೆ ಪ್ರಮಾಣ. ನಿರುದ್ಯೋಗ ದರ ಈಗ 5% ಅಂದರೆ ಸುಮಾರು 2 ಕೋಟಿಯಷ್ಟು. 13 ಕೋಟಿ ಜನಗಳಿಗೆ ಸರಿಯಾದ ಕೆಲಸವಿಲ್ಲ, ಹೆಚ್ಚೆಂದರೆ ಅತಿ ಕಡಿಮೆ ಸಂಬಳದ ತಾತ್ಕಾಲಿಕ ಕೆಲಸಗಳಿಂದಲೇ ಹೊಟ್ಟೆ ಹೊರೆಯಬೇಕು.

ಉದ್ಯೋಗನಾಶಕ ಸರಕಾರ

ಮೋದಿ ಸರಕಾರ ವರ್ಷಕ್ಕೆ 2 ಕೋಟಿ ಉದ್ಯೋಗಗಳನ್ನು ನಿರ್ಮಿಸುವುದಂತೂ ದೂರ, ಅದು ಉದ್ಯೋಗನಾಶಕ ಸರಕಾರವಾಗಿ ಬಿಟ್ಟಿದೆ ಎಂಬುದು ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ.(ಕಳೆದ ಸಂಚಿಕೆ 34ರ ಪುಟ 12 ನೋಡಿ)

ಉದ್ಯೋಗ ನಷ್ಟಗಳು ಅತಿ ಹೆಚ್ಚು ತಟ್ಟಿರುವುದು ಕೈಗಾರಿಕಾ ಮತ್ತು ಕಟ್ಟಡ ನಿರ್ಮಾಣ ವಲಯಗಳನ್ನು. 21ನೇ ಶತಮಾನದ ಮೊದಲ ದಶಕದಲ್ಲಿ ಈ ವಲಯಗಳಲ್ಲಿ 10% ವಾರ್ಷಿಕ ದರದಲ್ಲಿ ಉದ್ಯೋಗಗಳ ನಿರ್ಮಾಣವಾಗುತ್ತಿತ್ತು. ಮೋದಿ ಆಳ್ವಿಕೆಯ 4ವರ್ಷಗಳಲ್ಲಿ ಅದು 4%ಕ್ಕೆ ಇಳಿದಿದೆ. ಅಂದರೆ ಹತಾಶರಾಗಿ ಕೃಷಿ ಕೆಲಸಗಳನ್ನು ಬಿಟ್ಟು ಉದ್ಯೋಗ ಅರಸಿ ನಗರಗಳಿಗೆ ಬರುತ್ತಿದ್ದ ಬಡ ಜನಗಳಿಗೆ ಅದೂ ದಕ್ಕದಂತಾಗುತ್ತಿದೆ.

ನೋಟುರದ್ಧತಿ ಮತ್ತು ಜಿಎಸ್‌ಟಿಯಂತೂ ಗಾಯದ ಮೇಲೆ ಬರೆ ಎಳೆದಂತಾಗಿದೆ. ಇವು ಅಸಂಘಟಿತ ವಲಯದ ಉದ್ಯೋಗಗಳನ್ನೂ ನಾಶ ಮಾಡಿದವು.

ಈ ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿಗಳ ಕೌಶಲ ಯೋಜನೆಯ ಅಡಿಯಲ್ಲಿ ತರಬೇತಿ ಪಡೆದವರಲ್ಲಿ ಕೇವಲ 15% ಕ್ಕೆ ಉದ್ಯೋಗ ದೊರೆತಿರುವುದರಲ್ಲಿ, ಮುದ್ರಾ ಯೋಜನಯ ಅಡಿಯಲ್ಲಿ ಸ್ವದ್ಯೋಗಕ್ಕೆ ಪಡೆದ ಸಾಲಗಳ ಸರಾಸರಿ ಕೇವಲ 44 ಸಾವಿರ ರೂ. ಅಂದರೆ ಬೀದಿ ಬದಿಯಲ್ಲಿ ಪಕೋಡ ಮಾರಲಷ್ಟೇ ಸಾಲುವಷ್ಟು ಎಂದರೆ ಆಶ್ಚರ್ಯ ಪಡಬೇಕಿಲ್ಲ.

ಕೃಷಿ ಬಿಕ್ಕಟ್ಟಿನಿಂದ ಉದ್ಯೋಗ ಬಿಕ್ಕಟ್ಟು

ಭಾರತದಲ್ಲಿ ಕೃಷಿ ವಲಯವೇ ಉದ್ಯೋಗದ ಪ್ರಮುಖ ಮೂಲ: ಸ್ವ-ಉದ್ಯೋಗಕ್ಕೂ, ಕೂಲಿ

ಪುಟ 10 ನೋಡಿ

ಕಾರ್ಮಿಕ ಕಾನೂನುಗಳ ಸುಧಾರಣೆ ಹೆಸರಲ್ಲಿ ಕೂಲಿ ಗುಲಾಮಿಕೆಯ ಹೇರಿಕೆ

ಹಣದ ಥೈಲಿಗಳ ಋಣಸಂದಾಯದ ಧೋರಣೆಗಳ ವಿರುದ್ಧ ಸರಕಾರಕ್ಕೆ ಎಚ್ಚರಿಕೆ

ಎಲ್ಲ ಕೆಲಸದ ಸ್ಥಳಗಳಲ್ಲೂ ಉದ್ಯೋಗದ ಸಂಬಂಧಗಳನ್ನು ತಾತ್ಕಾಲಿಕ ಮತ್ತು ಅಭದ್ರಗೊಳಿಸುವ ಒಂದು ಸಮಗ್ರ ಹುನ್ನಾರ ಈ ಬಿಜೆಪಿ ಸರಕಾರದ್ದು ಎಂಬುದು ಸ್ಪಷ್ಟವಾಗಿದೆ. ಚುನಾವಣೆಗಳಲ್ಲಿ ಬಾರಿ ಗೆಲುವು ಸಾಧಿಸಲು ನೆರವಾದ ದೇಶಿ-ವಿದೇಶಿ ಕಾರ್ಪೊರೇಟ್‌ಗಳ, ಹಣದ ಥೈಲಿಗಳ 'ಋಣ'ಕ್ಕೆ ಬದ್ಧವಾದ ಈ ಸರಕಾರ ಅದನ್ನು ತೀರಿಸಲು ಇಡೀ ಕಾರ್ಮಿಕ ವರ್ಗವನ್ನು ಅವರ ಗುಲಾಮಗಿರಿಯತ್ತ ತಳ್ಳಲು ಮುಂದಾಗಿದೆ.

ಮಾಲಕರು ಕಾರ್ಮಿಕ ಕಾನೂನುಗಳಿಂದ ಏಕೆ ತಪ್ಪಿಸಿಕೊಳ್ಳ ಬಯಸುತ್ತಾರೆ. ಏಕೆಂದರೆ ತಮ್ಮ ಗರಿಷ್ಟ ಲಾಭಕ್ಕಾಗಿ.

ಆದರೆ ಸರಕಾರ ಅದಕ್ಕೆ ಏಕೆ ಅವಕಾಶ ಮಾಡಿಕೊಡುತ್ತದೆ? ಸಾಮಾನ್ಯ ನಾಗರಿಕನೊಬ್ಬ ಕಾನೂನು ಉಲ್ಲಂಘಿಸಿದರೆ ಕಾನೂನುಪಾಲಕರು ಅವರನ್ನಿ ಶಿಕ್ಷಿಸುತ್ತಾರೆ. ಆದರೆ ಕಾರ್ಮಿಕ ಕಾನೂನು ಉಲ್ಲಂಘಿಸಿದವರಿಗೆ ಶಿಕ್ಷೆಯಾಗುವುದಿಲ್ಲ. ಇದುವರೆಗೆ ಯಾವುದೇ ಮಾಲಕನಿಗೆ ಈ ಕಾರಣಕ್ಕಾಗಿ ಶಿಕ್ಷೆಯಾದುದರ ಉದಾಹರಣೆಯಿಲ್ಲ. ಬದಲಾಗಿ ಈ ಕಾನೂನುಗಳನ್ನು ಪಾಲಿಸಬೇಕು ಎಂದು ಆಗ್ರಹಿಸುವ ಕಾರ್ಮಿಕರನ್ನೇ ಸುಳ್ಳು ಕೇಸುಗಳಲ್ಲಿ ಸಿಲುಕಿಸಲಾಗಿದೆ.

ಈಗಂತೂ ಸರಕಾರ ಈ ಕಾನೂನುಗಳನ್ನೇ ತಿದ್ದುಪಡಿ ಮಾಡುತ್ತಿದೆ, ಮಾಲಕರ ಪರವಾಗಿ!

ಕಾರ್ಮಿಕರಿಗೆ ಈಗ ಕಾನೂನು ಪ್ರಕಾರ ಲಭ್ಯವಾಗಿರುವ ಎಂಟು ಗಂಟೆಗಳ ಕೆಲಸ, ಕನಿಷ್ಟ ಕೂಲಿ, ಸಮಾನ ಕೆಲಸಕ್ಕೆ ಸಮಾನ ಸಂಬಳ, ಬೋನಸ್, ಪಿಎಫ್, ಇಎಸ್‌ಐ, ಕಾರ್ಮಿಕ ಸಂಘಟನೆಯ ಹಕ್ಕು ಇತ್ಯಾದಿ ಕಠಿನ ಹೋರಾಟಗಳ ಮೂಲಕ, ಅಪಾರ ಕಷ್ಟ-ನಷ್ಟಗಳನ್ನು ಅನುಭವಿಸಿ ಪಡೆದಂತವುಗಳು. ಯಾವ ಸರಕಾರ ಅಥವ ಮಾಲಕರೂ ಉದಾರವಾಗಿ ದಯಪಾಲಿಸಿದ್ದಲ್ಲ.

ಮಾಲಕವರ್ಗ, ಬಂಡವಾಳಿಗರು ಈ ಎಲ್ಲ ಕಾನೂನುಗಳನ್ನು ದುರ್ಬಲಗೊಳಿಸಲು ಸರಕಾರಗಳ ಮೇಲೆ ಒತ್ತಡಗಳನ್ನು ಹಾಕುತ್ತಲೇ ಬಂದಿದ್ದಾರೆ. ಕೇಂದ್ರದಲ್ಲಿನ ಸರಕಾರಗಳು ಈ ಒತ್ತಡಗಳಿಗೆ ಮಣಿಯುತ್ತ ಇವನ್ನು ದುರ್ಬಲಗೊಳಿಸಲು, ಬಳಸದಂತೆ ಮಾಡಲು ಹಲವಾರು ತಂತ್ರಗಳನ್ನು ಮಾಡಿಕೊಂಡು ಬಂದಿದ್ದಾರೆ. ಹಿಂದಿನ ಕಾಂಗ್ರೆಸ್ ನೇತೃತ್ವದ ಸರಕಾರ ಕಾರ್ಮಿಕ ಸಂಘಗಳ ನೊಂದಾವಣೆಯನ್ನೇ ಅತ್ಯಂತ ಕಷ್ಟದಾಯಕವಾಗಿ ಮಡಲು ಪ್ರಯತ್ನಿಸಿತು. ಕಾರ್ಮಿಕರ ದೃಢ ವಿರೋದ, ಹೋರಾಟಗಳಿಂದಾಗಿ ಅದು ಸಾಧ್ಯವಾಗಲಿಲ್ಲ.

ಆದರೆ ಸ್ವಂತ ಬಹುಮತ ಪಡೆಯಲು ಸಾಧ್ಯವಾಗಿರುವ ಬಿಜೆಪಿ ಸರಕಾರಕ್ಕೆ ಅಧಿಕಾರದ ಮತ್ತು ಏರಿದೆ. ತಾನು ಏನು ಬೇಕಾದರೂ ಮಾಡಬಹುದು, ಕಾರ್ಮಿಕರ ಪ್ರತಿಭಟನೆಯನ್ನು ಉಪೇಕ್ಷಿಸಬಹುದು ಎಂದು ಅದು ಭಾವಿಸಿದೆ. ಹಿಂದಿನ ಸರಕಾರಗಳು ಮಾಡಲಾರದ್ದನ್ನು ಮಾಡಲು ಅದು ಹೊರಟಿದೆ. ಅಂದರೆ ಕಾರ್ಮಿಕ ಕಾನೂನುಗಳಲ್ಲಿ 'ಸುಧಾರಣೆಗಳ' ಹೆಸರಲ್ಲಿ ಸಾರಾಸಗಟು ಬದಲಾವಣೆಗಳನ್ನು ತರುವ ಪ್ರಯತ್ನವನ್ನು ಆಗಲೇ ಆರಂಭಿಸಿದೆ.

ಕಾರ್ಮಿಕರು ಮತ್ತು ಅವರ ಸಂಘಟನೆಗಳು ಕೂಡಾ ಈಗಿರುವ ಕಾರ್ಮಿಕ ಕಾನೂನುಗಳು ಪರಿಪೂರ್ಣ ಎಂದು ಭಾವಿಸಿಲ್ಲ. ಮಾಲೀಕರು ನಿರ್ಭೀತಿಯಿಂದ ಉಲ್ಲಂಘನೆ ಮಾಡಲು ಮತ್ತು ಜಾರಿ ಮಾಡಬೇಕಾದ ಯಂತ್ರವು ನಿಷ್ಕ್ರಿಯವಾಗಿರಲು ಅನುಕೂಲವಾಗುವಂತೆ ಅವುಗಳಲ್ಲಿ ಸಾಕಷ್ಟು ನ್ಯೂನತೆಗಳಿವೆ. ಕಾರ್ಮಿಕರು ಮತ್ತು ಅವರ ಸಂಘಟನೆಗಳು ಕೂಡಾ ನಿಜವಾದ ಅರ್ಥದಲ್ಲಿ, ಕಾರ್ಮಿಕರ ಪರವಾಗಿ, ನ್ಯೂನತೆಗಳನ್ನು ಸರಿಪಡಿಸಿ ಎಲ್ಲಾ ಕಾರ್ಮಿಕರಿಗೂ ಕಾನೂನಿನ ರಕ್ಷಣೆ ವಿಸ್ತರಿಸುವಂತೆ, ಕಾರ್ಮಿಕ ಕಾನೂನುಗಳನ್ನು 'ಸುಧಾರಣೆ' ಮಾಡಲು ಬಯಸುತ್ತವೆ. ಆದರೆ ಮೋದಿ ಸರ್ಕಾರ ಇದನ್ನು ಮಾಡಲು ಸಿದ್ಧವಿಲ್ಲ. ದೇಶದ ಇಡೀ ದುಡಿಯುವ ಜನತೆಯ ಹಿತಕಾಯುವ ರೀತಿಯಲ್ಲಿ

ಪುಟ 11 ನೋಡಿ

ದೇಶದ ಸಂಪತ್ತನ್ನೆಲ್ಲ ಮಾರಿ ದುಡಿಮೆಗಾರರನ್ನು ಅಗ್ಗದ ಸರಕಾಗಿಸುವ ಖಾಸಗೀಕರಣ

ದೇಶವನ್ನು ಒಮ್ಮೆ ಸುತ್ತಿದರೆ ಕಾಣಸಿಗುವುದು ಸರ್ಕಾರದ ಅಧೀನದಲ್ಲಿರುವ ಗಣಿ, ರಸ್ತೆ, ಸೇತುವೆ, ಬಂದರು, ಶಾಲೆ, ಕಾಲೇಜು, ಆಸ್ಪತ್ರೆ ಎಲ್ಲವನ್ನೂ ಮಾರಾಟಕ್ಕಿಟ್ಟಿರುವುದು. ಮೋದಿ ಸರಕಾರಕ್ಕೆ ಸಲಹೆ ಮಾಡುತ್ತಿರುವ ಕುತಂತ್ರಿ ಮೆದುಳುಗಳು ಖಾಸಗಿ ಕಂಪನಿಗಳಿಗೆ ಲಾಭ ದೋಚಲು ಹೊಸ-ಹೊಸ ದಾರಿಗಳನ್ನು ಶೋಧಿಸುತ್ತಿವೆ. ಅದರಿಂದ ಜನಗಳ ಮೇಲೆ ಎಷ್ಟು ಹೊರೆ ಹೆಚ್ಚುತ್ತದೆ ಎಂಬ ಪರಿವೆಯೇ ಅವರಿಗಿಲ್ಲ.

ಪುಟ 10

ಸಂವಿಧಾನಿಕ ಹಕ್ಕುಗಳ ಪರಿಣಾಮಕಾರಿ ಜಾರಿ ಮತ್ತು ಸಾಮಾಜಿಕ ನ್ಯಾಯ ಇಡೀ ದುಡಿಯುವ ವರ್ಗದ ಬೇಡಿಕೆ

ಸಾಮಾಜಿಕ ತಾರತಮ್ಯ, ದೌರ್ಜನ್ಯ ಕೇವಲ ದಲಿತರು ಮತ್ತು ಆದಿವಾಸಿಗಳ ಕಾಳಜಿಯಲ್ಲ, ಇಡೀ ದುಡಿಯುವ ವರ್ಗ ಅದನ್ನು ಎತ್ತಿಕೊಳ್ಳಬೇಕು. ನವ-ಉದಾರವಾದಿ ಧೋರಣೆಗಳು ಮತ್ತು ಜಾತಿವಾದಿ, ಕೋಮುವಾದಿ, ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಐಕ್ಯ ಹೋರಾಟ ಗಳಲ್ಲಂತೂ ಇದು ಇನ್ನಷ್ಟು ಮಹತ್ವ ಪಡೆಯುತ್ತದೆ.

ಪುಟ 11

ದೇಶದ ಸಂಪತ್ತನ್ನೆಲ್ಲ ಮಾರಿ ದುಡಿಮೆಗಾರರನ್ನು ಅಗ್ಗದ ಸರಕಾಗಿಸುವ ಖಾಸಗೀಕರಣ



ನರೇಂದ್ರ ಮೋದಿ ಸರ್ಕಾರ ತಾನು ಅಪ್ಪಟ 'ರಾಷ್ಟ್ರೀಯವಾದಿ' "ದೇಶಭಕ್ತಿಪೂರ್ಣ" ಎಂದು ಕೊಚ್ಚಿಕೊಳುತ್ತದೆ. ಆದರೆ ಕಳೆದ 4 ವರ್ಷಗಳಲ್ಲಿ ಅದು, ಸರಕಾರೀ ಅಂಕಿ-ಅಂಶಗಳ ಪ್ರಕಾರವೇ, 1.96 ಲಕ್ಷಕೋಟಿ ರೂ.ಗಳಷ್ಟು ಮೌಲ್ಯದ ಸಾರ್ವಜನಿಕ ವಲಯದ ಆಸ್ತಿಗಳನ್ನು ಮಾರಾಟ ಮಾಡಿದೆ.

ಇಷ್ಟೇ ಸಾಲದೆಂಬಂತೆ ಖನಿಜ ಸಂಪತ್ತು, ಭೂಮಿ, ನದಿ, ಸರೋವರ, ಅರಣ್ಯ ಅಷ್ಟೇ ಏಕೆ ಸರ್ಕಾರಿ ಶಾಲೆಗಳು, ಆರೋಗ್ಯ ಕೇಂದ್ರಗಳು, ಆಸ್ಪತ್ರೆಗಳನ್ನೂ ಖಾಸಗಿ-ಸಾರ್ವಜನಿಕ ಸಹಭಾಗಿತ್ವ(ಪಿಪಿಪಿ)ದ ಹೆಸರಲ್ಲಿ ಮಾರಾಟಕ್ಕೆ ಇಡಲಾಗಿದೆ. ರಕ್ಷಣಾ ಉತ್ಪಾದನೆಯಿಂದ ತೈಲ ಉತ್ಪಾದನೆಯ ವರೆಗೆ, ಔಷಧಿಗಳಿಂದ ಹಿಡಿದು ಶಿಕ್ಷಣದ ವರೆಗೆ ಎಲ್ಲವೂ ಖಾಸಗಿ ಒಡೆತನದ ಲಾಭಗಳಿಸುವ ಉದ್ದಿಮೆಗಳಾಗಿ ತ್ವರಿತವಾಗಿ ಪರಿವರ್ತನೆಗೊಳ್ಳುತ್ತಿವೆ. ಖಾಸಗಿ ಕಾರ್ಪೊರೇಟ್‌ಗಳಿಗೆ ನೆರವು ನೀಡಲು ಈ ಸರಕಾರ ಎಷ್ಟು ಕಟಿಬದ್ಧವಾಗಿದೆಯೆಂದರೆ "ನಿರ್ವಹಣೆ"ಯ ಹೆಸರಲ್ಲಿ ಚಾರಿತ್ರಿಕ ಸ್ಮಾರಕಗಳನ್ನು ಕೂಡ ಹಸ್ತಾಂತರ ಗೊಳಿಸಲಾಗಿದೆ.

ಈ ಖಾಸಗೀಕರಣದ ಧಾವಂತದೊಂದಿಗೇ ಭಾರತದ ಕಾರ್ಮಿಕರನ್ನು, ಅದರಲ್ಲೂ ಯುವ ಕಾರ್ಮಿಕರನ್ನು ಸರಕುಗಳಾಗಿ ಮಾಡಿ ಲಾಭಕೋರ ದೇಶಿ-ವಿದೇಶಿ ಕಾರ್ಪೊರೇಟ್‌ಗಳಿಗೆ ಬಹಳ ಅಗ್ಗದಲ್ಲಿ ಲಭ್ಯಗೊಳಿಸಲು ಮುಂದಾಗಿದೆ. ಅದಕ್ಕಾಗಿಯೇ 'ಮೇಕ್ ಇನ್ ಇಂಡಿಯಾ' ಜಪಿಸುತ್ತ ಪ್ರಧಾನ ಮಂತ್ರಿಗಳು ಮತ್ತು ಅವರ ಇತರ ಮಂತ್ರಿಗಳು ಜಗತ್ತೆಲ್ಲ ಸುತ್ತುತ್ತಿದ್ದಾರೆ, ಜಗತ್ತಿನ ಬಂಡವಾಳಶಾಹಿಗಳನ್ನೆಲ್ಲ ಭಾರತದಲ್ಲಿ ಶ್ರಮಶಕ್ತಿ ಅಗ್ಗವಾಗಿರುವುದರಿಂದ ಇಲ್ಲಿಗೆ ಬಂದು ಲಾಭ ಸೂರೆಗೊಳ್ಳಬಹುದು ಎಂದು ನಂಬಿಸಲು ಹೆಣಗುತ್ತಿದ್ದಾರೆ.

ಸಾರ್ವಜನಿಕ ವಲಯದ ಘಟಕಗಳನ್ನು ಅಗ್ಗ ದರಗಳಲ್ಲಿ ಖಾಸಗಿಯವರಿಗೆ ಮಾರುವುದು ನವ ಉದಾರವಾದಿ ನೀತಿಯ ಜೀವಾಳ. ಹಿಂದಿನ ಯುಪಿಎ ಸರ್ಕಾರಗಳು ಹತ್ತು ವರ್ಷಗಳಲ್ಲಿ 1.08 ಲಕ್ಷಕೋಟಿ ರೂಗಳ ಸಾರ್ವಜನಿಕ ಸಂಪತ್ತನ್ನು ಮಾರಾಟ ಮಾಡಿದರೆ ಮೋದಿ ಸರಕಾರ ನಾಲ್ಕೇ ವರ್ಷಗಳಲ್ಲಿ ಅದನ್ನು ಮೀರಿಸಿದೆ.

2 ಲಕ್ಷ ಕೋಟಿ ರೂ. ಮೌಲ್ಯದ ಆಸ್ತಿಗಳನ್ನು ಹೊಂದಿರುವ ಕೇಂದ್ರೀಯ ಸಆರ್ವಜನಿಕ ವಲಯದ ಘಟಕಗಳು 2015-16ರಲ್ಲಿ 7095 ಕೋಟಿ ರೂ.ಗಳ ಡಿವಿಡೆಂಡ್ ಘೋಷಿಸಿದ್ದವು. ಇವೆಲ್ಲ ಸಾರ್ವಜನಿಕ ಪ್ರಯೋಜನಕ್ಕೆ ಲಭ್ಯವಾಗುವಂತವು.. ಇನ್ನು ಇವೆಲ್ಲ ಖಾಸಗಿಯವರ ಜೇಬು ಸೇರುತ್ತವೆ.

ಈ ಹಿಂದೆ ಬ್ಯಾಂಕಿಂಗ್ ಮತ್ತು ವಿಮಾ ವಲಯವನ್ನು ಖಾಸಗಿಯವರಿಗೆ ತೆರೆದಿಟ್ಟ ನಂತರ, ಈಗ ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಮತ್ತು ವಿಮಾ ಕಂಪನಿಗಳ ಶೇರುಗಳನ್ನು ಮಾರಾಟ ಮಾಡಲಿದ್ದು ಅವನ್ನು ಖಾಸಗಿಯವರು (ವಿದೇಶಿಗಳೂ) ಬಾಚಿಕೊಳ್ಳಲು ಅವಕಾಶ ಮಾಡಿಕೊಡಲಾಗುತ್ತಿದೆ.

ಕೇಂದ್ರೀಯ ಸಾರ್ವಜನಿಕ ವಲಯದ ಘಟಕಗಳಲ್ಲಿ 12.3 ಲಕ್ಷ ಮತ್ತು ಸಾರ್ವಜನಿಕ ಹಣಕಾಸು ವಲಯ(ಬ್ಯಾಂಕಿಂಗ್ ಮತ್ತು ವಿಮೆ)ದಲ್ಲಿ 15 ಲಕ್ಷ ನೌಕರರು ಕೆಲಸ ಮಾಡುತ್ತಿದ್ದು ಖಾಸಗೀಕರಣ ಈ ಉದ್ಯೋಗಾವಕಾಶಗಳನ್ನೂ ಮೊಟಕುಗೊಳಿಸುತ್ತದೆ.

ಹೀಗೆ ಖಾಸಗೀಕರಣ ಸಾರ್ವಜನಿಕ ಬಳಕೆಗೆ ಸಿಗುವ ಅಪಾರ ಹಣ ಮತ್ತು ಉದ್ಯೋಗಾವಕಾಶಗಳನ್ನು ಮೊಟಕು ಮಾಡುವುದಷ್ಟೇ ಅಲ್ಲ. ದೇಶದ ಸಾರ್ವಭೌಮತ್ವವನ್ನು ಕಾಯ್ದುಕೊಳ್ಳಲು ಆಯಕಟ್ಟಿನ ವಲಯಗಳಲ್ಲಿ ಸ್ಥಾಪಿಸಿರುವ ಸಾರ್ವಜನಿಕ ವಲಯದ ಉದ್ದಿಮೆಗಳಿಗೂ ಕುತ್ತು ತರುತ್ತಿದೆ.

ಉದಾ: ರಕ್ಷಣಾ ಉತ್ಪಾದನೆ. ಅದನ್ನು ರಿಲೈಯನ್ಸ್ ನಂತಹ ಕಂಪನಿ ವಿದೇಶಿ ಕಂಪನಿಗಳ ಸಹಕಾರದೊಂದಿಗೆ ವಹಿಸಿಕೊಂಡರೆ ದೇಶದ ಸ್ವಾತಂತ್ರ್ಯ ಮತ್ತು ಸ್ವಾವಲಂಬನೆಗೆ ಕುತ್ತು ತಂದಂತಲ್ಲವೇ?

ಮತ್ತೊಂದು ಮಹತ್ವದ ಪ್ರಶ್ನೆ, ಉದ್ಯೋಗ ಮತ್ತು ಸಾರ್ವಜನಿಕ ಧೋರಣೆಗೆ ಬೇಕಾದ್ದು. ಸಾರ್ವಜನಿಕ ಕ್ಷೇತ್ರ ದೊಡ್ಡ ಪ್ರಮಾಣದಲ್ಲಿ ಉದ್ಯೋಗಗಳನ್ನು ಕೊಡುತ್ತದೆ ಮಾತ್ರವಲ್ಲದೆ, ಉತ್ತಮ ವೇತನ, ಸಾಮಾಜಿಕ ಭದ್ರತೆ ಒದಗಿಸುತ್ತದೆ. ಮತ್ತು ಮೀಸಲಾತಿ ಮುಂತಾದ ಸಂವಿಧಾನಿಕ ಅಗತ್ಯಗಳನ್ನು ಪಾಲಿಸುತ್ತದೆ. ಖಾಸಗೀಕರಣದಿಂದ ಇವನ್ನೆಲ್ಲ ಕಿಟಕಿಯಿಂದ ಹೊರಗೆಸೆಯಲಾಗುತ್ತಿದೆ.

ಈ ಗೀಳು ಯಾಕೆ?

ಸಾರ್ವಜನಿಕ ವಲಯದ ಖಾಸಗೀಕರಣಕ್ಕೆ ನಿಜವಾದ ಆರ್ಥಿಕ ಮತ್ತು ನಿರ್ವಹಣೆಯ ಕಾರಣಗಳಿಲ್ಲ. ಆದರೂ ಮೋದಿ ಸರಕಾರಕ್ಕೆ ಈ ಗೀಳು ಯಾಕೆ? ಇದಕ್ಕೆ ಎರಡು ಕಾರಣಗಳಿವೆ.

ಒಂದು, ಹೇಗಾದರೂ ಸರಕಾರದ ತಿಜೋರಿ ತುಂಬಿಸಬೇಕಾದ ಹತಾಶೆ. ಆರೋಗ್ಯಕರ ಕೈಗಾರಿಕಾ ಬೆಳವಣಿಗೆ ತರಲಾರದ, ಆಳಗೊಳ್ಳುತ್ತಿರುವ ಕೃಷಿ ಬಿಕ್ಕಟ್ಟನ್ನು ನಿರ್ವಹಿಸಲಾರದ ವಿಫಲತೆ, ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿದ 'ನೋಟು ರದ್ಧತಿ, ಜಿಎಸ್‌ಟಿಯಂತಹ ಕ್ರಮಗಳು ತಂದಿರುವ ಹತಾಶೆಯಿದು. ಸಾರ್ವಜನಿಕ ವಲಯವನ್ನು ಮಾರಿ ಆದಾಯವನ್ನು ತೋರಿಸುವ ಹುನ್ನಾರ.

ಎರಡು, ಕಾರ್ಪೊರೇಟ್‌ಗಳ ಬಗ್ಗೆ ಮಮತೆ, ದೊಡ್ಡ ಬಂಡವಾಳಿಗರ ಓಲೈಕೆ. "ರಾಷ್ಟ್ರೀಯವಾದ", "ದೇಶಭಕ್ತಿ" ಇವೆಲ್ಲ ಜನಗಳು ಸರಕಾರದ 'ಧೋರಣೆಗಳಿಂದ ಅನುಭವಿಸುತ್ತಿರುವ ಸಂಕಟಗಳನ್ನು ಮರೆಯುವಂತೆ ಮಾಡಲಿಕ್ಕಾಗಿಯಷ್ಟೇ.

ಪ್ರಾಕೃತ್ರಿಕ ಸಂಪತ್ತು :

ದೇಶವನ್ನು ಒಮ್ಮೆ ಸುತ್ತಿದರೆ ಕಾಣಸಿಗುವುದು ಸರ್ಕಾರದ ಅಧೀನದಲ್ಲಿರುವ ಗಣಿ, ರಸ್ತೆ, ಸೇತುವೆ, ಬಂದರು, ಶಾಲೆ, ಕಾಲೇಜು, ಆಸ್ಪತ್ರೆ ಎಲ್ಲವನ್ನೂ ಮಾರಾಟಕ್ಕಿಟ್ಟಿರುವುದು.

ಕೋಲ್ ಇಂಡಿಯ, ರಾಷ್ಟ್ರೀಯ ಜಲವಿದ್ಯುತ್ ನಿಗಮವನ್ನು ಖಾಸಗೀಕರಣದ ಮೂಲಕ ಹಿಂಡಿ ಹಿಪ್ಪೆ ಮಾಡಲಾಗುತ್ತಿದೆ. ಕಲ್ಲಿದ್ದಲು ಗಣಿಗಳು ದುರಾಸೆ ತುಂಬಿರುವ ಖಾಸಗಿಯವರ ಒಡೆತನಕ್ಕೆ ಹೋಗುತ್ತಿದೆ, ಅಲ್ಲಿರುವ ಉದ್ಯೋಗಗಳು ಕಾಂಟ್ರಾಕ್ಟ್, ಕ್ಯಾಶುವಲ್ ಸ್ವರೂಪ ಪಡೆಯುತ್ತಿವೆ. ಪರಿಸರ ಕಾನೂನುಗಳು ಮೂಲೆ ಸೇರುತ್ತಿವೆ.

ತೈಲ ಮತ್ತು ಅನಿಲ ಶೋಧನೆ ಈ ಮೊದಲೇ ರಿಲಯಂಸ್‌ನಂತಹ ದೊಡ್ಡ ಕಾರ್ಪೊರೇಟ್‌ಗಳಿಗೆ ಮಾರಾಟವಾಗಿತ್ತು. ಈ ರಾಷ್ಟ್ರ-ವಿರೋಧಿ ನೀತಿ ಮೋದಿ ಸರಕಾರದ ಅಡಿಯಲ್ಲಿ ಮತ್ತಷ್ಟು ಪೋಷಣೆ ಪಡೆಯುತ್ತಿದೆ. ಒಎನ್‌ಜಿಸಿ ಶೇರು ಮಾರಾಟದ ಮೂಲಕ 41,000 ಕೋಟಿ ರೂ. ಬಾಚಿಕೊಳ್ಳುವ ಸನ್ನಾಹ ನಡೆದಿದೆ.

ಮೋದಿಯವರು ಅಧಿಕಾರ ವಹಿಸಿಕೊಂಡ ಮೇಲೆ 56 ಸಾವಿರ ಹೆಕ್ಟೆರ್ ಅರಣ್ಯ ಭೂಮಿಯನ್ನು ಬೇರೆ ಪ್ರಾಜೆಕ್ಟ್‌ಗಳಿಗೆ ತಿರುಗಿಸಲಾಗಿದೆ. ಸಾಲದ್ದಕ್ಕೆ ಈಗ ಅರಣ್ಯ ಭೂಮಿ 'ಅಭಿವೃದ್ಧಿಗೆ ಪಿಪಿಪಿ' ಹೆಸರಲ್ಲಿ ಖಾಸಗಿ ಕಾಂಟ್ರಾಕ್ಟರುಗಳಿಗೆ, ರಿಯಲ್ ಎಸ್ಟೇಟ್ ಕುಳಗಳಿಗೆ ಸುಗ್ಗಿ.

ನದಿಗಳು, ಸರೋವರಗಳು/ಕೆರೆಗಳನ್ನು "ನಿರ್ವಹಣೆ"ಗಾಗಿ ಖಾಸಗಿಯವರಿಗೆ ಲೀಸ್‌ಗೆ ಕೊಡುವ ಪ್ರಸ್ತಾವವೂ ಇದೆ.

ಶಾಲೆಗಳು ಮತ್ತು ಆಸ್ಪತ್ರೆಗಳು

ಒಂದೆಡೆಯಲ್ಲಿ, ಸರ್ಕಾರಿ ಶಾಲೆಗಳಿಗೆ ಅಗತ್ಯ ಹಣ ಕೊಡದೆ ಶಿಕ್ಷಕರ ನೇಮಕಾತಿ ಮಾಡದೆ ಸೊರಗಿಸಿ, ಇನ್ನೊಂದೆಡೆಯಲ್ಲಿ ಖಾಸಗಿ ಶಾಲೆಗಳನ್ನು/ 'ಬೋಧನಾ ಅಂಗಡಿ'ಗಳಿಗೆ ಮುಕ್ತ ಅವಕಾಶ ಕಲ್ಪಿಸಲಾಗಿದೆ. ಪರಿಣಾಮವಾಗಿ 1 ಲಕ್ಷಕ್ಕೂ ಹೆಚ್ಚು ಸರಕಾರೀ ಶಾಲೆಗಳನ್ನು ಮುಚ್ಚಲಾಗಿದೆ. ಖಾಸಗೀಕರಣದಿಂದ ಪೋಷಕರು ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಖರ್ಚು ಮಾಡಬೇಕಾಗುತ್ತದೆ. ಈಗಾಗಲೇ ನಿರಂತರವಾಗಿ ಖಾಸಗಿ ಶಾಲೆಗಳಲ್ಲಿ ಓದುತ್ತಿರುವ ಸಂಖ್ಯೆ ಮತ್ತು ಶುಲ್ಕದ ಮೊತ್ತಗಳೂ ದಿನೇ ದಿನೇ ಹೆಚ್ಚಾಗುತ್ತಿದೆ.

ಸರಕಾರೀ ಆಸ್ಪತ್ರೆಗಳು ಮತ್ತು ಆರೋಗ್ಯ ಕೇಂದ್ರಗಳದ್ದೂ ಇದೇ ಪರಿಸ್ಥಿತಿ. ಸಾಕಷ್ಟು ಹಣ ಒದಗಿಸದೆ ಉಪಕರಣಗಳು, ಮೂಲಸೌಕರ್ಯಗಳು ಮತ್ತು ಡಾಕ್ಟರುಗಳೂ ಸೇರಿದಂತೆ ಸಿಬ್ಬಂದಿಯ ಕೊರತೆ. ಇನ್ನೊಂದೆಡೆಯಲ್ಲಿ ಕಾರ್ಪೊರೇಟ್ ಆಸ್ಪತ್ರೆಗಳಿಗೆ ಪ್ರೋತ್ಸಾಹ.

ಮೋದಿ ಸರಕಾರ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ವಿಮಾ-ಆಧಾರಿತ ಆರೋಗ್ಯ ವ್ಯವಸ್ಥೆಯನ್ನು ದೇಶದ ಮೇಲೆ ಹೇರುತ್ತಿದೆ. ಆಮೂಲಕ ಜನಗಳಿಗೆ ಉತ್ತಮ ಆರೋಗ್ಯ ವ್ಯವಸ್ಥೆ ಒದಗಿಸುವ ಸರಕಾರದ ಜವಾಬ್ದಾರಿಯಿಂದ ಕಳಚಿಕೊಳ್ಳುತ್ತಲೇ ಖಾಸಗಿ ಆರೋಗ್ಯ ವಿಮಾ ಕಂಪನಿಗಳಿಗೆ, ಕಾರ್ಪೊರೇಟ್ ಆಸ್ಪತ್ರೆಗಳಿಗೆ ಪ್ರಯೋಜನ ಒದಗಿಸಲಾಗುತ್ತಿದೆ.

ರೈಲ್ವೆಯಿಂದ ಕೆಂಪು ಕೋಟೆಯ ವರೆಗೆ

ಮೋದಿ ಸರಕಾರಕ್ಕೆ ಸಲಹೆ ಮಾಡುತ್ತಿರುವ ಕುತಂತ್ರಿ ಮೆದುಳುಗಳು ಖಾಸಗಿ ಕಂಪನಿಗಳಿಗೆ ಲಾಭ ದೋಚಲು ಹೊಸ-ಹೊಸ ದಾರಿಗಳನ್ನು ಶೋಧಿಸುತ್ತಿವೆ. ಅದರಿಂದ ಜನಗಳ ಮೇಲೆ ಎಷ್ಟು ಹೊರೆ ಹೆಚ್ಚುತ್ತದೆ ಎಂಬ ಪರಿವೆಯೇ ಅವರಿಗಿಲ್ಲ. 23 ಪ್ರಮುಖ ರೈಲ್ವೆ ನಿಲ್ದಾಣಗಳನ್ನು ಖಾಸಗೀಕರಿಸಲಾಗುತ್ತದಂತೆ. ಸರಕಾರ ಈಗಾಗಲೇ ರೈಲ್ವೆ ಮೂಲರಚನೆಯಲ್ಲಿ ಎಫ್‌ಡಿಐಗೆ ಅವಕಾಶ ಕಲ್ಪಿಸಿದೆ.

ಮತ್ತೊಂದು ಈ ಸರಕಾರದ ಪ್ರಮುಖ ನಿರ್ಧಾರವೆಂದರೆ ರಾಷ್ಟ್ರೀಯ ಸ್ಮಾರಕಗಳನ್ನು "ನಿರ್ವಹಣೆ'ಗೆಂದು ಖಾಸಗಿಯವರಿಗೆ ವಹಿಸಕೊಡುವುದು ಈಗಾಗಲೇ ದಿಲ್ಲಿಯ ಕೆಂಪುಕೋಟೆ, ತೆಲಂಗಾಣದ ಗೋಲ್ಕೊಂಡಾ ಕೋಟೆಯನ್ನು ವಹಿಸಿಕೊಡಲಾಗಿದೆ.

ಪ್ರಥಮ ಸ್ವಾತಂತ್ರ್ಯ ಸಮರದ ಕುರುಹಾದ, ಪ್ರತಿವರ್ಷ ಸ್ವಾತಂತ್ರ್ಯ ದಿನದಂದು ದೇಶದ ಪ್ರಧಾನ ಮಂತ್ರಿಗಳು ರಾಷ್ಟ್ರೀಯ ಬಾವುಟ ಹಾರಿಸುವ ಒಂದು ರಾಷ್ಟ್ರೀಯ ಸ್ಮಾರಕವನ್ನು 'ರಾಷ್ಟ್ರೀಯವಾದ'ದ ಬಗ್ಗೆ ಬೊಬ್ಬೆ ಹೊಡೆಯುವ ಒಂದು ಸರಕಾರಕ್ಕೆ ನಿರ್ವಹಿಸುವ ಸಾಮರ್ಥ್ಯ ಇಲ್ಲವೇ?

ದೇಶದ ದುಡಿಯುವ ಜನತೆಯ ಆಗ್ರಹ:

* ಖಾಸಗೀಕರಣ ನಿಲ್ಲಿಸಿ-ಸಾರ್ವಜನಿಕವಲಯವನ್ನು ಬಲಪಡಿಸಿ-ಸ್ವಾವಲಂಬೀ ಅರ್ಥವ್ಯವಸ್ಥೆಯನ್ನು ಬೆಳೆಸಿ
* ಸಾರ್ವಜನಿಕ ಶಿಕ್ಷಣವನ್ನು ಬಲಪಡಿಸಿ; ಶಿಕ್ಷಣಕ್ಕೆ ಸಾರ್ವಜನಿಕ ವೆಚ್ಚವನ್ನು ಜಿಡಿಪಿಯ 6% ಕ್ಕೆ ಹೆಚ್ಚಿಸಿ; ಸರಕಾರೀ ಶಾಲೆಗಳಲ್ಲಿ ಮೂಲರಚನೆಗಳನ್ನು ಹೆಚ್ಚಿಸಿ.
* ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಸೇವೆಗಳನ್ನು ಬಲಪಡಿಸಿ; ಆರೋಗ್ಯದ ಮೇಲೆ ಸಾರ್ವಜನಿಕ ವೆಚ್ಚವನ್ನು ಜಿಡಿಪಿಯ 5%ಕ್ಕೆ ಹೆಚ್ಚಿಸಿ; ಆರೋಗ್ಯ ಮೂಲರಚನೆಗಳನ್ನು ಉತ್ತಮಪಡಿಸಿ, ಸಾಮುದಾಯಿಕ/ಆರೋಗ್ಯ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇತ್ಯಾದಿಗಳಲ್ಲಿ ಅಗತ್ಯ ಸಿಬ್ಬಂದಿ, ಉಪಕರಣಗಳು ಮತ್ತು ಔಷಧಿಗಳನ್ನು ಒದಗಿಸಿ; ದೂರದ ಪ್ರದೇಶಗಳಲ್ಲಿರುವ ಆದಿವಾಸಿಗಳಿಗೂ ಸೇರಿದಂತೆ ಎಲ್ಲರಿಗೂ ಸಮಯಕ್ಕೆ ಸರಿಯಾಗಿ ಆರೋಗ್ಯಪಾಲನೆ ಒದಗಿಸಿ.
* ಎಲ್ಲ ಸರಕಾರೀ ಶಿಕ್ಷಣ ಸಂಸ್ಥೆಗಳು, ಆರೋಗ್ಯ ಸಂಸ್ಥೆಗಳಲ್ಲಿ ಎಲ್ಲ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿ.

ಇದು ಸಾಧ್ಯವಿದೆ.

ನಮ್ಮಲ್ಲಿ ಸಂಪನ್ಮೂಲಗಳಿವೆ.

ಜನಗಳೋ ಅಥವ ಕಾರ್ಪೊರೇಟ್‌ಗಳೋ

-ಸರಕಾರ ತನ್ನ ಆದ್ಯತೆಯನ್ನು ನಿರ್ಧರಿಸಬೇಕಷ್ಟೇ.

ಖಾಸಗಿ ಕ್ಷೇತ್ರಕ್ಕೆ ಪ್ರತಿವರ್ಷ ತೆರಿಗೆ ರಿಯಾಯಿತಿ ಮತ್ತಿತರ ವಿಧಾನಗಳಲ್ಲಿ ಪ್ರತಿವರ್ಷ 5 ಲಕ್ಷಕೋಟಿ ರೂ.ಗಳನ್ನು ಕೊಡುವುದನ್ನು ನಿಲ್ಲಿಸಿ, ಶ್ರೀಮಂತರು ಮಾಡುತ್ತಿರುವ 7 ಲಕ್ಷಕೋಟಿ ರೂ.ಗಳ ತೆರಿಗೆ ವಂಚನೆ ನಿಲ್ಲಿಸಿ ಅವರಿಂದ ವಸೂಲಿ ಮತ್ತು, ಬ್ಯಾಂಕ್‌ಗಳಲ್ಲಿ, ಹೆಚ್ಚಾಗಿ ದೊಡ್ಡ ಕಾರ್ಪೊರೇಟ್‌ಗಳೇ ಬಾಕಿಯಿಟ್ಟುಕೊಂಡಿರುವ 12 ಲಕ್ಷಕೋಟಿ ರೂ.ಗಳ ಸಾಲಗಳ ವಸೂಲಿ ಮೂಲಕ ಸಂಪನ್ಮೂಲ ಸಂಗ್ರಹಿಸುವುದು ಸಾಧ್ಯವಿದೆ.

ಆದರೆ ನವ ಉದಾರವಾದಿ ನೀತಿಗಳನ್ನು ಬೆಂಬಲಿಸುವ ಯಾವ ರಾಜಕೀಯ ಪಕ್ಷಗಳಿಗೂ ಇದು ಬೇಕಿರುವುದಿಲ್ಲ. ಎಡಪಕ್ಷಗಳು ಮಾತ್ರವೇ ಈ ಬೇಡಿಕೆಗಳನ್ನು ಎತ್ತುತ್ತವೆ. ತಮಗೆ ಅಧಿಕಾರ ದೊರೆತ ಕಡೆಗಳಲ್ಲಿ ಗಂಭೀರಮಿತಿಗಳ ನಡುವೆಯೂ ಅವನ್ನು ಜಾರಿಗೊಳಿಸಲು ಪ್ರಯತ್ನಿಸಿವೆ. ○

.......ಉದ್ಯೋಗನಾಶದ ವಿಷವರ್ತುಲದೊಳಕ್ಕೆ

ಪುಟ 9 ರಿಂದ

ಉದ್ಯೋಗಕ್ಕೂ. ಆದರೆ ಕೃಷಿ ಹೆಚ್ಚೆಚ್ಚು ಕಷ್ಟದಾಯಕ ಆಗುತ್ತಿದ್ದು ಹೆಚ್ಚೆಚ್ಚು ಜನ ಹತಾಶರಾಗಿ ಬೇರೆ ವಲಯಗಳಲ್ಲಿ ಉದ್ಯೋಗ ಅರಸಬೇಕಾಗಿ ಬಂದಿದೆ.

ಅರ್ಥವ್ಯವಸ್ಥೆಯ ಬೇರೆ ವಲಯಗಳ ಮೇಲೆ ಒತ್ತಡ ಹೆಚ್ಚಿದಂತೆ ಅಲ್ಲಿಯ ಸಂಬಳ ದರಗಳು ಇಳಿಯುತ್ತಿವೆ. ಇದರ ಪರಿಣಾಮವಾಗಿ ಜನಗಳ ಸರಾಸರಿ ಆದಾಯ, ಕೊಳ್ಳುವ ಶಕ್ತಿ ಇಳಿದು ಅರ್ಥವ್ಯವಸ್ಥೆಯಲ್ಲಿ ಬೇಡಿಕೆ ಇಳಿಯುವಂತಾಗಿದೆ. ಇದು ಕೈಗಾರಿಕಾ ಉತ್ಪಾದನೆಯ ಮೇಲೂ ದುಷ್ಪ್ರಭಾವ ಬೀರಿ ಅಲ್ಲಿಯೂ ಉದ್ಯೋಗಾವಕಾಶಗಳು ಇಳಿಯುವಂತೆ ಆಗಿರುವುದು ಕಾಣ ಬರುತ್ತಿದೆ.

ಕೃಷಿ ಬಿಕ್ಕಟ್ಟ-ಕೃಷಿ ಉದ್ಯೋಗ ನಾಶ-ಬೇರೆ ವಲಯಗಳ ಮೇಲೆ ಉದ್ಯೋಗದ ಒತ್ತಡ-ಸಂಬಳ ಇಳಿಕೆ-ಬೇಡಿಕೆ ಇಳಿಕೆ-ಉತ್ಪಾದನೆ ಇಳಿಕೆ-ಕೈಗಾರಿಕೆಗಳಲ್ಲಿ ಉದ್ಯೋಗ ಕಡಿತ.-ಮತ್ತಷ್ಟು ಉದ್ಯೋಗ ನಾಶ ಈ ವಿಷವರ್ತುಲದೊಳಕ್ಕೆ ಮೋದಿ ಸರಕಾರದ ಧೋರಣೆಗಳು ದೇಶವನ್ನು ನೂಕಿವೆ.

ಮೇಕ್ ಇನ್ ಇಂಡಿಯಾ ಯೋಜನೆಯ ಮೂಲಕ ರಫ್ತುಗಳ ಮೂಲಕ ಉದ್ಯೋಗ ಮತ್ತು ಉತ್ಪಾದನೆ ಹೆಚ್ಚಿಸಬಹುದೆಂಬ ಸರಕಾರದ ಯೋಜನೆ ತಲೆಕೆಳಗಾಗಿದೆ.

ಏಕೆ ಉದ್ಯೋಗ ನಷ್ಟದ ವಿಷವರ್ತುಲ?

ಏಕೆಂದರೆ ಮೋದಿ ಸರಕಾರ ಮುಖ್ಯವಾಗಿ ದೊಡ್ಡ ಕಾರ್ಪೊರೇಟ್‌ಗಳ ಮತ್ತು ಅವುಗಳ ಲಾಭಗಳ ಬೆಳವಣಿಗೆಗೆ ಬದ್ಧವಾಗಿದೆ, ಉದ್ಯೋಗ ನಿರ್ಮಾಣಕ್ಕಲ್ಲ. ಕಾರ್ಪೊರೇಟ್‌ಗಳ ಲಾಭಕ್ಕಾಗಿ ಸಾರ್ವಜನಿಕ ವಲಯವನ್ನು ಕೊಲ್ಲಲಾಗುತ್ತಿದೆ. ರೈತ -ಕೃಷಿಯನ್ನು ಕೊಲ್ಲಲಾಗುತ್ತಿದೆ. ಶ್ರೀಮಂತರ ಮೇಲೆ ತೆರಿಗೆ ಹಾಕಲು ಹಿಂಜರಿಯುತ್ತಿರುವುದರಿಂದ ಸಾರ್ವಜನಿಕ ಹೂಡಿಕೆಗಳು ವಿಸ್ತಾರಗೊಳ್ಳುತ್ತಿಲ್ಲ.

ಆದರೆ ಸಾರ್ವಜನಿಕ ಹೂಡಿಕೆಗೆ ಸರಕಾರ ಸಿದ್ಧವಿಲ್ಲವಾದ್ದರಿಂದ ಅರ್ಥವ್ಯವಸ್ಥೆಯಲ್ಲಿ ಬೇಡಿಕೆ ಹೆಚ್ಚುತ್ತಿಲ್ಲ. ಇದರಿಂದಾಗಿ ಖಾಸಗಿ ವಲಯದಲ್ಲೂ ಉತ್ಪಾದನೆ ಹೆಚ್ಚುತ್ತಿಲ್ಲ, ಉದ್ಯೋಗಾವಕಾಶ ಹೆಚ್ಚುತ್ತಿಲ್ಲ.

ಖಾಸಗಿ ವಲಯದಕ್ಕೆ ಉತ್ತೇಜನೆ ಕೊಟ್ಟರೆ ಅದು ಉದ್ಯೋಗಗಳನ್ನು ನಿರ್ಮಿಸುತ್ತದೆ, ಅಲ್ಲಿ ಉದ್ಯೋಗ ಸಿಗದವರು ಸ್ವ-ಉದ್ಯೋಗ ಹುಡುಕಿಕೊಳ್ಳುತ್ತಾರೆ ಎಂಬುದು ಈ ಸರಕಾರದ ನಿಲುವು.

ಒಟ್ಟಿನಲ್ಲಿ, ಸರಕಾರದ ಧೋರಣೆಗಳು

1. ಕೃಷಿ ಬಿಕ್ಕಟ್ಟನ್ನು ಉಲ್ಬಣಗೊಳಿಸಿವೆ.
2. ಖಾಸಗಿ ಲಾಭಕೋರತನದಿಂದಾಗಿ ಆರೋಗ್ಯ ಮತ್ತು ಶಿಕ್ಷಣದಂತಹ ವಲಯಗಳಲ್ಲೂ ಉದ್ಯೋಗಾವಕಾಶಗಳು ನಿರ್ಮಾಣವಾಗುತ್ತಿಲ್ಲ.

ಉದ್ಯೋಗ ನಷ್ಟದಿಂದ ಮತ್ತಷ್ಟು ಉದ್ಯೋಗನಾಶದತ್ತವೇ ಸಾಗುವ ವಿಷವರ್ತುಲಕ್ಕೆ ತಳ್ಳಿದ ವಿನಾಶಕಾರಿ ಧೋರಣೆಗಳನ್ನು ಬದಲಿಸಬೇಕು, ಕೆಲಸ ಮಾಡಲು ಸಿದ್ಧರಿರುವ ಎಲ್ಲರಿಗೂ, ವಿಶೇಷವಾಗಿ ಯುವ ಜನರಿಗೆ ಘನತೆಯುಳ್ಳ ಉದ್ಯೋಗ ನಿರ್ಮಿಸಬಲ್ಲ ಧೋರಣೆಗಳನ್ನು ರೂಪಿಸಿ ಅನುಸರಿಸಬೇಕು ಎಂಬುದು ರೈತ-ಕಾರ್ಮಿಕ ಸಂಘರ್ಷ ರ್‍ಯಾಲಿಯ ಒಂದು ಪ್ರಮುಖ ಆಗ್ರಹ. ○

ಸಂವಿಧಾನಿಕ ಹಕ್ಕುಗಳ ಜಾರಿ ಮತ್ತು ಸಾಮಾಜಿಕ ನ್ಯಾಯ ಇಡೀ ದುಡಿಯುವ ವರ್ಗದ ಬೇಡಿಕೆ



ದಲಿತರು ಮತ್ತು ಆದಿವಾಸಿಗಳು ನಮ್ಮ ದೇಶದ ದುಡಿಯುವ ಜನತೆಯ ಒಂದು ಗಮನಾರ್ಹ ಭಾಗ. ಇವರೂ ಇತರರಂತೆ ಭೂಮಿ, ಕಾರ್ಖಾನೆಗಳು ಮತ್ತು ಇತರ ಕ್ಷೇತ್ರಗಳ ಮಾಲಕರ ಶೋಷಣೆಗೆ ಒಳಗಾಗಿದ್ದಾರೆ. ಜತೆಗೇ, ಉಳಿದ ದುಡಿಯುವ ಜನತೆ ಅನುಭವಿಸದೇ ಇರುವ ವಿದ್ಯಾಭ್ಯಾಸ ಮತ್ತು ಉದ್ಯೋಗ ಅವಕಾಶಗಳಲ್ಲಿ ಮತ್ತು ಸಾಮಾಜಿಕ ಜೀವನದಲ್ಲಿ ತೀವ್ರ ತಾರತಮ್ಯಗಳನ್ನು ಎದುರಿಸುತ್ತಿದ್ದಾರೆ.

ಇದು ನಮ್ಮ ಸಮಾಜದಲ್ಲಿ ಬೇರೂರಿರುವ ಮೇಲು-ಕೀಳಿನ ಜಾತಿಪದ್ಧತಿಯಿಂದಾಗಿ ಆಗಿದೆ. ಆದಿವಾಸಿಗಳನ್ನೂ ಹೀಗೆಯೇ ಕೀಳು ಎಂದು ಭಾವಿಸಲಾಗುತ್ತದೆ. ಪ್ರಾಚೀನ ಭಾರತದಲ್ಲಿ ಕೃಷಿ ಮತ್ತು ಇತರ ಕೃಷಿಯೇತರ ಚಟುವಟಿಕೆಗಳಲ್ಲಿ ಶೋಷಣೆಯ ಸಾಧನವಾಗಿ ಮತ್ತು 'ಸ್ವಚ್ಛವಲ್ಲದ' ಕೆಲಸಗಳನ್ನು ಮಾಡಿಸಿಕೊಳ್ಳುವದಕ್ಕಾಗಿ ಮೂಡಿಬಂದ ಅತ್ಯಂತ ತಾರತಮ್ಯದ ವ್ಯವಸ್ಥೆಯಿದು.

ಅತ್ಯಂತ ಹೆಚ್ಚು ಶೋಷಿತ ವಿಭಾಗಗಳು

ಗ್ರಾಮೀಣ ಪ್ರದೇಶಗಳಲ್ಲಿ 61% ದಲಿತರು ಭೂಹೀನರಾಗಿರುತ್ತಾರೆ. ಶೇ 82% ರಷ್ಟು ಜನ ಹೊಂದಿರುವ ಭೂಮಿ 1 ಎಕರೆಗಿಂತ ಕಡಿಮೆ. ಆದಿವಾಸಿಗಳಲ್ಲಿ ಶೇ39 ರಷ್ಟು ಭೂಹೀನರಾಗಿದ್ದರೆ, 48% ರಷ್ಟು 1 ಎಕರೆಗಿಂತ ಕಡಿಮೆ ಭೂಮಿ ಹೊಂದಿರುತ್ತಾರೆ. ಸರಾಸರಿಯಲ್ಲಿ ದಲಿತ ಕುಟುಂಬಗಳು ಗ್ರಾಮೀಣ ಪ್ರದೇಶದಲ್ಲಿ ಗಳಿಸುವ ಆದಾಯ ಮೇಲ್ಜಾತಿಗಳಿಗಿಂತ 37% ರಷ್ಟು ಕಡಿಮೆಯಿದ್ದು ನಗರ ಪ್ರದೇಶದಲ್ಲಿ 60% ರಷ್ಟಿದೆ. ಆದಿವಾಸಿಗಳು ಗ್ರಾಮೀಣ ಪ್ರದೇಶದಲ್ಲಿ 53% ಕಡಿಮೆ ನಗರ ಪ್ರದೇಶದಲ್ಲಿ 48% ಕಡಿಮೆ ಗಳಿಸುತ್ತಾರೆ.

ಸರ್ಕಾರದ ವರದಿಗಳಂತೆ ಗ್ರಾಮೀಣ ಪ್ರದೇಶಗಳಲ್ಲಿ 53% ದಲಿತರು ಮತ್ತು 38% ಆದಿವಾಸಿಗಳು ತಾತ್ಕಾಲಿಕ ಕೆಲಸಗಳಲ್ಲಿದ್ದರೆ ಶಾಶ್ವತ ಉದ್ಯೋಗದಲ್ಲಿ ಅವರ ಉದ್ಯೋಗದ ಅನುಪಾತ ಅನುಕ್ರಮವಾಗಿ 9% ಮತ್ತು 6% ಮಾತ್ರ.

ಉದ್ಯೋಗಗಳು ಮತ್ತು ಮೀಸಲಾತಿ

ಕಾರ್ಮಿಕ ಇಲಾಖೆಯ ಅಂಕಿ ಆಂಶಗಳಂತೆ 48% ದಲಿತರು ಮತ್ತು 54% ಆದಿವಾಸಿಗಳಿಗೆ ವರ್ಷಪೂರ್ತಿ ಕೆಲಸ ಸಿಗುವುದಿಲ್ಲ. ಸಿಗುವ ಕೆಲಸಗಳು ಕೆಲವು ತಿಂಗಳುಗಳಿಗೆ ಸಿಮೀತವಾಗಿದ್ದು ಮಾಡುವ ಕೆಲಸಗಳು ಬೆನ್ನು ಮುರಿಯುವಂತಹ ಇಟ್ಟಿಗೆ ಕಾರ್ಖಾನೆ, ಸುಣ್ಣದ ಕಲ್ಲಿನ ಖ್ವಾರಿಗಳು ಮತ್ತು ನಗರ ಪ್ರದೇಶಗಳಲ್ಲಿ ಸಿಗುವ ಕಾಂಟ್ರಾಕ್ಟ್ ಪದ್ಧತಿಯ ಶೌಚಾಲಯ/ಒಳಚರಂಡಿ ಉದ್ಯೋಗಗಳಾಗಿರುತ್ತದೆ. ಸರಕಾರದ ನೌಕರಿಯಲ್ಲಿ ಸಂವಿಧಾನ್ಮಕ ಮೀಸಲಾತಿ ಜಾರಿಯಿದ್ದರೂ ದಲಿತರು 'ಸಿ' ವರ್ಗದಲ್ಲಿ ಹೆಚ್ಚಿದ್ದು ಮಾಡುವ ಉದ್ಯೋಗಗಳು ಹೌಸ್‌ಕೀಪಿಂಗ್, ಶೌಚಾಲಯ ನಿರ್ವಹಣೆ, ಭದ್ರತಾ ವ್ಯವಸ್ಥೆಗಳೇ ಆಗಿರುತ್ತದೆ. ಈ ಉದ್ಯೋಗಗಳಲ್ಲಿ ದಲಿತರ ಸಂಖ್ಯೆ 40% ರಷ್ಟಿದ್ದರೆ ಉನ್ನತ ಹುದ್ದೆಗಳಲ್ಲಿ ಕೇವಲ 3% ರಷ್ಟಿರುತ್ತದೆ.

ನಿರುದ್ಯೋಗ ಈ ಎರಡು ವಿಭಾಗಗಳಲ್ಲಿ ಉಳಿದ ವಿಭಾಗಗಳಿಗಿಂತ ಬಹಳ ಹೆಚ್ಚು. ಇದರಲ್ಲಿ ಆಶ್ಚರ್ಯವೇನಿಲ್ಲ. ಏಕೆಂದರೆ ಇವರಲ್ಲಿ ಬಹುಪಾಲು ಕ್ಯಾಶುವಲ್ ದುಡಿಮೆಗಾರರು.

ಸರಕಾರಿ ಹುದ್ದೆಗಳಲ್ಲಿ ಎಸ್ಸಿ/ಎಸ್‌ಟಿ ಬ್ಯಾಕ್‌ಲಾಗ್ ಅನುಕ್ರಮವಾಗಿ 8223 ಮತ್ತು 6955 ಅವಕಾಶವಿರುತ್ತದೆ. ಮೀಸಲಾತಿ ಪದ್ಧತಿ ಆದಿವಾಸಿ ಮತ್ತು ದಲಿತರಿಗೆ ಸಮರ್ಪಕವಾಗಿ ಜಾರಿಯಾಗದಿರುವುದನ್ನು ಇದು ಸೂಚಿಸುತ್ತದೆ. ಇದೂ ಸಾಲದೆಂಬಂತೆ ನವ ಉದಾರವಾದಿ ನೀತಿಯಿಂದ ಈ ಹುದ್ದೆಗಳು ಕೂಡ ಕಡಿತವಾಗಿದ್ದು ಕ್ರಮೇಣ ರದ್ದುಗೊಳಿಸಲಾಗುತ್ತಿದೆ.

ಹಣ/.ನಿಧಿ ನೀಡಿಕೆಗಳಲ್ಲಿ ಕಡಿತ

ಸರ್ಕಾರದ ಜಾಹೀರಾತುಗಳನ್ನು ನೋಡಿದರೆ ದಲಿತರು ಮತ್ತು ಆದಿವಾಸಿಗಳಿಗೆ ಅಪಾರ ಹಣ ಹರಿದು ಹೋಗುತ್ತಿರುವ ಹಾಗೆ ಬಿಂಬಿಸಲಾಗುತ್ತಿದೆ. ಹೀಗೆ ಬಿಂಬಿಸುವಲ್ಲಿ ಮೋದಿ ಸರ್ಕಾರ ಹಿಂದಿನ ಎಲ್ಲ ಸರಕಾರಗಳನ್ನೂ ಮೀರಿಸಿದೆ. ಆದರೆ ವಾಸ್ತವ ತದ್ವಿರುದ್ಧವಾಗಿದೆ. ಹಿಂದೆ ಸರ್ಕಾರದ ನೀತಿಯಂತೆ ಒಟ್ಟಾರೆ ಖರ್ಚಾಗುವ ಹಣ ಜನಸಂಖ್ಯೆಗೆ ಅನುಗುಣವಾಗಿ ವಿನಿಯೋಗಿಸಬೇಕಿದ್ದು ಅದರಂತೆ ದಲಿತರಿಗೆ 16.8% ಮತ್ತು ಆದಿವಾಸಿಗಳಿಗೆ 8% ಮೋದಿ ಸರ್ಕಾರ ಈ ನೀತಿಯನ್ನು ಕೈ ಬಿಟ್ಟಿದೆ. ದಲಿತರಿಗೆ ನೀಡಿದ ಶೇಕಡಾ ಮೊತ್ತ 2014-15 ರಲ್ಲಿ 8.73%, 2015-16 ರಲ್ಲಿ 6.63%, 2016-17 ರಲ್ಲಿ 7.06, 2018-19 ರಲ್ಲಿ 7.59%; ಆದಿವಾಸಿಗಳಿಗೆ ವಿನಿಯೋಗವಾಗಿರುವ ಸರಾಸರಿ ಮೊತ್ತ ಈ ಅವಧಿಯಲ್ಲಿ 6.77% (2014-15 ರಿಂದ 2018-19).

ದಲಿತ ಮತ್ತು ಆದಿವಾಸಿ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ನೀಡಲು 8000 ಕೋಟಿ ರೂ. ಅಗತ್ಯವಿದ್ದರೆ 2017-18ರಲ್ಲಿ ನೀಡಿದ್ದು 3347ಕೋಟಿ ರೂ. ಅದನ್ನು 2018-19ರ ಬಜೆಟಿನಲ್ಲಿ 3000 ಕೋಟಿಗೆ ಇಳಿಸಲಾಗಿದೆ.

ಮಲಹೊರುವುದು/ದೈಹಿಕವಾಗಿ ಸ್ವಚ್ಛಗೊಳಿಸುವುದನ್ನು 25 ವರ್ಷಗಳ ಹಿಂದೆಯೇ ನಿಷೇಧಿಸಿದ್ದರೂ ಅದು ಈಗಲೂ ಮುಂದುವರೆಯುತ್ತಿದೆ. ಇತ್ತೀಚಿನ ವರ್ಷಗಳಲ್ಲೇ ಚರಂಡಿ ಸ್ವಚ್ಛತೆಯಲ್ಲಿ ತೊಡಗಿರುವ 1500ಕ್ಕೂ ಹೆಚ್ಚು ದಲಿತ ಕಾರ್ಮಿಕರು ವಿಷಮಯ ಗಾಳಿ, ಸರಿಯಾದ ಸಾಧನೋಪಕರಣಗಳ ಅಭಾವದಿಂದಾಗಿ ಪ್ರಾಣ ಕಳಕೊಂಡಿದ್ದಾರೆ.

ಪುಟ 12 ನೋಡಿ

ಕಾರ್ಮಿಕ ಕಾನೂನುಗಳ ಸುಧಾರಣೆ ಹೆಸರಲ್ಲಿ....

ಪುಟ 9 ರಿಂದ

ಕಾರ್ಮಿಕ ಕಾನೂನುಗಳನ್ನು ಬದಲಾಯಿಸಬೇಕೆಂಬ ಕಾರ್ಮಿಕ ಸಂಘಗಳ ಬೇಡಿಕೆಗೆ ಸರ್ಕಾರ ಕಿವುಡಾಗಿದೆ. ಆದರೆ ಮಾಲೀಕ ವರ್ಗದ ಆಶಯದಂತೆ ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡಲು ಅದು ಆತುರದಲ್ಲಿದೆ. ಏಕೆ?

4 'ಕಾರ್ಮಿಕ ಸಂಹಿತೆ'ಗಳ ಹೆಸರಲ್ಲಿ

ಈ ಸರಕಾರ ಅಸ್ತಿತ್ವದಲ್ಲಿರುವ 44 ಕಾರ್ಮಿಕ ಕಾನೂನುಗಳನ್ನು ವಿಲೀನಗೊಳಿಸಿ 4 ಕಾರ್ಮಿಕ ಸಂಹಿತೆಗಳನ್ನು ತರಲು ಹೊರಟಿದೆ. ಈಗ ಅಸ್ತಿತ್ವದಲ್ಲಿರುವ ಕಾರ್ಮಿಕ ಕಾನೂನುಗಳಾದ – ಕನಿಷ್ಟ ವೇತನ ಕಾಯ್ದೆ, ವೇತನ ಪಾವತಿ ಕಾಯ್ದೆ, ಬೋನಸ್ ಪಾವತಿ ಕಾಯ್ದೆ ಮತ್ತು ಸಮಾನ ಸಂಭಾವನೆ ಕಾಯ್ದೆಗಳನ್ನು ವಿಲೀನಗೊಳಿಸಿ 'ವೇತನಗಳ ಕುರಿತು ಕಾರ್ಮಿಕ ಸಂಹಿತೆ ಮಸೂದೆ'ಯನ್ನು ಸಂಸತ್ತಿನಲ್ಲಿ ಮಂಡಿಸಲಾಗಿದೆ.

ಈ ಮಸೂದೆ ಕನಿಷ್ಟ ಕೂಲಿ ನಿರ್ಧಾರದ ಸೂತ್ರದ ಬಗ್ಗೆ ಮೌನವಾಗಿದೆ. ಇನ್ನೊಂದೆಡೆಯಲ್ಲಿ 'ತಪಾಸಣೆ'(ಇನ್ಸ್‌ಪೆಕ್ಷನ್) ಕಲ್ಪನೆಯನ್ನೇ ದುರ್ಬಲಗೊಳಿಸಲು, ಆ ಮೂಲಕ ಜಾರಿ ಎಂಬುದನ್ನೇ ನಾಶಗೊಳಿಸಲು ಅದು ಬಯಸಿದೆ. ಇನ್ಸ್‌ಪೆಕ್ಟರ್‌ಗಳ ಜಾಗದಲ್ಲಿ 'ಅನುಕೂಲಕಾರ'ರನ್ನು ತರಲಾಗಿದೆ. ಕಾರ್ಮಿಕರಿಗೆ ಈ ಕಾಯ್ದೆಯು ಹಲ್ಲಿಲ್ಲದ ಮತ್ತು ಯಾವುದೇ ಅರ್ಥವಿಲ್ಲದ್ದಾಗಿದೆ. ಸಮಾನ ಸಂಭಾವನೆಯನ್ನು ವೇತನ ಪಾವತಿಯಲ್ಲಿರುವ ಲಿಂಗತಾರತಮ್ಯಕ್ಕೆ ಮಾತ್ರ ಸೀಮಿತಗೊಳಿಸಲಾಗಿದೆ. ಮಹಿಳಾ ಕಾರ್ಮಿಕರಿಗೆ ಸಂಬಂಧಿಸಿ ಹಿಂದಿನ ಕಾಯ್ದೆಯಲ್ಲಿದ್ದ ನೇಮಕಾತಿ, ಬಡ್ತಿ, ತರಬೇತಿ ಮುಂತಾದ, ಇತರೆ ತಾರತಮ್ಯಗಳನ್ನೂ ಇದರಲ್ಲಿ ಕಡೆಗಣಿಸಲಾಗಿದೆ.

ಈಗ ಅಸ್ತಿತ್ವದಲ್ಲಿರುವ – ಟ್ರೇಡ್ ಯೂನಿಯನ್ ಕಾಯ್ದೆ, ಕೈಗಾರಿಕಾ ವಿವಾದ ಕಾಯ್ದೆ ಮತ್ತು ಇಂಡಸ್ಟ್ರಿಯಲ್ ಎಂಪ್ಲಾಯ್‌ಮೆಂಟ್ (ಸ್ಟಾಂಡಿಂಗ್ ಆರ್ಡರ್ಸ್) ಕಾಯ್ದೆ – ಇವುಗಳನ್ನು ವಿಲೀನಗೊಳಿಸಿ 'ಕೈಗಾರಿಕಾ ಸಂಬಂಧಗಳ ಸಂಹಿತೆ(ಲೇಬರ್ ಕೋಡ್ ಆನ್ ಇಂಡಸ್ಟ್ರಿಯಲ್ ರಿಲೇಷನ್ಸ್) ತಯಾರಿಸಿದೆ.

ಈ ಸಂಹಿತೆಯು ಕಾರ್ಮಿಕ ಸಂಘಗಳ ರಚನೆಯನ್ನು ಮತ್ತಷ್ಟು ಕಷ್ಟಕರವಾಗಿಸಿದೆ; ತಮ್ಮ ಇಷ್ಟದ ಪ್ರಕಾರ ತಮಗೆ ಬೇಕಾದವರನ್ನು ಮುಖಂಡರನ್ನಾಗಿ ಆರಿಸಿಕೊಳ್ಳುವ ಕಾರ್ಮಿಕರ ಪ್ರಜಾಸತ್ತಾತ್ಮಕ ಹಕ್ಕನ್ನು ಇದು ಮೊಟಕುಗೊಳಿಸುತ್ತದೆ;

ಸಾಮೂಹಿಕ ಕಾರ್ಯಾಚರಣೆಯ ಕಾರ್ಮಿಕರ ಹಕ್ಕನ್ನು ಇದು ತೀವ್ರವಾಗಿ ಮೊಟಕು ಮಾಡುತ್ತದೆ ಮತ್ತು ಕಾರ್ಮಿಕರು ಮುಷ್ಕರ ಮಾಡುವುದನ್ನು ಬಹುತೇಕ ಇಲ್ಲವಾಗಿಸುತ್ತದೆ. ಬಹುತೇಕ ಎಲ್ಲಾ ಮುಷ್ಕರಗಳನ್ನು 'ಅಕ್ರಮ'ವೆಂದು ಪರಿಗಣಿಸಲಾಗುತ್ತದೆ. ಆ ನಂತರ ಕಾರ್ಮಿಕರನ್ನು ಮತ್ತು ಅವರ ಸಂಘಗಳನ್ನು 'ಅಕ್ರಮ' ಮುಷ್ಕರ ಮಾಡಿದರೆಂದು ಹೇಳಿ, ದೊಡ್ಡ ಮೊತ್ತದ ದಂಡ ಮತ್ತು ಸೆರೆವಾಸದ ಮೂಲಕ ಶಿಕ್ಷಿಸಲಾಗುತ್ತದೆ.

ಮತ್ತೊಂದು ಕಡೆ ಈ ಕಾನೂನು, ಕಾರ್ಮಿಕರನ್ನು ಮನೋಸೇಚ್ಛೆ 'ನೇಮಿಸಿಕೊಳ್ಳುವ ಮತ್ತು ಕಿತ್ತುಹಾಕುವ' ಹಕ್ಕನ್ನು ಮಾಲೀಕರಿಗೆ ನೀಡಲು ಬಯಸಿದೆ. ಸಂಸತ್ತಿನಲ್ಲಿ ಮಸೂದೆಯನ್ನು ಮಂಡಿಸುವ ಮೊದಲೇ, ಬಿಜೆಪಿ ಸರ್ಕಾರ ಒಂದು ನೋಟಿಫಿಕೇಶನ್ ಮೂಲಕ, ಇಂಡಸ್ಟ್ರಿಯಲ್ ಎಂಪ್ಲಾಯ್‌ಮೆಂಟ್ (ಸ್ಟಾಂಡಿಂಗ್ ಆರ್ಡರ್ಸ್) ಕಾಯ್ದೆಗೆ ತಿದ್ದುಪಡಿ ತಂದು 'ನಿಗದಿತ ಅವಧಿ ಉದ್ಯೋಗ'(ಫಿಕ್ಸೆಡ್ ಟರ್ಮ್ ಎಂಪ್ಲಾಯ್‌ಮೆಂಟ್) ವನ್ನು ಎಲ್ಲಾ ಕ್ಷೇತ್ರಗಳಿಗೂ ವಿಸ್ತರಿಸಿದೆ.

ಸಾಮಾಜಿಕ ಸುರಕ್ಷೆಗೆ ಸಂಬಂಧಿಸಿ ಈಗಿರುವ – ಇಪಿಎಫ್ ಕಾಯ್ದೆ, ಇಎಸ್‌ಐ ಕಾಯ್ದೆ, ಹೆರಿಗೆ ಸೌಲಭ್ಯ ಕಾಯ್ದೆ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಕಾಯ್ದೆ, ಬಿಡಿ ಕಾರ್ಮಿಕರ ಕಲ್ಯಾಣ ಕಾಯ್ದೆ, ಅಸಂಘಟಿತ ಕಾರ್ಮಿಕರ ಸಾಮಾಜಿಕ ಸುರಕ್ಷಾ ಕಾಯ್ದೆ, ಎಂಪ್ಲಾಯೀಸ್ ಕಾಂಪೆನ್ಸೇಶನ್ ಕಾಯ್ದೆ, ಮುಂತಾದ – 15 ಕಾರ್ಮಿಕ ಕಾನೂನುಗಳನ್ನು ವಿಲೀನಗೊಳಿಸಿ 'ಸಾಮಾಜಿಕ ಭದ್ರತೆಯ ಸಂಹಿತೆ' (ಕೋಡ್ ಆನ್ ಸೋಷಿಯಲ್ ಸೆಕ್ಯುರಿಟಿ)ಯನ್ನು ರೂಪಿಸಿದೆ.

ಇದರ ಪ್ರಕಾರ, ಈ ಯೋಜನೆಗಳ ಅಪಾರ ಪ್ರಮಾಣದ ನಿಧಿಯನ್ನು ಪ್ರಧಾನ ಮಂತ್ರಿ ನೇತೃತ್ವದ ರಾಷ್ಟ್ರೀಯ ಮಂಡಳಿಯಲ್ಲಿ ಇಡಲಾಗುತ್ತದೆ. ಗ್ರಾಚ್ಯುಟಿ, ಪೆನ್ಶನ್, ಹೆರಿಗೆ ಭತ್ಯೆ ಮುಂತಾದ ಕಲ್ಯಾಣ ಸ್ಕೀಂಗಳನ್ನು ರಾಜ್ಯ ಕಲ್ಯಾಣ ಮಂಡಳಿಗಳು ಜಾರಿ ಮಾಡುವ ಜವಾಬ್ದಾರಿ ಹೊಂದಿರುವಾಗ, ನಿಧಿಗಳನ್ನು ರಾಷ್ಟ್ರೀಯ ಮಂಡಳಿಯ ನಿಭಾಯಿಸುತ್ತದೆ. 'ಉತ್ತಮ ಹೂಡಿಕೆ'ಯ ನೆಪದಲ್ಲಿ ಕಾರ್ಮಿಕರ ಹಣವನ್ನು ಷೇರು ಮಾರುಕಟ್ಟೆಯಲ್ಲಿ ಹೂಡಲಾಗುತ್ತದೆ ಮತ್ತು ಹೀಗಾಗಿ ಕಾರ್ಮಿಕರ ಕಲ್ಯಾಣ ಸೌಲಭ್ಯಗಳು ಷೇರು ಮಾರುಕಟ್ಟೆಯ ಏರುಪೇರುಗಳನ್ನು ಅವಲಂಬಿಸಿರುತ್ತದೆ.

ಮಾಲೀಕರಿಲ್ಲದ ಅಸಂಘಟಿತ ಕಾರ್ಮಿಕರಲ್ಲಿ ಹೆಚ್ಚಿನವರು ತಮ್ಮ ಆದಾಯದ ಶೇ.20 ರಷ್ಟು ವಂತಿಗೆ ನೀಡಬೇಕಾಗುತ್ತದೆ. ಸೆಕ್ಷನ್ 4 ನೇ ಕ್ಯಾಟಗರಿಗೆ ಸೇರಿರುವ ಕಾರ್ಮಿಕರು ಯಾವುದೇ ವಂತಿಗೆಯನ್ನು ನೀಡಬೇಕಾಗಿಲ್ಲ; ಆದರೆ ಸರ್ಕಾರ ತನ್ನ ಪಾಲಿನ ವಂತಿಗೆಯ ಬಗ್ಗೆಯಾವುದೇ ನಿರ್ದಿಷ್ಟ ಬದ್ಧತೆಯನ್ನು ಪ್ರಕಟಿಸಿಲ್ಲ; ಸಂಹಿತೆಯು ಕೇವಲ 'ಸರ್ಕಾರವು ತನ್ನ ಪಾಲನ್ನು ಪಾವತಿಸುವುದೆಂದು ನಿರೀಕ್ಷಿಸಲಾಗಿದೆ' ಎಂದು ಹೇಳಿದೆ.

ಬಹುತೇಕ ನಿಯಂತ್ರಿಸಬಹುದಾದ, ಆದರೆ ಮಾಲೀಕರ ನಿರ್ಲಕ್ಷ್ಯದಿಂದ ಸಂಭವಿಸುವ ಕೈಗಾರಿಕಾ ಅಪಘಾತಗಳ ಕಾರಣದಿಂದ ಸಾವಿರಾರು ಕಾರ್ಮಿಕರು ಪ್ರತಿ ವರ್ಷ ಸಾಯುತ್ತಾರೆ. ಆಗ್ರಾ, ದೆಹಲಿಯ ಬೆಂಕಿ ಅಪಘಾತ, ಜಾರ್ಖಂಡ್‌ನ ಕಲ್ಲಿದ್ದಲು ಗಣಿ ಅಪಘಾತ ಒಳಗೊಂಡಂತೆ ಹಲವಾರು ಸ್ಥಳಗಳಲ್ಲಿ ನಡೆದ ಅಪಘಾತಗಳು ಕಾರ್ಮಿಕರ ಸುರಕ್ಷತೆ, ಅವರ ಜೀವಗಳು ಮಾಲೀಕರಿಗೆ ಅಥವಾ ಗುತ್ತಿಗೆದಾರರಿಗೆ ಮಹತ್ವದ್ದಲ್ಲ ಎಂಬುದನ್ನು ತೋರಿಸುತ್ತವೆ. ಅವರಿಗೆ ಕೇವಲ ಲಾಭ ಮಾತ್ರ ಸಂಬಂಧಿಸಿದ್ದು.

ಕಾರ್ಪೊರೇಟ್‌ಗಳು, ಮಾಲಕವರ್ಗದ ಪ್ರಕಾರ ಕಾರ್ಮಿಕ ಕಾನೂನುಗಳು 'ಸುಗಮ ವ್ಯಾಪಾರ'ಕ್ಕೆ ಅಡ್ಡಿ ಉಂಟು ಮಾಡುತ್ತವೆ. ಅವರದ್ದೇನೋ ಸ್ವಾರ್ಥಸಾಧನೆ. ಆದರೆ ಸರಕಾರವೇ ಏಕೆ ಇದನ್ನು ಪ್ರೋತ್ಸಾಹಿಸುತ್ತಿದೆ? ಸ್ವತಃ ಪ್ರಧಾನಿಗಳು, ಕಾರ್ಮಿಕ ಕಾನೂನುಗಳ 'ಜಂಗಲ್ ರಾಜ್'ನಿಂದಾಗಿ'ವ್ಯಾಪಾರದ ಅನಿರ್ಬಂಧತೆ'ಗೆ ತೊಂದರೆಯಾಗುತ್ತಿದೆ ಮತ್ತು ಹೂಡಿಕೆಗೆ ಸಮಸ್ಯೆಯಾಗಿದೆ ಎಂದೇಕೆ ಹೇಳುತ್ತಿದ್ದಾರೆ? ಕಾರ್ಮಿಕರ ಹಕ್ಕುಗಳನ್ನು ಮತ್ತು ಸೌಲಭ್ಯಗಳನ್ನು ಕಡಿತಗೊಳಿಸುವುದರಿಂದ ಆರ್ಥಿಕ ಪ್ರಗತಿ ಮತ್ತು ಉದ್ಯೋಗ ಸೃಷ್ಟಿಯಾಗುತ್ತದೆ ಎಂಬುದಕ್ಕೆ ಯಾವುದೇ ಆಧಾರಗಳಿಲ್ಲ ಎಂಬುದಾಗಿ, ಐಎಲ್‌ಓ ಒಳಗೊಂಡಂತೆ ಹಲವಾರು ಅಧ್ಯಯನಗಳು ಮತ್ತು ವರದಿಗಳು ಸ್ಪಷ್ಟವಾಗಿ ಹೇಳಿವೆ. ಆದರೂ ಸರ್ಕಾರ, ಈ ಎಲ್ಲಾ ಕ್ರಮಗಳೂ ಪ್ರಗತಿ ಸಾಧಿಸಲು ಮತ್ತು ಉದ್ಯೋಗ ಸೃಷ್ಟಿಸಲು ಎಂದು ವಾದಿಸುತ್ತಿದೆ. ಏಕೆ?

ಕಾರಣ ಸ್ಪಷ್ಟ. 'ಸುಗಮ ವ್ಯಾಪಾರ ಸೂಚ್ಯಂಕ'ವನ್ನು ಉತ್ತಮಗೊಳಿಸುವುದೇ ಈ ಸರಕಾರದ ಆದ್ಯತೆ, ಕಾರ್ಮಿಕರ ಉತ್ತಮ ಬದುಕಿನ ಸೂಚ್ಯಂಕಗಳನ್ನು ಉತ್ತಮಪಡಿಸುವುದಲ್ಲ. ಆದ್ದರಿಂದಲೇ ಯಾವುದೇ ಕಾನೂನಾತ್ಮಕ ರಕ್ಷಣೆಯಿಂದ ದೊಡ್ಡ ಸಂಖ್ಯೆಯ ಕಾರ್ಮಿಕರನ್ನು ಹೊರದೂಡುವುದೇ ಅದರ ಕಾರ್ಮಿಕ ಸುಧಾರಣೆ'ಗಳ ಮುಖ್ಯ ಉದ್ದೇಶ,

ಸರ್ಕಾರದ ಅಂಕಿ-ಅಂಶಗಳ ಪ್ರಕಾರ ದೇಶದ ಶೇ.93 ರಷ್ಟು ಶ್ರಮಶಕ್ತಿ ಯಾವುದೇ ಕಾರ್ಮಿಕ ಕಾನೂನುಗಳ ವ್ಯಾಪ್ತಿಯಲ್ಲಿರದ ಅಸಂಘಟಿತ ವಿಭಾಗವಾಗಿದೆ. ಕೇವಲ ಶೇ.7 ರಷ್ಟು ಶ್ರಮಶಕ್ತಿ ಮಾತ್ರ ಕಾರ್ಮಿಕ ಕಾನೂನುಗಳ ವ್ಯಾಪ್ತಿಯಲ್ಲಿದೆ. ಈ ಸಣ್ಣ ವಿಭಾಗದಲ್ಲೂ 50% ಈಗ ಕಾಂಟ್ರಾಕ್ಟ್ ಕಾರ್ಮಿಕರು. ಖಾಸಗಿ ಕ್ಷೇತ್ರದಲ್ಲಿ ಇದು 70%. ಸಂಘಟಿತ ಕ್ಷೇತ್ರದಲ್ಲಿ ಇಳಿದಿರುವ ರುವ ಈ ಸಣ್ಣ ವಿಭಾಗದ ಶೇ.90 ರಷ್ಟು ಕಾರ್ಮಿಕರ ಕಾನೂನಾತ್ಮಕ ರಕ್ಷಣೆಯನ್ನೂ ಈಗ ಕಿತ್ತುಹಾಕಲು ಈಗಾಗಲೇ ಮೋದಿ ಸರಕಾರ 'ಶ್ರಮೇವ ಜಯತೆ', ಅಪ್ರೆಂಟಿಸ್ ಕಾಯ್ದೆಯ ತಿದ್ದುಪಡಿ ಮಾಡಿದೆ, 'ರಾಷ್ಟ್ರೀಯ ಉದ್ಯೋಗಾರ್ಹತೆ ಹೆಚ್ಚಿಕೆ ಮಿಶನ್'(ಎನ್‌ಇಇಎಂ), 40 ಕಾರ್ಮಿಕರಿಗಿಂತ ಕಡಿಮೆ ಇರುವ ಕಾರ್ಖಾನೆ/ಉದ್ದಿಮೆಗಳಿಗೆ 16 ಕಾರ್ಮಿಕ ಕಾನೂನುಗಳಿಂದ ವಿನಾಯ್ತಿ ನೀಡುವ ತಿದ್ದುಪಡಿ ಮತ್ತು ಕಾರ್ಖಾನೆಗಳ ಕಾಯ್ದೆಯ ತಿದ್ದುಪಡಿ, ಕಾಂಟ್ರಾಕ್ಟ್ ಕಾಯ್ದೆ ತಿದ್ದುಪಡಿ, ತೀರಾ ಇತ್ತೀಚೆಗೆ 'ನಿಗದಿತ ಅವಧಿ ಉದ್ಯೋಗ'ದ ಅಧಿಸೂಚನೆ- ಹೀಗೆ ಹಲವಾರು ಕ್ರಮಗಳನ್ನು ತಂದಿದೆ.

ರಾಜ್ಯ ಸರಕಾರಗಳೂ ಕಾರ್ಮಿಕ ಕಾನೂಗಳ ವಿಷಯದಲ್ಲಿ ಇದೇ ದಾರಿಯಲ್ಲಿ ಸಾಗಬೇಕು ಎಂದೂ ಅದು ನಿರ್ದೇಸನ ಕೊಟ್ಟಿದೆ. ಅದರ ನೇತೃತ್ವದ ರಾಜಸ್ಥಾನ ಸರಕಾರದ ಮಾದರಿ ಅನುಸರಿಸಬೇಕು ಎಂಬುದು ಅದರ ಬಯಕೆ. ಮಧ್ಯಪ್ರದೇಶ, ಮಹಾರಾಷ್ಟ್ರ, ಹರ್ಯಾಣ, ಹಿಮಾಚಲ ಪ್ರದೇಶ, ಉತ್ತರಪ್ರದೇಶದ ಬಿಜೆಪಿ ಸರಕಾರಗಳು ಅದೇ ದಾರಿಯಲ್ಲಿ ಸಾಗಿವೆ, ಹಲವು ಬಿಜೆಪಿಯೇತರ ರಾಜ್ಯ ಸರಕಾರಗಳೂ ಹಿಂದೆ ಬಿದ್ದಿಲ್ಲ.

ಒಟ್ಟಿನಲ್ಲಿ ಎಲ್ಲ ಕೆಲಸದ ಸ್ಥಳಗಳಲ್ಲೂ ಉದ್ಯೋಗದ ಸಂಬಂಧಗಳನ್ನು ತಾತ್ಕಾಲಿಕ ಮತ್ತು ಅಭದ್ರಗೊಳಿಸುವ ಒಂದು ಸಮಗ್ರ ಹುನ್ನಾರ ಈ ಬಿಜೆಪಿ ಸರಕಾರದ್ದು ಎಂಬುದು ಸ್ಪಷ್ಟವಾಗಿದೆ. ಚುನಾವಣೆಗಳಲ್ಲಿ ಬಾರಿ ಗೆಲುವು ಸಾಧಿಸಲು ನೆರವಾದ ದೇಶಿ-ವಿದೇಶಿ ಕಾರ್ಪೊರೇಟ್‌ಗಳ, ಹಣದ ಥೈಲಿಗಳ 'ಋಣ'ಕ್ಕೆ ಬದ್ಧವಾದ ಈ ಸರಕಾರ ಅದನ್ನು ತೀರಿಸಲು ಇಡೀ ಕಾರ್ಮಿಕ ವರ್ಗವನ್ನು ಅವರ ಗುಲಾಮಗಿರಿಯತ್ತ ತಳ್ಳಲು ಮುಂದಾಗಿದೆ.

ರೈತ-ಕಾರ್ಮಿಕ ಸಂಘರ್ಷ ರ್‍ಯಾಲಿ ಕಾರ್ಮಿಕರ ಮೂಲ ಹಕ್ಕುಗಳ ಮೇಲೆ ಈ ಸುಲಿಗೆಕೋರ ದಾಳಿಗಳು, ಮತ್ತು ಗುಲಾಮಗಿರಿ ಹೇರುವ ದುಷ್ಟ ಹುನ್ನಾರಗಳ ವಿರುದ್ಧ ಕಾರ್ಮಿಕರ ಆಕ್ರೋಶಕ್ಕೆ ದನಿ ನೀಡುತ್ತದೆ, ಇಂತಹ ಧೋರಣೆಗಳನ್ನು ಇನ್ನು ಸಹಿಸೆವು, ಗುಲಾಮಗಿರಿ ಹೇರಿಕೆ ಸಾಧ್ಯವಿಲ್ಲ ಎಂದು ಬಿಜೆಪಿ ಸರಕಾರಕ್ಕೆ ಎಚ್ಚರಿಕೆ ನೀಡಲಿದೆ. ○

ಶತಮಾನದ ಭೀಷಣ ಬಿಕ್ಕಟ್ಟನ್ನು ಎದುರಿಸಿ ನಿಂತ ಕೇರಳ

ಪುಟ 8 ರಿಂದ

ಕರಾರುವಾಕ್ಕಾದ ಸಂಗತಿಗಳು ಮತ್ತು ವಿವರಗಳನ್ನು ಸ್ವತಃ ಮುಖ್ಯಮಂತ್ರಿಗಳೇ ಪ್ರತಿದಿನ, ಕೆಲವೊಮ್ಮೆ ಎರಡು ಬಾರಿ ಪತ್ರಿಕಾ ಹೇಳಿಕೆಗಳ ಮೂಲಕ ಕೊಡುತ್ತಿದ್ದುದು ಅಪಾರ ವಿಶ್ವಾಸವನ್ನು ಕೊಟ್ಟಿತು ಮತ್ತು ಈ ವಿಪತ್ತು ಹುಟ್ಟಿಸಿದ ಭೀತಿಯನ್ನು ಕಡಿಮೆ ಮಾಡುವಲ್ಲಿ ನೆರವಾಯಿತು. ಪ್ರತಿಯೊಂದು ವಿಷಯದ ಉಸ್ತುವಾರಿ ಮಾಡುತ್ತ ಇಡೀ ಕಾರ್ಯಾಚರಣೆಗೆ ಅವರು ನೇತೃತ್ವ ನೀಡಿದರು. ಇದು ಅಬ್ಬರದ ಮಾತುಗಳ ಮತ್ತು ಆತ್ಮ ಪ್ರಶಂಸೆಯ ಪ್ರವೃತ್ತಿಯವರಿಗೆ ಅಥವ ತಮ್ಮ ವಿಫಲತೆಗಳನ್ನು ಬೇರೆಯವರ ಮೇಲೆ ದೋಷ ಹೊರಿಸಿ ಮರೆಮಾಚುವ ಪ್ರವೃತ್ತಿಯವರಿಗೆ ಒಂದು ಪಾಟ.

ರಾಜ್ಯ ಸರಕಾರ ಕೇಂದ್ರ ಸರಕಾರದ ಬಳಿ ಸಾರಿತು. ಕೇಂದ್ರ ಸಂಕಟದಲ್ಲಿದ್ದ ಜನಗಳನ್ನು ರಕ್ಷಿಸುವಲ್ಲಿ ರಕ್ಷಣಾ ಪಡೆಗಳ ರಕ್ಷಕ ತಂಡಗಳ ನಿಪುಣತೆ ಮತ್ತು ಅನುಭವದ ನೆರವು ಒದಗಿಸಿತು. ರಾಜ್ಯ ನಾಗರಿಕ ಆಡಳಿತದ ಒಟ್ಟಾರೆ ನಾಯಕತ್ವದಲ್ಲಿ ಕೇಂದ್ರ ಮತ್ತು ರಾಜ್ಯದ ನಿಕಟ ಸಂಯೋಜನೆಯಿಂದಾಗಿ ರಕ್ಷಣಾ ಕಾರ್ಯಾಚರಣೆ ಯಶಸ್ವಿಯಾಗಿ ನಡೆಯಿತು. ಪರಿಹಾರ ಕಾರ್ಯಾಚರಣೆಗಳಿಗೆ ಅಡ್ಡಿಯುಂಟು ಮಾಡಬಹುದಾಗಿದ್ದ ಯಾವುದೇ ತಪ್ಪು ತಿಳಿವಳಿಕೆ ಅಥವ ತಪ್ಪು ಸಂದೇಶಕ್ಕೆ ಅವಕಾಶವೇ ಇರಲಿಲ್ಲ. **ಕೇಂದ್ರದ ಈ ರಕ್ಷಕ ತಂಡಗಳು ಮಾಡಿದ ಅದ್ಭುತ ಕೆಲಸಕ್ಕೆ ರಾಜ್ಯ ಸರಕಾರ ಆಳವಾದ ಪ್ರಶಂಸೆ ವ್ಯಕ್ತಪಡಿಸಿದೆ. ಇದು ಕೂಡ ಒಂದು ಪಾಟ.**

ಕೇರಳ ಸರಕಾರ ಮಾಹಿತಿ ನೀಡುವಲ್ಲಿ ಮತ್ತು ನಿರ್ಧಾರ ಕೈಗೊಳ್ಳುವಲ್ಲಿ ರಾಜ್ಯದ ರಾಜಕೀಯ ಪಕ್ಷಗಳ ಎಲ್ಲ ವಿಭಾಗಗಳನ್ನು ಒಳಗೊಳ್ಳಲು ಪ್ರಯತ್ನಿಸಿತು. ಆಗಸ್ಟ್ 11ರಂದು **ಕೇಂದ್ರ ಗೃಹಮಂತ್ರಿ ರಾಜನಾಥ್ ಸಿಂಗ್ ವೈಮಾನಿಕ ಸರ್ವೆಗೆ ರಾಜ್ಯಕ್ಕೆ ಭೇಟಿ ನೀಡಿದಾಗ ಅವರ ಜತೆಗೆ ಮುಖ್ಯಮಂತ್ರಿಗಳೊಂದಿಗೆ ಪ್ರತಿಪಕ್ಷದ ಮುಖಂಡರನ್ನೂ ಸೇರಿಕೊಳ್ಳಲು ಆಹ್ವಾನಿಸಲಾಯಿತು ಮತ್ತು ನಂತರ ಪರಿಹಾರ ಶಿಬಿರಗಳಿಗೆ ಜಂಟಿಯಾಗಿ ಭೇಟಿ ನೀಡಿದರು. ಖಂಡಿತವಾಗಿಯೂ ಹೀಗೆ ಮಾಡಿದ ಏಕೈಕ ರಾಜ್ಯ ಸರಕಾರ ಇದಾಗಿದೆ.** ಕೇರಳದ ಅತ್ಯಂತ ಧ್ರುವೀಕೃತ ರಾಜಕೀಯ ವಾತಾವರಣದಲ್ಲಿ ಇದು ಕೇರಳ ಮತ್ತು ಅದರ ಜನತೆಯನ್ನು ಉಳಿಸುವುದು ಎಲ್ಲ ಪಕ್ಷಗಳ ಐಕ್ಯ ಇಚ್ಛೆಯಾಗಿರಬೇಕು, ಇದಕ್ಕಾಗಿ ಎಲ್ಲ ಪಕ್ಷಗಳ ಸಹಕಾರ ಅಗತ್ಯ , ಇದೇ ಪ್ರಾಥಮಿಕ ಗುರಿಯಾಗಬೇಕು ಎಂಬ ಬಲವಾದ ಸಂದೇಶವನ್ನು ಜನತೆಗೆ ಇದು ಕಳಿಸಿತು. ಎಲ್ಲ ಪ್ರತಿಪಕ್ಷಗಳನ್ನು ಜತೆಗೊಯ್ಯುವ ಈ ರಾಜಕೀಯ ಕ್ರಿಯೆ, ನಡುನಡುವೆ, ತೀವ್ರ ಬಿಕ್ಕಟ್ಟಿನ ಸಂದರ್ಭದಲ್ಲಿಯೂ ಕೆಲವು ಪ್ರತಿಪಕ್ಷಗಳ ಮುಖಂಡರ ಪ್ರತಿಕೂಲ ಪ್ರತಿಕ್ರಿಯೆಗಳೇನೇ ಇದ್ದರೂ ಕೇರಳದ ಜನತೆಗೆ ವಿಶ್ವಾಸ ಒದಗಿಸಿತು.

ಸುಮಾರಾಗಿ ಇಡೀ ರಾಜ್ಯವನ್ನೇ ಮತ್ತೆ ಕಟ್ಟಬೇಕಾಗಿರುವ ಅಪಾರ ಸವಾಲುಗಳನ್ನು ಎದುರಿಸುವ ತನ್ನ ಯೋಜನೆಗಳನ್ನು ಚರ್ಚಿಸಲಿಕ್ಕಾಗಿ ರಾಜ್ಯ ಸರಕಾರ ಒಂದು ವಿಶೇಷ ವಿಧಾನಸಭಾ ಅಧಿವೇಶನವನ್ನು ಕರೆದಿದೆ. ಇಂತಹ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಎಲ್ಲ ಪಕ್ಷಗಳ ಚುನಾಯಿತ ಪ್ರತಿನಿಧಿಗಳ ಪ್ರಜಾಸತ್ತಾತ್ಮಕ ಭಾಗವಹಿಸುವಿಕೆಯನ್ನು ಖಾತ್ರಿಗೊಳಿಸುವುದು ಇದರ ಉದ್ದೇಶ. ಇದು ಕೂಡ "ಪ್ರತಿಪಕ್ಷ–ಮುಕ್ತ" ರಾಜಕೀಯ ವ್ಯವಸ್ಥೆಯನ್ನು ಬಯಸುವವರಿಗೆ ಒಂದು ಪಾಟ.

ಈ ನೆರೆ ವಿಪತ್ತಿನ ಸಂದರ್ಭದಲ್ಲಿ ಪರಿಸರ–ಸ್ನೇಹಿ ಮತ್ತು ಪರಿಸರ ಸಂವೇದಿ ಧೋರಣೆಗಳ ಅಗತ್ಯದ ನ್ಯಾಯಬದ್ಧ ಪ್ರಶ್ನೆಗಳನ್ನು ಎತ್ತಲಾಗಿದೆ. ದಶಕಗಳ ಕಾಲ ಪರಿಸರ–ಸೂಕ್ಷ್ಮ ಪ್ರದೇಶಗಳ ಲಂಗುಲಗಾಮಿಲ್ಲದ ವಿನಾಶ ಕ್ರಿಯೆ ಈ ದುರಂತಕ್ಕೆ ಒಂದು ಕಾರಣ ಎಂಬ ಟೀಕೆಗಳಿವೆ. ಇವೆಲ್ಲ ಚರ್ಚಿಸಬಹುದಾದ ಮತ್ತು ಚರ್ಚಿಸಬೇಕಾದ ಪ್ರಶ್ನೆಗಳು. ಹವಾಮಾನ ಬದಲಾವಣೆಯ ಪರಿಣಾಮ ಮತ್ತು ಅಭಿವೃದ್ಧಿ ಮಾದರಿಗಳೊಂದಿಗೆ ಅದರ ಸಂಬಂಧವನ್ನೂ ಉಪೇಕ್ಷಿಸುವಂತಿಲ್ಲ. ಕೇರಳದ "ಪುನರ್ರಚನೆ"ಯ ತನ್ನ ಕಣ್ಣೋಟದಲ್ಲಿನ ಭವಿಷ್ಯದ ಯೋಜನೆಗಳಲ್ಲಿ ರಾಜ್ಯ ಸರಕಾರ ನಿಸ್ಸಂದೇಹವಾಗಿಯೂ ಈ ಕಾಳಜಿಗಳ ಬಗ್ಗೆ ಗಮನ ಕೇಂದ್ರೀಕರಿಸುತ್ತದೆ

ದೇಶಕ್ಕೆ ಅತ್ಯಂತ ಮಹತ್ವದ ಪಾಟವನ್ನು ಕೇರಳದ ಜನಗಳೇ ಕೊಟ್ಟಿದ್ದಾರೆ. ಈ ರಾಜ್ಯದಲ್ಲಿ ಜಾತಿಗಳು ಮತ್ತು ಸಮುದಾಯಗಳನ್ನು ಮೀರಿದ ಸಾಮುದಾಯಿಕ ಮತ್ತು ಸಾಮಾಜಿಕ ಕೆಲಸದ ಸಂಸ್ಕೃತಿಗಳ ದೀರ್ಘಕಾಲೀನ ಪರಂಪರೆಗಳು ಈ ರಕ್ಷಣಾ ಕಾರ್ಯಾಚರಣೆಯ ವೇಳೆಯಲ್ಲಿ ಮುನ್ನೆಲೆಗೆ ಬಂದವು. ಸಂಕಟಕ್ಕೀಡಾದ ಜನಗಳನ್ನು ರಕ್ಷಿಸುವಲ್ಲಿ ಈ ಅಜ್ಞಾತ ಧೀರರು, ಯುವಜನರೂ, ವಯಸ್ಸಾದವರೂ ಪ್ರದರ್ಶಿಸಿದ ಅಪಾರ ತ್ಯಾಗ ಮನೋಭಾವನೆಯಲ್ಲಿ ಇವು ವ್ಯಕ್ತಗೊಂಡಿವೆ. ಸಾವಿರಾರು ಮೀನುಗಾರರು ತಮ್ಮದೇ ದೋಣಿಗಳೊಂದಿಗೆ, ಭಾರೀ ಮಳೆ ಮತ್ತು ಪ್ರಕ್ಷುಬ್ಧ ನೀರಿನ ಅಬ್ಬರಗಳನ್ನೂ ಲೆಕ್ಕಿಸದೆ, ತಮ್ಮ ಪ್ರಾಣಗಳನ್ನೇ ಪಣವಾಗಿಟ್ಟು ತಮ್ಮ ಸಹನಾಗರಿಕರ ರಕ್ಷಣೆಗೆ ಧಾವಿಸಿದ್ದನ್ನು ಕಂಡರೆ ಯಾರ ಮನಸ್ಸು ತಾನೇ ವಿಚಲಿತಗೊಳ್ಳದು. ಒಬ್ಬ ಹಿರಿಯ ವಯಸ್ಸಿನ ಮಹಿಳೆ ಆಕೆಯನ್ನು ರಕ್ಷಿಸಲು ಬಂದ ದೋಣಿಗೆ ಹತ್ತಲು ಕಷ್ಟಪಡುತ್ತಿದ್ದಾಗ ಒಬ್ಬ ಬಲಿಷ್ಟ ಮೀನುಗಾರ ತನ್ನ ಬೆನ್ನ ಮೇಲೆಯೇ ಕಾಲಿಟ್ಟು ಹತ್ತಲು ಅನುವಾಗುವಂತೆ ಬಗ್ಗಿ ಕುಳಿತ ಚಿತ್ರ ಈ ಜನಗಳ ಧೈರ್ಯ, ಸಾಹಸಗಳ ಸಂಕೇತ. ಇವರನ್ನೆಲ್ಲ ರಾಜ್ಯ ಸರಕಾರ ವಿಶೇಷವಾಗಿ ಗುರುತಿಸಿದೆ.ಈ ಮೀನುಗಾರರು ಎಲ್ಲ ಧಾರ್ಮಿಕ ಸಮುದಾಯಗಳಿಗೂ ಸೇರಿದವರು–ಮುಸ್ಲಿಮರು, ಕ್ರೈಸ್ತರು, ಹಿಂದೂಗಳು. ಆದರೆ ಯಾರಿಗೂ ಅದು ತಮ್ಮ ರಕ್ಷಣಾ ಕಾರ್ಯಾಚರಣೆಗಳಲ್ಲಿ ಒಂದು ಅಂಶವೇ ಆಗಿರಲಿಲ್ಲ. ತಮ್ಮ ಅತ್ಯಂತ ಸಂಕಟದ, ಕಷ್ಟದ ಮತ್ತು ಭೀತಿಯ ದಿನಗಳಲ್ಲಿ ಕೇರಳೀಯರ ಈ ಸ್ಫೂರ್ತಿ ವಂದನೀಯ, ಒಂದು ಕಲಿಯಲೇಬೇಕಾದ ಪಾಟ.

ಇಡೀ ದೇಶ ಸಹಾನುಭೂತಿಯಿಂದ, ಸೌಹಾರ್ದತೆಯಿಂದ ಸ್ಪಂದಿಸುತ್ತಿದ್ದಾಗ, ವ್ಯಕ್ತಿಗಳು, ಸಂಘಟನೆಗಳು ಕೇರಳಕ್ಕೆ ಪರಿಹಾರ ಸಾಮಗ್ರಿಗಳನ್ನು ಅತ್ಯಂತ ತುರ್ತಿನಿಂದ ಕಳಿಸುವುದರಲ್ಲಿ ಮಗ್ನರಾಗಿದ್ದಾಗ, ಕೆಲವು ನಿರ್ದಿಷ್ಟ ಬಣ್ಣಗಳ ರಾಜಕೀಯದ ಮಂದಿ ತಮ್ಮ ವಿಭಜನಕಾರೀ ರಾಜಕೀಯವನ್ನು ಮುಂದುವರೆಸಿದ್ದು ಜನಗಳಲ್ಲಿ ದಿಗಿಲು ಮತ್ತು ಆಕ್ರೋಶ ತುಂಬಿದೆ. ಸಂಘ ಪರಿವಾರದ ಸದಸ್ಯರು ಸಾಮಾಜಿಕ ಮಾಧ್ಯಮಗಳಲ್ಲಿ ದ್ವೇಷ ಕಾರುವ ಮಾತುಗಳನ್ನು ಹಾಕಿದರು. ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ವಂತಿಗೆ ನೀಡಬೇಡಿ, ಏಕೆಂದರೆ ಅದನ್ನು ಅಲ್ಪಸಂಖ್ಯಾತರಿಗೆ ಬಳಸಲಾಗುತ್ತದೆ, ಹಿಂದೂಗಳಿಗಲ್ಲ ಎಂದು ಹೇಳಿದರು. ಒಬ್ಬ ಬಿಜೆಪಿ ಐಟಿ ತಂಡದ ಸದಸ್ಯ ಈ ವಿಪತ್ತು ದುಡ್ಡಿದ್ದ ಜನರನ್ನು ಮಾತ್ರ ತಟ್ಟಿದೆ, ಅವರಿಗೆ ಯಾವುದೇ ಪರಿಹಾರದ ಅಗತ್ಯ ಇಲ್ಲ ಎಂಬ ಅತ್ಯಂತ ತಪ್ಪು ದಾರಿಗೆಳೆಯುವ, ದುಷ್ಟ ಸಂದೇಶವನ್ನು ಹರಡಿಸಿದ. ರಿಝರ್ವ್ ಬ್ಯಾಂಕಿನ ಮಂಡಳಿಗೆ ಹೊಸದಾಗಿ ನೇಮಕಗೊಂಡಿರುವ ಸಂಘ ಪರಿವಾರಕ್ಕೆ ನಿಕಟವಾಗಿರುವ ಸದಸ್ಯ ಇದು ಕೇರಳದ ಬಗ್ಗೆ ದೇವರ ಕ್ರೋಧ ಎಂದೇ ಟ್ವೀಟ್ ಮಾಡಿದರು. ಶಬರಿಮಲೆ ವಿಷಯದಲ್ಲಿ ಸುಪ್ರಿಂ ಕೋರ್ಟಿನ ನಿಲುವು ಈ ಕ್ರೋಧಕ್ಕೆ ಕಾರಣವಂತೆ! ಇಂತಹ ಸಂದೇಶಗಳನ್ನು ಒಬ್ಬನೇ ಒಬ್ಬ ಬಿಜೆಪಿಯ ಅಥವ ಆರೆಸ್ಸೆಸ್‌ನ ಮುಖಂಡ ಖಂಡಿಸಿಲ್ಲ. ಅತ್ಯಂತ ಸಂಕಟದ ಸಮಯದಲ್ಲಿ ಇಂತಹ ವಿಷಮಯ ಸಂದೇಶಗಳನ್ನು ಹಾಕುವುದು ಅತ್ಯಂತ ಅಮಾನವೀಯತೆಯನ್ನು ಬಿಂಬಿಸುತ್ತದಷ್ಟೇ.

ಕೇಂದ್ರ ಸರಕಾರ ಇಂತಹ ಕೀಳು ಮಟ್ಟದ ರಾಜಕೀಯದಿಂದ ಪ್ರಭಾವಿತಗೊಳ್ಳುವದಿಲ್ಲ, ಬದಲಾಗಿ ಕೇರಳಕ್ಕೆ ಪುನರ್ರಚನೆಗೆ ಅಗತ್ಯವಾದ ಎಲ್ಲ ನೆರವನ್ನೂ ಒದಗಿಸುವಲ್ಲಿ ಅತ್ಯುತ್ತಮ ಒಕ್ಕೂಟ ನೀತಿಗಳನ್ನು ಎತ್ತಿ ಹಿಡಿಯುತ್ತದೆ ಎಂದು ಆಶಿಸೋಣ ಮತ್ತು ನಿರೀಕ್ಷಿಸೋಣ.



ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ನವಕೇರಳ ಕಟ್ಟುವುದು...



ಪುಟ 8 ರಿಂದ

*** ಪರಿಸರ ಕೇಡುಗಳನ್ನು ತಪ್ಪಿಸಲು ಗಮನ ಕೇಂದ್ರೀಕರಿಸಲಾಗುವುದೇ?**

ಎಲ್ಲ ಸಂಬಂಧಪಟ್ಟ ವಲಯಗಳಿಂದ ಕಾಳಜಿಗಳನ್ನು ಗಮನಕ್ಕೆ ತಗೊಳ್ಳಲಾಗುವುದು. ಇದರ ಹೊರತಾಗಿಯೂ ಎಡಪಂಥದ್ದು ಸದಾ ಪರಿಸರ ಕಾಳಜಿಯ ಅಭಿವೃದ್ಧಿ ಧೋರಣೆಯೇ. ನಾವು ಸದಾ ಸಮತೋಲದ ಅಭಿವೃದ್ಧಿಗೆ ಒತ್ತು ನೀಡಿದ್ದೇವೆ.

*** ಮರು ರಚನೆಯ ಪ್ರಕ್ರಿಯೆ ನೀವು ಕಾರ್ಯಗತ ಗೊಳಿಸುತ್ತಿರುವ ಅಭಿವೃದ್ಧಿ ಚಟುವಟಿಕೆಗಳ ಮೇಲಿಂದ ಗಮನವನ್ನು ಬೇರೆಡೆಗೆ ತಿರುಗಿಸುತ್ತದೆಯಲ್ಲವೇ? ಇದನ್ನು ಹೇಗೆ ನಿಭಾಯಿಸುತ್ತೀರಿ?**

ಈಗ ಕಾರ್ಯಗತವಾಗುತ್ತಿರುವ ಅಭಿವೃದ್ಧಿ ಪ್ರಕ್ರಿಯೆ ಮುಂದೆ ಬರಲಿರುವ ಯೋಜನಗೆ ತದ್ವಿರುದ್ಧ ಎಂದು ಹೆಸರಿಸುವ ಅಗತ್ಯವೇನಿಲ್ಲ. ನಿಮಗೆ ತಿಳಿದಿರುವಂತೆ ಕೇರಳ ಮೂಲರಚನೆಯ ನಿರ್ಣಾಯಕ ವಲಯದಲ್ಲಿ ಹಿಂದೆ ಬಿದ್ದಿದೆ. ಸರಿಯಾದ ರಸ್ತೆಗಳ ಕೊರತೆ ಇವುಗಳಲ್ಲಿ ಒಂದು. ಆದ್ದರಿಂದಲೇ ನಮ್ಮ ಸರಕಾರ ರಾಷ್ಟ್ರೀಯ ಹೆದ್ದಾರಿಗಳ ವಿಸ್ತರಣೆಗೆ ಅಷ್ಟೊಂದು ಮಹತ್ವ ಕೊಡುತ್ತಿರುವುದು. ರಾಜ್ಯದ ಒಟ್ಟಾರೆ ಬೆಳವಣಿಗೆಗೆ ಇಂತಹ ಪ್ರಾಜೆಕ್ಟುಗಳು ಅಗತ್ಯವಾಗಿವೆ. ಇಂತಹ ಚಟುವಟಿಕೆಗಳು ಪ್ರಸ್ತಾವಿತ ಕಾರ್ಯಯೋಜನೆಗೆ ತದ್ವಿರುದ್ಧವೇನೂ ಆಗಿರಬೇಕಿಲ್ಲ.

*** ಈ ಅನಾಹುತದಿಂದ ಕೇರಳ ಮತ್ತು ನಿಮ್ಮ ಸರಕಾರ ಕಲಿತಿರುವ ಪಾಟವೇನು?**

ಪ್ರತಿಯೊಂದು ಘಟನೆಯೂ ಪ್ರತಿಯೊಬ್ಬರಿಗೂ, ಸರಕಾರಕ್ಕೂ ಒಂದು ಪಾಟವಾಗಬೇಕು. ನಿಮಗೆಲ್ಲರಿಗೂ ಗೊತ್ತಿರುವಂತೆ ಇದು ಒಂದು ಶತಮಾನದಲ್ಲೇ ಅಭೂಪತಪೂರ್ವವಾದ ವಿಪತ್ತು. ಆದ್ದರಿಂದಲೇ ಜನಗಳು ಇದು ಇಷ್ಟೊಂದು ದೊಡ್ಡ ಪ್ರಮಾಣ ಪಡೆಯಬಹುದು ಎಂದು ನಂಬಲು ಆರಂಭದಲ್ಲಿ ನಿರಾಕರಿಸಿದರು. ನಿಜ, ನಾವೀಗ ಹೆಚ್ಚು ಜಾಗರೂಕರಾಗಿರಬೇಕು. ಇಂತಹ ಘಟನೆಗಳನ್ನು ತಡೆಯಲು ಕ್ರಮಗಳನ್ನು ಕೈಗೊಳ್ಳಬೇಕು. ಭವಿಷ್ಯದಲ್ಲಿಯೂ ವಿಪತ್ತುಗಳು ನಮ್ಮನ್ನು ಕಾಡುತ್ತವೆ. ಆದರೆ ನಾವು ಹೇಗೆ ಸಾವು–ನೋವುಗಳನ್ನು ತಪ್ಪಿಸುತ್ತೇವೆ ಎಂಬುದು ನಮ್ಮ ಪ್ರಧಾನ ಗುರಿಗಳಲ್ಲಿ ಒಂದಾಗಿರಬೇಕು.

*** ಯುಎಇ ಸರಕಾರದ ಹಣಕಾಸು ನೆರವಿನ ಬಗ್ಗೆ ಗೊಂದಲ ಇದ್ದಂತಿದೆ**

ನನಗೆ ತಿಳಿದಂತೆ ಯುಎಇ ಸರಕಾರ ತಾನಾಗಿಯೇ ಈ ನೆರವಿನ ಪ್ರಸ್ತಾಪ ಇಟ್ಟಿದೆ. ಯುಎಇ ಯನ್ನು ಬೇರೆ ಯಾವುದೇ ದೇಶದಂತೆ ಪರಿಗಣಿಸಲು ಆಗುವುದಿಲ್ಲ. ಏಕೆಂದರೆ ಅಲ್ಲಿ ಆಳುವವರು ಒತ್ತಿ ಹೇಳಿರುವಂತೆ, ಭಾರತೀಯರು, ವಿಶೇಷವಾಗಿ ಕೇರಳೀಯರು ಅವರ ದೇಶ ಕಟ್ಟುವಲ್ಲಿ ಅಪಾರ ಕೊಡುಗೆ ನೀಡಿದ್ದಾರೆ.

ದೌರ್ಜನ್ಯ

ಇತ್ತೀಚಿನ ಎನ್‌ಸಿಆರ್‌ಬಿ ಮಾಹಿತಿಗಳ ಪ್ರಕಾರ ದಲಿತರ ಮೇಲೆ ಪ್ರತಿಗಂಟೆಗೆ ಸರಾಸರಿಯಂತೆ 5 ಬರ್ಬರ ದೌರ್ಜನ್ಯಗಳು ನಡೆಯುತ್ತಿವೆ. 2015ರಿಂದ 2016ರ ನಡುವೆಯೇ ಇದು 5.5% ದಷ್ಟು ಹೆಚ್ಚಿದೆ. ಇತರ ಮೇಲು–ಕೀಳಿನ ಆಚರಣೆಗಳಂತೂ ಹಲವೆಡೆಗಳಲ್ಲಿ ಮುಂದುವರೆಯುತ್ತಿವೆ. ಸರ್ವೋಚ್ಚ ನ್ಯಾಯಾಲಯದಲ್ಲಿ ದೌರ್ಜನ್ಯ ತಡೆ ಕಾಯ್ದೆಯ ಮೊಕದ್ದಮೆಯಲ್ಲಿ ಬಿಜೆಪಿ ಸರಕಾರ ಪರಿಣಾಮಕಾರಿಯಾಗಿ ವಾದ ಮುಂದಿಡಲಿಲ್ಲ. ಸುಪ್ರಿಂ ಕೋರ್ಟ್ ತೀರ್ಪು ಅದನ್ನು ದುರ್ಬಲಗೊಳಿಸಿದಾಗ ತಕ್ಷಣವೇ ಅದರ ಮರು ಪರಾಮರ್ಶೆಗೆ ಅರ್ಜಿ ಹಾಕಲಿಲ್ಲ. ಈ ತೀರ್ಪಿನ

ಸಾಮಾಜಿಕ ನ್ಯಾಯ ಇಡೀ ದುಡಿಯುವ ವರ್ಗದ ಬೇಡಿಕೆ

ಪುಟ 11 ರಿಂದ


ವಿರುದ್ಧ ಆಕ್ರೋಶ ಭುಗಿಲೆದ್ದಾಗ ಹಲವು ರಾಜ್ಯಗಳಲ್ಲಿ ಬಿಜೆಪಿ ಸರಕಾರಗಳು ಗೋಲೀಬಾರಿಗೂ ಇಳಿದವು, ಇದರಲ್ಲಿ 9 ದಲಿತರ ಸಾವು ಉಂಟಾಯಿತು. ಮಹಾರಾಷ್ಟ್ರದಲ್ಲಿ ದಲಿತರ ಮೇಲೆ ಹಿಂಸಾಚಾರ ನಡೆಸಿದವರನ್ನು ಶಿಕ್ಷಿಸುವ ಬದಲು ದಲಿತ ಹಕ್ಕುಗಳ ಕಾರ್ಯಕರ್ತರಿಗೇ ಕಿರುಕುಳ ನೀಡಲಾಗುತ್ತಿದೆ.

ದುಡಿಯುವ ವರ್ಗ ದಲಿತ ಮತ್ತು ಆದಿವಾಸಿಗಳ ವಿರುದ್ಧ ನಡೆಯುತ್ತಿರುವ ಅನ್ಯಾಯದ ವಿರುದ್ಧ ಹೋರಾಡಲು ಮತ್ತು ಅವನ್ನು ಕೊನೆಗೊಳಿಸಲು ಕರ್ತವ್ಯಬದ್ಧವಾಗಿದೆ. ಜಾತಿ ವಿಭಜನೆ ಮತ್ತು ಜಾತಿ ಆಧರಿತ ಶೋಷಣೆ ಮೇಲ್ವರ್ಗಗಳ ಜನರು ಉದ್ದಿಮೆಗಳ ಮಾಲಕರು, ಭೂಮಾಲಕರು ದುಡಿಯುವ ಜನಗಳನ್ನು ವಿಭಜಿಸಿಟ್ಟು ಅಗ್ಗದ ಶ್ರಮಶಕ್ತಿ ತಮಗೆ ಲಭ್ಯವಾಗುವಂತೆ ಮಾಡಲು ಬಳಸುವ ಅಸ್ತ್ರಗಳು. ಆದ್ದರಿಂದ ದಲಿತ ಮತ್ತು ಆದಿವಾಸಿ ಕಾರ್ಮಿಕರ ಅಮಾನವೀಯ ತಾರತಮ್ಯ ಮತ್ತು ದಮನ ಮುಂದುವರೆಯುವ ವರೆಗೆ ಇತರ ಕಾರ್ಮಿಕರ ಬದುಕು ಉತ್ತಮ ಪಡಿಸಿಕೊಳ್ಳುವ ಹೋರಾಟಗಳು ಯಶಸ್ವಿಯಾಗುವದಿಲ್ಲ. ಅದೇ ರೀತಿಯಲ್ಲಿ ರೈತರ ಹೋರಾಟಗಳು ಈ ವಿಭಾಗಗಳ ಬಡರೈತರನ್ನು, ಕೃಷಿ ಕೂಲಿಕಾರರನ್ನು ಒಳಗೊಳ್ಳದೇ ಯಶಸ್ವಿಯಾಗುವುದಿಲ್ಲ.

ಸಾಮಾಜಿಕ ತಾರತಮ್ಯ, ದೌರ್ಜನ್ಯ ಕೇವಲ ದಲಿತರು ಮತ್ತು ಆದಿವಾಸಿಗಳ ಕಾಳಜಿಯಲ್ಲ, ಇಡೀ ದುಡಿಯುವ ವರ್ಗ ಅದನ್ನು ಎತ್ತಿಕೊಳ್ಳಬೇಕು. ನವ–ಉದಾರವಾದಿ ಧೋರಣೆಗಳು ಮತ್ತು ಜಾತಿವಾದಿ, ಕೋಮುವಾದಿ ,ವಿಚ್ಛದ್ರಕಾರಿ ಶಕ್ತಿಗಳ ವಿರುದ್ಧ ಐಕ್ಯ ಹೋರಾಟ ಗಳಲ್ಲಂತೂ ಇದು ಇನ್ನಷ್ಟು ಮಹತ್ವ ಪಡೆಯುತ್ತದೆ.

ದಲಿತರು ಮತ್ತು ಆದಿವಾಸಿಗಳ ಸಂವಿಧಾನಿಕ ಹಕ್ಕುಗಳ ಪರಿಣಾಮಕಾರಿ ಜಾರಿ ಮತ್ತು ಸಾಮಾಜಿಕ ನ್ಯಾಯ ಇಡೀ ದುಡಿಯುವ ವರ್ಗದ ಬೇಡಿಕೆ.

ರಫೇಲ್ ವ್ಯವಹಾರ–ಹಗರಣದ ಸುಂಟರಗಾಳಿ



ನಂಬಲರ್ಹ ಉತ್ತರ ಕೊಡಲಾಗದ ಸರ್ಕಾರ ಗೊತ್ತು ಗುರಿ ಇಲ್ಲದ ವಿವರ ಕೊಡುತ್ತಿದೆ.ಇದು ಎರಡು ಸರ್ಕಾರಗಳ ನಡುವೆ ಏರ್ಪಟ್ಟಿರುವ ಒಪ್ಪಂದವಾಗಿರುವುದರಿಂದ, ಭ್ರಷ್ಟಾಚಾರಕ್ಕೆ ಅವಕಾಶವೇ ಇಲ್ಲ ಎಂಬ ಒಂದು ಸೋಗಿನ ಉತ್ತರವನ್ನು ಪ್ರಧಾನಿ ಕೊಟ್ಟಿದ್ದಾರೆ. ಅವರು ಹೇಳದೆ ಇರುವ ಮುಖ್ಯವಾದ ಒಂದು ಅಂಶವೆಂದರೆ, ವಿಶ್ವಾದ್ಯಂತ, ಸರ್ಕಾರಗಳು, ಭ್ರಷ್ಟಾಚಾರ ಹುಲುಸಾಗಿ ಬೆಳೆಯಲು ಗೊಬ್ಬರ ಒದಗಿಸುವ ತಿಪ್ಪೆಗುಂಡಿಗಳಾಗಿವೆ. ಅವು ಚಮಚಾ ಬಂಡವಾಳಶಾಹಿಯನ್ನು ಬೆಂಬಲಿಸುತ್ತಿವೆ.

ಅರ್ಜುನ್ ಅನು: ಕೆ.ಎಂ.ನಾಗರಾಜ್

ಭಾರತೀಯ ವಾಯುಸೇನೆಯು ತನ್ನ ಹಳೆಯ ಮತ್ತು ವಯಸ್ಸಾದ ಯುದ್ಧ ವಿಮಾನಗಳ ಸ್ಥಾನದಲ್ಲಿ ಹೊಸ ತಂತ್ರಜ್ಞಾನದ ಯುದ್ಧ ವಿಮಾನಗಳನ್ನು ಹೊಂದುವ ಉದ್ದೇಶದಿಂದ, 2012ರಲ್ಲಿ, ಫ್ರಾನ್ಸ್‌ನಲ್ಲಿ ತಯಾರಾಗುವ ರಫೇಲ್ ಜೆಟ್ ಯುದ್ಧ ವಿಮಾನವನ್ನು ಕೊಳ್ಳಲು ಆಯ್ಕೆಮಾಡಿಕೊಂಡಿತ್ತು. ಕೊಳ್ಳುವ ಪೂರ್ವ ತಯಾರಿಯಾಗಿ ಬೇರೆ ಬೇರೆ ಕಂಪೆನಿಗಳು ತಯಾರಿಸುವ ಯುದ್ಧ ವಿಮಾನಗಳ ಗುಣ ಮಟ್ಟ, ಅವುಗಳ ಸಾಮರ್ಥ್ಯ, ಬೆಲೆ ಮುಂತಾದ ಅಂಶಗಳನ್ನು ಪರಿಗಣಿಸಿ ವಿಮಾನದ ಮೌಲ್ಯಮಾಪನ ಮಾಡುವ ಉದ್ದೇಶಕ್ಕಾಗಿ ನಿರೂಪಿಸಲಾದ ಕ್ರಮವನ್ನು ಒಂದು ಮಾದರಿ ಎಂಬುದಾಗಿ ಅನೇಕರು ಅಭಿಪ್ರಾಯಪಟ್ಟಿದ್ದರು. ವಾಯು ಪಡೆ ಅನುಸರಿಸಲು ಹೊರಟ ಈ ಕ್ರಮವು “ವ್ಯವಸ್ಥಿತ ಮತ್ತು ವೈಜ್ಞಾನಿಕ” ಎಂಬುದಾಗಿ ದಶಕಗಳ ಹಿಂದೆ ವಾಯು ಸೇನೆಯ ಮುಖ್ಯಸ್ಥರಾಗಿದ್ದ ಏರ್ ಕಮೊಡೊರ್ ಜಸ್‌ಜಿತ್ ಸಿಂಗ್ ಅವರೂ ಹೇಳಿದ್ದರು. ಬಹಿರಂಗ ಹರಾಜಿನಲ್ಲಿ ಯುದ್ಧ ವಿಮಾನಗಳ ಮೌಲ್ಯಮಾಪನ ಪದ್ಧತಿಯ ಮೂಲಕ ರಫೇಲ್ ವಿಮಾನ ಆಯ್ಕೆಮಾಡಿಕೊಂಡ ವಿವರಗಳನ್ನು ತಮ್ಮೊಡನೆ ಹಂಚಿಕೊಳ್ಳುವಂತೆ ಬ್ರೆಜಿಲ್‌ನ ರಕ್ಷಣಾ ಮಂತ್ರಿ ಭಾರತದ ಅಂದಿನ ರಕ್ಷಣಾ ಮಂತ್ರಿ ಎ.ಕೆ. ಅಂಟೊನಿಯುವರನ್ನು ಕೋರಿದ್ದರು. ಭಾರತದ ರಕ್ಷಣಾ ಸಾಮಗ್ರಿಗಳನ್ನು ಕೊಳ್ಳುವ ವ್ಯವಹಾರಗಳಿಗೆ ಒಂದು ಜಾಡ್ಯದಂತೆ ಅಂಟಿಕೊಂಡಿದ್ದ ಭ್ರಷ್ಟಾಚಾರ ಕೊನೆಗೊಂಡಿದೆ ಮತ್ತು “ಬೊಫೋರ್ಸ್” ಭೂತ ಮರಳಿ ಕಾಡುವುದಿಲ್ಲ ಎಂಬುದಾಗಿ ಭಾವಿಸಲಾಗಿತ್ತು. ಆದರೆ, ಹೊಸ ಪದ್ಧತಿಯನ್ನು ಇಡಿಯಾಗಿ ನಾಶಪಡಿಸಿ, ಹಿಂದೆ ಇದ್ದದ್ದಕ್ಕಿಂತಲೂ ಹೆಚ್ಚು ಹೆಚ್ಚು ಮಬ್ಬಾಗಿ ಕತ್ತಲೆಯಲ್ಲಿ ಕೊಳ್ಳುವ ವ್ಯವಹಾರಗಳಲ್ಲಿ ತೊಡಗುವ ಹೊಸ ಸರ್ಕಾರ ಬರುತ್ತದೆ ಎಂದು ಯಾರಿಗೆ ಗೊತ್ತಿತ್ತು?

ಹೊಸ ಆಯ್ಕೆ ಪದ್ಧತಿಯ ಪ್ರಕಾರವಾಗಿ ವಿಮಾನದ ಆಯ್ಕೆ ಮಾಡಿದ ನಂತರ, 126 ರಫೇಲ್ ಜೆಟ್ ವಿಮಾನಗಳನ್ನು ಕೊಳ್ಳಲು ಡಸಾಲ್ಟ್ ಕಂಪೆನಿಯೊಂದಿಗೆ ನಡೆಯುತ್ತಿದ್ದ ಮಾತುಕತೆಗಳು ವ್ಯವಹಾರದ ಅಂತಿಮ ಹಂತ ತಲುಪಿದ್ದವು. ಆದರೆ, ಒಪ್ಪಂದಕ್ಕೆ ಸಹಿ ಬೀಳುವ ಮೊದಲೇ ಯುಪಿಎ ಸರ್ಕಾರ ಅಧಿಕಾರ ಕಳೆದುಕೊಂಡಿತು. ಅಧಿಕಾರಕ್ಕೆ ಬಂದು ಆರು ತಿಂಗಳು ತುಂಬುವ ಮುನ್ನವೇ, ಇದ್ದಕ್ಕಿದ್ದಂತೆಯೇ, ಕರೆನ್ಸಿ ನೋಟುಗಳನ್ನು ರದ್ದು ಮಾಡಿದ ರೀತಿಯಲ್ಲಿ, ಮೋದಿ ಸರ್ಕಾರವು, 126 ರಫೇಲ್ ವಿಮಾನಗಳನ್ನು ಕೊಳ್ಳಲು ಯುಪಿಎ ಸರ್ಕಾರವು 2007ರಲ್ಲಿ ಡಸಾಲ್ಟ್ ಕಂಪೆನಿಯೊಂದಿಗೆ ಆರಂಭಿಸಿದ ಮಾತುಕತೆಗಳು ಅಂತಿಮ ಹಂತದಲ್ಲಿದ್ದ ವ್ಯವಹಾರವನ್ನು ರದ್ದುಪಡಿಸಿತು. ಅದೇ ಸಮಯದಲ್ಲಿ, ಯಾವ ವಿವರಣೆ/ಕಾರಣವನ್ನೂ ಕೊಡದೆ, 36 ರಫೇಲ್ ವಿಮಾನಗಳನ್ನು ಕೊಳ್ಳಲು ಅದೇ ಕಂಪೆನಿಯೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿತು.

126 ರಫೇಲ್ ವಿಮಾನಗಳನ್ನು ಕೊಳ್ಳುವ ವ್ಯವಹಾರವನ್ನು ರದ್ದುಪಡಿಸುವ ಮುನ್ನ ಮತ್ತು ಅದೇ ಕಂಪೆನಿಯ 36 ವಿಮಾನಗಳನ್ನು ಕೊಳ್ಳುವ ಒಪ್ಪಂದಕ್ಕೆ ಸಹಿ ಹಾಕುವ ಮುನ್ನ, ಸರ್ಕಾರದ ಒಳವಲಯಗಳಲ್ಲಿ ಅಥವಾ ಸಾರ್ವಜನಿಕ ವಲಯಗಳಲ್ಲಿ ಯಾವ ಚರ್ಚೆ–ಸಂವಾದಗಳೂ ನಡೆಯಲಿಲ್ಲ. ಭ್ರಷ್ಟಾಚಾರ ಕೊನೆಗೊಳಿಸುವ ನಿಟ್ಟಿನಲ್ಲಿ ಮೌಲ್ಯಮಾಪನ ಪದ್ಧತಿಯ ಬಹಿರಂಗ ಹರಾಜಿನ ಮೂಲಕ ವಿಮಾನಗಳ ಖರೀದಿಗಾಗಿ ವರ್ಷಗಟ್ಟಲೆ ಶ್ರಮಪಟ್ಟು ನಿರೂಪಿಕೊಂಡಿದ್ದ ಕ್ರಮವನ್ನು ಮೋದಿ ಸರ್ಕಾರ ಚೂರು ಚೂರು ಮಾಡಿತು. ರಾಷ್ಟ್ರ ರಕ್ಷಣೆಗೆ ಸಂಬಂಧಿಸಿದ ಅಂಶಗಳನ್ನು, ಪ್ರಜಾಪ್ರಭುತ್ವದ ರೀತಿ ನೀತಿಗಳನ್ನು ಮತ್ತು ಶಿಷ್ಟಾಚಾರಗಳನ್ನು ಕಸದ ಬುಟ್ಟಿಗೆ ಎಸೆಯಿತು. ಇಂತಹ ವಿಮಾನಗಳ ತಯಾರಿಕೆಯ ಉನ್ನತ ತಂತ್ರಜ್ಞಾನ ಹೊಂದುವ ಕಾತುರದಲ್ಲಿತ್ತು ಭಾರತದ ವಾಯು ಪಡೆ. ತಂತ್ರಜ್ಞಾನ ವರ್ಗಾವಣೆಗೆ ಡಸಾಲ್ಟ್ ಕಂಪೆನಿಯೂ ಒಪ್ಪಿತ್ತು. ಆದರೆ, ಹೊಸ ಒಪ್ಪಂದದಲ್ಲಿ ಈ ಅವಕಾಶವನ್ನು ಕಳೆದುಕೊಳ್ಳಲಾಗಿದೆ.

36 ರಫೇಲ್ ವಿಮಾನಗಳನ್ನು ಕೊಳ್ಳುವ ವ್ಯವಹಾರವು ಭಾರತದ ವಾಯು ಪಡೆಯ ಕಾರ್ಯಾಚರಣೆಯನ್ನು ನಗೆಪಾಟಲಿಗೆ ಗುರಿಮಾಡಿದೆ. ತನ್ನ ಅಪೇಕ್ಷೆಗೆ ಅನುಗುಣವಾಗಿಲ್ಲದ 36 ವಿಮಾನಗಳನ್ನು ಕೊಂಡದ್ದರಿಂದ ನಮ್ಮ ವಾಯು ಪಡೆಗೆ ಯಾವ ಪ್ರಯೋಜನವೂ ಆಗಲಿಲ್ಲ.

ವಯಸ್ಸಾದ ರಷಿಯನ್ ನಿರ್ಮಿತ ವಿಮಾನಗಳನ್ನು ಬದಲಾಯಿಸುವ ಮುಖ್ಯ ಉದ್ದೇಶದಿಂದ ಹೊಸ ಯುದ್ಧವಿಮಾನಗಳನ್ನು ಕೊಳ್ಳುವ ಪ್ರಕ್ರಿಯೆಗೆ ಸುಮಾರು ಹತ್ತು ವರ್ಷಗಳ ಹಿಂದೆ ಚಾಲನೆ ನೀಡಲಾಗಿತ್ತು. ಭಾರತೀಯ ವಾಯು ಪಡೆಯು ಸಂಭವನೀಯ ದಾಳಿ ಗ್ರಹಿಕೆಯ ಅಂದಾಜು ಮಾಡಿದ್ದ ಅಗತ್ಯದ ಪ್ರಕಾರ, ಒಂದು ತುಕಡಿಯಲ್ಲಿ 16–18 ಯುದ್ಧವಿಮಾನಗಳಂತೆ, ವಾಯು ಸೇನೆಯು 42 ತುಕಡಿಗಳನ್ನು ಹೊಂದುವ ನಿರೀಕ್ಷೆಯಿತ್ತು. ಆದರೆ, 2019–20ರ ವೇಳೆಗೆ, ಮಿಗ್ 21 ಮತ್ತು ಮಿಗ್ 27 ಯುದ್ಧವಿಮಾನಗಳನ್ನುಳ್ಳ 14 ತುಕಡಿಗಳು ವಿರಮಿಸಿದಾಗ ವಾಯು ಪಡೆಯಲ್ಲಿ ಉಳಿಯುವ ತುಕಡಿಗಳ ಸಂಖ್ಯೆ 30ಕ್ಕಿಂತಲೂ ಕಡಿಮೆಯಾಗುತ್ತದೆ.

ರಫೇಲ್ ವಿಮಾನಗಳನ್ನು ನಿಧಾನ ಕಂತಿನಲ್ಲಿ ಸೇರಿಸಿಕೊಂಡು ರಚಿಸಿದ ಎರಡು ತುಕಡಿಗಳಿಂದ ವಾಯು ಪಡೆಯ ಕಾರ್ಯಾಚರಣೆಯ ಸಮಸ್ಯೆಗಳು ಹೇಗೆ ಬಗೆಹರಿಯುತ್ತವೆ ಎಂಬ ಪ್ರಶ್ನೆ ಪ್ರತ್ಯಕ್ಷವಾಗುತ್ತದೆ. ವಾಯು ಪಡೆಯ ಮುಂಗಾಣ್ಕೆಯ ಯೋಜನೆಯನ್ನು ಬದಲಾಯಿಸಿ ಅದರ ಕಾರ್ಯಸನ್ನದ್ಧತೆಯನ್ನು ಗಂಡಾಂತರಕ್ಕೆ ಈಡು ಮಾಡಿದ ಪ್ರಧಾನಿಯವರ ಉದ್ದೇಶವೇನು ಎಂಬ ಪ್ರಶ್ನೆಯೂ ಉದ್ಭವವಾಗುತ್ತದೆ.

ಬಹು ಪಾತ್ರ ನಿರ್ವಹಿಸುವ ಮಧ್ಯಮ ಸಾಮರ್ಥ್ಯದ ಕದನ ವಿಮಾನಗಳನ್ನು ಕೊಳ್ಳುವ ಸಂದರ್ಭದಲ್ಲಿ ಅನುಸರಿಸಬೇಕಾಗಿ ಅಂದಿನ ರಕ್ಷಣಾ ಮಂತ್ರಿ ಎ.ಕೆ. ಅಂಟೊನಿ ಸೂಚಿಸಿದ್ದ ಮೂರು ಮಾರ್ಗದರ್ಶಿ ಸೂತ್ರಗಳ ರೂಪರೇಖೆ ಹೀಗಿದ್ದವು: ಮೊದಲನೆಯದಾಗಿ, ವಿಮಾನಗಳು ನಮ್ಮ ವಾಯು ಪಡೆಯ ಕಾರ್ಯಾಚರಣೆಯ ಅಗತ್ಯಗಳಿಗೆ ಸಂಪೂರ್ಣವಾಗಿ ಅನುಗುಣವಾಗಿರಬೇಕು; ಎರಡನೆಯದಾಗಿ, ವಿಮಾನಗಳ ಆಯ್ಕೆ ಪ್ರಕ್ರಿಯೆಯು ನಾವು ಕೊಟ್ಟ ಹಣಕ್ಕೆ ಮೋಸವಾಗದಂತಹ ಸ್ಪರ್ಧಾತ್ಮಕ ಬೆಲೆ ಮತ್ತು ಪಾರದರ್ಶಕತೆಯಿಂದ ಕೂಡಿರಬೇಕು; ಮೂರನೆಯದಾಗಿ, ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುವ ಎತ್ತರಕ್ಕೆ ಬೆಳೆಯುವ ಅವಕಾಶ ಭಾರತೀಯ ರಕ್ಷಣಾ ಕೈಗಾರಿಕೆಗಳಿಗೆ ದೊರೆಯಬೇಕು. ಆದರೆ, ತರಾತುರಿಯಲ್ಲಿ ರಫೇಲ್ ವಿಮಾನಗಳನ್ನು ಕೊಳ್ಳುವ ಭರದಲ್ಲಿ, ಮೋದಿ ಸರ್ಕಾರವು ಈ ಮೂರೂ ಸೂತ್ರಗಳನ್ನು ಮಣ್ಣುಪಾಲು ಮಾಡಿದೆ.

ರಾಷ್ಟ್ರ ರಕ್ಷಣೆಯ ಹಿತದೃಷ್ಟಿಯಿಂದ ನಿರೂಪಿಸಿದ್ದ ಈ ಮೂರೂ ಮಾರ್ಗದರ್ಶಿ ಸೂತ್ರಗಳನ್ನು ಏಕೆ ನಿರ್ಲಕ್ಷಿಸಿದರು ಮೋದಿ ಎಂಬ ಪ್ರಶ್ನೆ ಏಳುತ್ತದೆ. ಅಪಾಯಕರ ವೇಗದಲ್ಲಿ ಈ ವ್ಯವಹಾರವನ್ನು ಕುದುರಿಸಿಕೊಳ್ಳುವಂತೆ ಯಾವುದಾದರೂ ಅಂತಾರಾಷ್ಟ್ರೀಯ ಒತ್ತಡಕ್ಕೆ ಅವರು ಒಳಗಾಗಿದ್ದರೇ? ಈ ಒಪ್ಪಂದಕ್ಕೆ ಸಹಿ ಹಾಕುವಂತೆ ಅವರ ಮೇಲೆ ಯಾವುದಾದರೂ ಅಂತಾರಾಷ್ಟ್ರೀಯ ಒತ್ತಡವಿತ್ತೆ?

ಸಮಾಜವಾದಿ ವ್ಯಕ್ತಿ ಎಂದು ಭಾವಿಸಲಾಗಿದ್ದ, ಫ್ರಾನ್ಸ್‌ನ ಹಿಂದಿನ ಅಧ್ಯಕ್ಷರಾಗಿದ್ದ ಫ್ರಾಂಕ್ವಾ ಹೊಲ್ಯಾಂಡ್ ಅವರನ್ನು ಹೆಚ್ಚೆಂದರೆ ಒಬ್ಬ ಕೀಳುಮಟ್ಟದ ಮಾರಾಟಗಾರ ಎಂದು ವರ್ಣಿಸಬಹುದು. ಒಂದೇ ಒಂದು ವರ್ಷದಲ್ಲಿ (2015) ಅತಿ ಹೆಚ್ಚು ರಫೇಲ್ ವಿಮಾನಗಳನ್ನು ಮಾರಾಟಮಾಡಿ, ಮುಳುಗುವ ಅಪಾಯದಲ್ಲಿದ್ದ ಡಸಾಲ್ಟ್ ಕಂಪೆನಿಯನ್ನು ತೇಲುವಂತೆ ಮಾಡಿದ ವ್ಯಕ್ತಿ ಎಂದು ಚರಿತ್ರೆ ಅವರನ್ನು ಜ್ಞಾಪಿಸಿಕೊಳ್ಳಬಹುದು. ಒಟ್ಟು 96 ರಫೇಲ್ ವಿಮಾನಗಳನ್ನು ಈ ವ್ಯಕ್ತಿ ಮಾರಾಟಮಾಡಿದರು – ಭಾರತಕ್ಕೆ 36, ಈಜಿಪ್ಟ್‌ಗೆ 24 ಮತ್ತು ಕತಾರ್‌ಗೆ 24. ವಿಮಾನಗಳ ಮಾರಾಟದಲ್ಲಿ ಇದೊಂದು ದೊಡ್ಡ ಸಾಧನೆಯೇ ಸರಿ. ಏಕೆಂದರೆ, 2015ಕ್ಕಿಂತ ಹಿಂದಿನ 24 ವರ್ಷಗಳಲ್ಲಿ ಡಸಾಲ್ಟ್ ಕಂಪೆನಿಯು ಒಂದೇ ಒಂದು ವಿಮಾನವನ್ನೂ ಯಾವ ದೇಶಕ್ಕೂ ಮಾರುವುದು ಸಾಧ್ಯವಾಗಿರಲಿಲ್ಲ.

ಹೊಲ್ಯಾಂಡ್ ಅವರ ಭರ್ಜರಿ ಮಾರಾಟಗಾರಿಕೆಯ ಕಥನದಲ್ಲಿ, ವಿಮಾನಗಳ ಮಾರಾಟ ಇದ್ದಕ್ಕಿಂತೆಯೇ ಅಷ್ಟೊಂದು ಎತ್ತರಕ್ಕೆ ಹೇಗೆ ನೆಗೆಯಿತು ಎಂಬ ಪ್ರಶ್ನೆಗೆ ಉತ್ತರವಿಲ್ಲ. ಅಷ್ಟೇ ಅಲ್ಲ, ಅಮೇರಿಕಾದ ಮಾರ್ಗದರ್ಶನದಲ್ಲಿ ಕೆಲವು ಉನ್ನತ ಸ್ಥರದ ಅಂತಾರಾಷ್ಟ್ರೀಯ ವಾಣಿಜ್ಯ ಮತ್ತು ರಾಜಕೀಯ ವ್ಯಕ್ತಗಳಿಂದ ಕೂಡಿದ ಜಾಲವು ತೆರೆ ಮರೆಯಲ್ಲಿ ಕೆಲಸಮಾಡಿ ಅವರಿಗೆ ಈ ಗುರಿ ಸಾಧಿಸಲು ನೆರವಾಯಿತು ಎಂಬುದನ್ನು ಈ ಕಥನವು ಮಬ್ಬುಗೊಳಿಸಿದೆ.

ಹೊಲ್ಯಾಂಡ್ ಒಬ್ಬ ಗಣ್ಯ ಮಾರಾಟಗಾರ ಎಂದೇ ಹೇಳಬಹುದು. ಅವರು ಫ್ರಾನ್ಸ್‌ನ ಉದ್ಯೋಗಗಳನ್ನೂ ಉಳಿಸಿದರು ಮತ್ತು ಅಮೇರಿಕಾದ ರಕ್ಷಣಾ ಕೈಗಾರಿಕೆಗೂ ನೆರವಾದರು. 2013ರಲ್ಲಿ ಫ್ರಾನ್ಸ್‌ನ ಅಧ್ಯಕ್ಷರಾಗಿ ಆಯ್ಕೆಯಾದ ನಂತರ, ಹೊಲ್ಯಾಂಡ್, ಫ್ರಾನ್ಸ್‌ನ ವಾಯುಪಡೆಯು ಮುಂದಿನ ದಿನಗಳಲ್ಲಿ ತನಗೆ 286 ಯುದ್ಧ ವಿಮಾನಗಳು ಬೇಕಾಗಬಹುದೆಂದು ಮಾಡಿದ್ದ ಅಂದಾಜನ್ನು 225 ಕ್ಕೆ ಮಿತಿಗೊಳಿಸುವಂತೆ ತನ್ನ ವಾಯು ಪಡೆಗೆ ಸೂಚಿಸಿದ್ದರು. ಅದೇ ಸಮಯದಲ್ಲಿ, ಡಸಾಲ್ಟ್ ಕಂಪೆನಿಯು ತಯಾರುಮಾಡಿ ವಾಯು ಪಡೆಗೆ ಒಪ್ಪಿಸುವ ಯುದ್ಧವಿಮಾನಗಳ ಸಂಖ್ಯೆಯನ್ನು ವರ್ಷಕ್ಕೆ 11ರಿಂದ 5ಕ್ಕೆ ಇಳಿಸುವಂತೆ ಸೂಸಿಸಿದ್ದರು. 61 (286–225) ಯುದ್ಧ ವಿಮಾನಗಳಿಂದ ಉಳಿತಾಯವಾದ ಹಣವನ್ನು ಅಮೇರಿಕಾದ ಮಾರ್ಟಿನ್ ಲಾಕ್‌ಹೀಡ್ ಕಂಪೆನಿ ತಯಾರಿಸಿದ ನಾಲ್ಕು C-130J ವಿಮಾನಗಳು ಮತ್ತು ಅಮೇರಿಕಾದ ಜನರಲ್ ಅಟಾಮಿಕ್ಸ್ ತಯಾರಿಸಿದ ಮಾನವ ರಹಿತ ಹಾರಾಟದ ನಾಲ್ಕು MQ-9 ವಿಮಾನಗಳನ್ನು ಕೊಳ್ಳಲು ಹೊಲ್ಯಾಂಡ್ ಮುಂದಾದರು. ಹಾಗಾದರೆ, ತನ್ನ ನಾಟೊ ಮೈತ್ರಿ ಕೂಟದ ಅತ್ಯಂತ ಆಕ್ರಮಣಕಾರಿ ಮಿತ್ರ ಅಮೇರಿಕಾಗೆ ಸಹಾಯ ಮಾಡಲು ಹೊಲ್ಯಾಂಡ್ ತನ್ನ ದೇಶದ ಕೈಗಾರಿಕೆಯ ಹಿತವನ್ನು ಬಲಿ ಕೊಟ್ಟರೇ? ಹೊಲ್ಯಾಂಡ್ ಒಬ್ಬ ಚಾಲಾಕಿ ವ್ಯವಹಾರ ನಿಪುಣ. ತನ್ನ ದೇಶದ ರಫೇಲ್ ವಿಮಾನಗಳನ್ನು ಅಮೇರಿಕಾದ ಮೂವರು ಆಯಕಟ್ಟಿನ ಮಿತ್ರ ದೇಶಗಳಿಗೆ – ಭಾರತ, ಈಜಿಪ್ಟ್ ಮತ್ತು ಕತಾರ್ – ಹೊಲ್ಯಾಂಡ್ ಮಾರಾಟಮಾಡಿದರು. ಸಿರಿಯಾ ಮತ್ತು ಲಿಬ್ಯಾ ದೇಶಗಳ ಮೇಲಿನ ದಾಳಿಗಳಿಗೆ ರಫೇಲ್ ವಿಮಾನಗಳ ಬಳಕೆಗೆ ಫ್ರಾನ್ಸಿನ ಅನುಮತಿ ಮತ್ತು ಈ ವಿಮಾನಗಳು ಉಂಟುಮಾಡಿದ ಭೀಕರ ಹಾನಿಯಿಂದ ಸಂತುಷ್ಟರಾದ ಅಮೇರಿಕಾ ಈ ವ್ಯವಹಾರದಲ್ಲಿ ಸಹಾಯಮಾಡಿದೆ.

ಫೆಬ್ರವರಿ 2015ರಲ್ಲಿ, ಈಜಿಪ್ಟ್ 24 ರಫೇಲ್ ವಿಮಾನಗಳನ್ನು ಕೊಳ್ಳಲು ಫ್ರಾನ್ಸಿನೊಂದಿಗೆ ಒಪ್ಪಂದ ಮಾಡಿಕೊಂಡಿತು. ಅದರಂತೆ, ಮೊದಲ ಮೂರು ವಿಮಾನಗಳನ್ನು ಜುಲೈ 2015ರಲ್ಲಿ, ಎರಡನೆಯ ಕಂತಿನ ವಿಮಾನಗಳನ್ನು ಜನವರಿ 2016ರಲ್ಲಿ ಮತ್ತು ಮೂರನೆಯ ಕಂತಿನ ವಿಮಾನಗಳನ್ನು ಈ ವರ್ಷದ(2018) ಏಪ್ರಿಲ್‌ನಲ್ಲಿ ಈಜಿಪ್ಟ್‌ಗೆ ಸರಬರಾಜು ಮಾಡಲಾಗಿದೆ. 2015ರ ಏಪ್ರಿಲ್‌ನಲ್ಲಿ, ಭಾರತಕ್ಕೆ 36 ರಫೇಲ್ ವಿಮಾನಗಳನ್ನು 9.2 ಬಿಲಿಯನ್ ಡಾಲರ್‌ಗಳಿಗೆ (58,000 ಕೋಟಿ ರೂಗಳು) ಮಾರಾಟಮಾಡುವ ಒಪ್ಪಂದಕ್ಕೆ ಹೊಲ್ಯಾಂಡ್ ಮತ್ತು ಮೋದಿ ಸಹಿ ಹಾಕಿದರು. ಅದೇ ವರ್ಷ, 24 ರಫೇಲ್ ವಿಮಾನಗಳನ್ನು ಮಾರಾಟಮಾಡುವ ಒಪ್ಪಂದಕ್ಕೆ ಕತಾರ್‌ನೊಂದಿಗೆ ಹೊಲ್ಯಾಂಡ್ ಸಹಿ ಹಾಕಿದರು. ಈಜಿಪ್ಟ್ ಕೊಂಡ 24 ವಿಮಾನಗಳ ಬೆಲೆ 5.2 ಬಿಲಿಯನ್ ಯೂರೊಗಳು. ಅಷ್ಟೇ ಸಂಖ್ಯೆಯ ವಿಮಾನಗಳಿಗೆ ಕತಾರ್ 6.3 ಬಿಲಿಯನ್ ಯೂರೊ ಕೊಟ್ಟಿದೆ. ಕತಾರ್ ಕೊಟ್ಟಿರುವ ಬೆಲೆ ತುಸು ಹೆಚ್ಚಿದೆ. ಏಕೆಂದರೆ, ಅದು ಕೊಂಡ ವಿಮಾನಗಳಲ್ಲಿ ಕೆಲವು ಮುಖ್ಯ ಬದಲಾವಣೆಗಳಿವೆ. ಈಜಿಪ್ಟ್ ಕೊಂಡ ಮೂರನೆಯ ಎರಡರಷ್ಟು ವಿಮಾನಗಳು ಎರಡು ಟ್ರೈನರ್–ಆಸನದವು. ಅವು, ಏಕ ಟ್ರೈನರ್–ಆಸನದ ವಿಮಾನಗಳಿಗಿಂತ ಕಡಿಮೆ ಬೆಲೆಯವು.

ಭಾರತ ಖರೀದಿಸಿದ ರಫೇಲ್ ವಿಮಾನ ವ್ಯವಹಾರಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಈಜಿಪ್ಟ್ ಮತ್ತು ಕತಾರ್ ದೇಶಗಳು ಕೊಂಡಿರುವ ಬೆಲೆಗೆ ಹೋಲಿಸಿದರೆ, ಭಾರತವು ಪ್ರತಿ ವಿಮಾನಕ್ಕೂ 351 ಕೋಟಿ ರೂಪಾಯಿಗಳಷ್ಟು ಹೆಚ್ಚು ಹಣ ಕೊಟ್ಟು ಖರೀದಿಸಿದೆ. ಹಾಗಾದರೆ, ಭಾರತ ಕೊಂಡಿರುವ ವಿಮಾನಗಳಲ್ಲಿ ಏನಾದರೂ ಕಾರ್ಯವಿಶೇಷ ಲಕ್ಷಣಗಳಿವೆಯೇ? ಡಸಾಲ್ಟ್ ಕಂಪೆನಿಯು ಇದ್ದಕ್ಕಿದ್ದಂತೆ ರಫೇಲ್ ವಿಮಾನಗಳ ಬೆಲೆ ಏರಿಕೆಮಾಡಿದಾಗ, ಅದು ಏನಾದರೂ ಕಾರ್ಯವಿಶೇಷಗಳನ್ನು ವಿಮಾನದಲ್ಲಿ ಅಳವಡಿಸಿದೆಯೇ?

ನಂಬಲರ್ಹ ಉತ್ತರ ಕೊಡಲಾಗದ ಸರ್ಕಾರ ಗೊತ್ತು ಗುರಿ ಇಲ್ಲದ ವಿವರ ಕೊಡುತ್ತಿದೆ. ಡಸಾಲ್ಟ್ ಕಂಪೆನಿಯ ರಫೇಲ್ ವಿಮಾನಕ್ಕೆ ಹತ್ತಿರದ ಸ್ಪರ್ಧೆ ನೀಡಿದ ಏರ್‌ಬಸ್ ಕಂಪೆನಿಯು ತನ್ನ ಯೂರೊ ಫೈಟರ್ ಯುದ್ಧ ವಿಮಾನಗಳ ಬೆಲೆಯನ್ನು ರಫೇಲ್ ಒಪ್ಪಂದದ ನಂತರ ಕಡಿಮೆ ಮಾಡಿದೆ ಎಂದು ಸರ್ಕಾರ ಹೇಳುತ್ತಿದೆ. ಆದರೆ, ಡಸಾಲ್ಟ್ ಮೊದಲು ಸೂಚಿಸಿದ್ದಕ್ಕಿಂತ ಹೆಚ್ಚಿನ ಬೆಲೆಗೆ ಭಾರತ ಒಪ್ಪಂದ ಮಾಡಿಕೊಂಡಿದೆ. ವ್ಯವಹಾರದ ಕೊನೆಯ ಹಂತದಲ್ಲಿ ನಿಜವಾದ ಬೆಲೆ ನಿರ್ಧರಿಸಲಾಗಿದೆ ಎಂದಾದರೆ, ಏರ್‌ಬಸ್ ಕಂಪೆನಿಯೊಂದಿಗೆ ಬೆಲೆಯ ಬಗ್ಗೆ ಅದೇ ರೀತಿಯ ಮಾತುಕತೆ ಏಕೆ ನಡೆಸಲಿಲ್ಲ?

ರಫೇಲ್ ವಿಮಾನ ಕೊಳ್ಳಲು ಡಸಾಲ್ಟ್ ಕಂಪೆನಿಯೊಂದಿಗೆ ಹಿಂದೆ ಮಾಡಿಕೊಂಡಿದ್ದ ಒಪ್ಪಂದದಿಂದ ಹಿಂದೆ ಸರಿದಿತೆಂದು ಹೇಳಲಾದ ಒಂದು ಕಾರಣ ಹೀಗಿದೆ: ಅದು ವಿಮಾನದ ಕಾರ್ಯಕ್ಷಮತೆ ಮತ್ತು ರಿಪೇರಿಗಳ ಬಗ್ಗೆ ಗ್ಯಾರಂಟಿ ಕೊಡಲು ಒಪ್ಪಿರಲಿಲ್ಲ. ಹಾಗಿದ್ದರೆ, ಆ ಕಂಪೆನಿಯೊಂದಿಗಿನ ಇಡೀ ವ್ಯವಹಾರವನ್ನು ಸರ್ಕಾರ ರದ್ದು ಮಾಡಲಿಲ್ಲ, ಏಕೆ? ಬೆಲೆಯ ಬಗ್ಗೆ ಕೊಟ್ಟ ಮಾತಿನಿಂದ ಹಿಂದೆ ಸರಿದ ಮೇಲೂ, ಹೆಚ್ಚಿನ ಬೆಲೆಯಲ್ಲಿ ಅದೇ ಕಂಪೆನಿಯಿಂದ 36 ವಿಮಾನಗಳನ್ನು ಕೊಳ್ಳುವ ಹಂಗು ಏನಿತ್ತು?

ವಿಮಾನದ ನಿಖರ ಬೆಲೆಯನ್ನು ಮುಚ್ಚಿಟ್ಟಿರುವ ಸರ್ಕಾರವು ಪ್ರಜಾಪ್ರಭುತ್ವಕ್ಕೆ ಅಪಚಾರಮಾಡಿದೆ. ರಾಷ್ಟ್ರರಕ್ಷಣೆಯ ಮುಸುಕಿನಲ್ಲಿ ಸತ್ಯ ಹೊರಬರುವುದನ್ನು ತಡೆಯಲಾಗದು. ಇದು ಎರಡು ಸರ್ಕಾರಗಳ ನಡುವೆ ಏರ್ಪಟ್ಟಿರುವ ಒಪ್ಪಂದವಾಗಿರುವುದರಿಂದ, ಭ್ರಷ್ಟಾಚಾರಕ್ಕೆ ಅವಕಾಶವೇ ಇಲ್ಲ ಎಂಬ ಒಂದು ಸೋಗಿನ ಉತ್ತರವನ್ನು ಪ್ರಧಾನಿ ಕೊಟ್ಟಿದ್ದಾರೆ. ಅವರು ಹೇಳದೆ ಇರುವ ಮುಖ್ಯವಾದ ಒಂದು ಅಂಶವೆಂದರೆ, ವಿಶ್ವಾದ್ಯಂತ, ಸರ್ಕಾರಗಳು, ಭ್ರಷ್ಟಾಚಾರ ಹುಲುಸಾಗಿ ಬೆಳೆಯಲು ಗೊಬ್ಬರ ಒದಗಿಸುವ ತಿಪ್ಪೆಗುಂಡಿಗಳಾಗಿವೆ. ಅವು ಬಾಲಬಡುಕ ಬಂಡವಾಳಶಾಹಿಯನ್ನು ಬೆಂಬಲಿಸುತ್ತಿವೆ. ರಫೇಲ್ ಒಪ್ಪಂದದ ಅತಿ ದೊಡ್ಡ ಫಲಾನುಭವಿ, ವೈಮಾನಿಕ ಕ್ಷೇತ್ರದ ಗಾಳಿ ಗಂಧವಿಲ್ಲದ, ಅನುಭವವಿಲ್ಲದ ಅನಿಲ್ ಅಂಬಾನಿ ಅವರ ನೇತೃತ್ವದ ರಿಲೈಯನ್ಸ್ ಡಿಫೆನ್ಸ್ ಎಂಬ ಅಂಶವನ್ನು ಅಲ್ಲಗಳೆಯಲು ಸಾಧ್ಯವೇ? ರಾಷ್ಟ್ರ ಭದ್ರತೆಗೆ ಉಂಟಾಗುವ ಹಾನಿಯನ್ನು ಲೆಕ್ಕಿಸದೆ, ಸಾಲದಲ್ಲಿ ಮುಳುಗಿರುವ ಒಬ್ಬ ಬಂಡವಾಳಗಾರನನ್ನು ಭಂಡತನದಿಂದ ಬೆಂಬಲಿಸುವ ಮೂಲಕ ಮೋದಿಯವರು ಶಿಷ್ಟಾಚಾರವನ್ನು ಚಿತ್ರಹಿಂಸೆಗೆ ಒಳಪಡಿಸಿದ್ದಾರೆ.

"ಅಲ್ವರ್ ಲಿಂಚಿಂಗ್–ಕೈಗೊಂಡ ಕ್ರಮಗಳೇನು ತಿಳಿಸಿ"

ರಾಜಸ್ಥಾನ ಬಿಜೆಪಿ ಸರಕಾರಕ್ಕೆ ಸುಪ್ರಿಂ ಕೋರ್ಟ್ ನಿರ್ದೇಶನ

ಕಳೆದ ತಿಂಗಳು ಜುಲೈ 17ರಂದು ದೇಶದ ಸರ್ವೋಚ್ಚ ನ್ಯಾಯಾಲಯ ಬೀದಿಯಲ್ಲಿ ಜನಜಂಗುಳಿ ಸಾಯಬಡಿಯುವ(ಲಿಂಚಿಂಗ್)ಕೃತ್ಯಗಳು ಭೀಕರ ಕೃತ್ಯಗಳು ಎಂದು ಕಂಡಿಸುತ್ತ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು ತಡೆ, ಶಿಕ್ಷೆ ಮತ್ತು ಸರಿಪಡಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ನಿರ್ದೇಶಿಸಿತ್ತು. ಆದರೆ ಮೂರೇ ದಿನಗಳ ನಂತರ ರಾಜಸ್ಥಾನದ ರಾಮಗಡ್ ಪ್ರದೇಶದಲ್ಲಿ ಜನಜಂಗುಳಿಯೊಂದು 28 ವರ್ಷದ ರಕ್ಬರ್ ಖಾನ್ ಎಂಬಾತನನ್ನು ಜಾನುವಾರು ಕಳ್ಳಸಾಗಾಣಿಕೆದಾರ ಎಂದು ಬಡಿದು ಸಾಯಿಸಿತು.ಪೊಲೀಸರು ಆತನನ್ನು ಕೂಡಲೇ ಆಸ್ಪತ್ರೆಗೆ ಸಪಿರಿಸುವ ಬದಲು ಪೋಲೀಸ್ ಠಾಣೆಗೆ ಕರೆದೊಯ್ದುರು ಎನ್ನಲಾಗಿದೆ. ಆತನ ಸಾವಿಗೆ ಜನಜಂಗುಳಿಯ ಬಡಿತಗಳು ಮಾತ್ರವಲ್ಲ, ಆಸ್ಪತ್ರೆಗೆ ಸೇರಿಸುವಲ್ಲಿ ವಿಳಂಬವೂ ಕಾರಣವಾಗಿರಬಹುದು ಎಂದು ಶಂಕಿಸಲಾಗಿದೆ. ಅಷ್ಟೇ ಅಲ್ಲ, ಆಸ್ಪತ್ರೆಗೆ ಸೇರಿಸುವ ಮೊದಲು ಪೋಲೀಸ್ ಕಸ್ಟಡಿಯಲ್ಲಿ ಆತನ ಮೇಲೆ ಹಲ್ಲೆ ನಡೆಸಿರುವುದೂ ಕಾರಣವಾಗಿರಬಹುದು ಎಂದು ಶಂಕಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಪ್ರಖ್ಯಾತ ಮಾನವ ಹಕ್ಕು ಹೋರಾಟಗಾರರಾದ ತುಷಾರ್ ಗಾಂಧಿ ಮತ್ತು ತೆಹ್ಸೀನ್ ಪೂನಾವಾಲಾ ಸುಪ್ರಿಂ ಕೋರ್ಟಿನಲ್ಲಿ ನ್ಯಾಯಾಲಯದ ನಿಂದನೆಯ ಅರ್ಜಿ ಸಲ್ಲಿಸಿದ್ದರು.

ಇದನ್ನು ವಿಚಾರಣೆಗೆ ಎತ್ತಿಕೊಂಡಿರುವ ಮುಖ್ಯ ನ್ಯಾಯಾಧೀಶರ ನೇತೃತ್ವದ ನ್ಯಾಯಪೀಠ ಈ ಲಿಂಚಿಂಗ್ ಕೇಸಿನಲ್ಲಿ ರಾಜಸ್ಥಾನ ಸರಕಾರ ಏನು ಕ್ರಮ ಕೈಗೊಂಡಿದೆ ಎಂದು ಅಫಿಡವಿಟ್ ಸಲ್ಲಿಸಬೇಕು ಎಂದು ಆಗಸ್ಟ್ 20ರಂದು ಆ ರಾಜ್ಯದ ಮುಖ್ಯ ಕಾರ್ಯದರ್ಶಿ ಮತ್ತು ಗೃಹ ಇಲಾಖೆಗೆ ನಿರ್ದೇಶನ ನೀಡಿದೆ.

ಮಹಾರಾಷ್ಟ್ರ: ಭಯೋತ್ಪಾದನಾ ಆರೋಪಿಯ ಬೆಂಬಲಕ್ಕೆ 'ಗೋರಕ್ಷಕರು'!

ಜಮ್ಮು ಮತ್ತು ಕಾಶ್ಮೀರದಲ್ಲಿ ಅತ್ಯಾಚಾರ ಆರೋಪಿಯ ಬೆಂಬಲಕ್ಕೆ ನಿಂತಂತೆ ಮಹಾರಾಷ್ಟ್ರದಲ್ಲಿ ಹಿಂದುತ್ವ ಮಂದಿ ಭಯೋತ್ಪಾದನಾ ಆರೋಪಿಯ ಬೆಂಬಲಕ್ಕೆ ಇಳಿದಿದ್ದಾರೆ ಎಂದು ವರದಿಯಾಗಿದೆ.

ಕಳೆದ ಸಂಚಿಕೆಯಲ್ಲಿ ಈ ಕಾಲಂ ನಲ್ಲಿ ವರದಿಯಾಗಿರುವಂತೆ ಮಹಾರಾಷ್ಟ್ರದ ರಾಜಧಾನಿ ಮುಂಬೈಯ ಒಂದು ಉಪನಗರವಾದ ನಲಾಸೊಪಾರಾದಲ್ಲಿ ಮಹಾರಾಷ್ಟ್ರ ಪೊಲೀಸ್‌ನ ಭಯೋತ್ಪಾದನಾ ನಿಗ್ರಹ ದಳ(ಎಟಿಎಸ್) ಆಗಸ್ಟ್ 10ರಂದು ವೈಭವ್ ರಾವುತ್ ಮತ್ತು ಔರಂಗಾಬಾದ್ ಮತ್ತು ಸತಾರಾದ ಮತ್ತಿಬ್ಬರೊಂದಿಗೆ ಭಯೋತ್ಪಾದನೆಯ ಸಂಘಟಕರು ಎಂದು ಬಂಧಿಸಿತ್ತು.

ಇದನ್ನು ವಿರೋಧಿಸಿ ನಲಾಸೊಪಾರಾದ 'ಗೋರಕ್ಷಕ'ರೆಂದು ಹೇಳಿಕೊಳ್ಳುವ ಒಂದು ಗುಂಪು ಆಗಸ್ಟ್ 18ರಂದು ಪ್ರತಿಭಟನೆ ನಡೆಸಿತು ಎಂದು ವರದಿಯಾಗಿದೆ.

ಮುಖ್ಯವಾಗಿ ಮುಂಬೈ ಮತ್ತಿತರ ಮಹಾರಾಷ್ಟ್ರದ ನಗರಗಳಲ್ಲಿ ಮರಾಠಾ ಮೀಸಲಾತಿ ಚಳುವಳಿ ಮತ್ತು ಮುಂಬರುವ ಹಬ್ಬಗಳ ಸಂದರ್ಭದಲ್ಲಿ ಭಯೋತ್ಪಾದನೆ ನಡೆಸುವ ಸಂಚಿನ ಆರೋಪದಲ್ಲಿ ಇವರನ್ನು ಎಟಿಎಸ್‌ನವರು ಬಂಧಿಸಿದ್ದರು. ಕರ್ನಾಟಕದಲ್ಲಿ ಗೌರಿ ಲಂಕೇಶ್ ಕೊಲೆಯ ತನಿಖೆಗಳಲ್ಲಿ ಕರ್ನಾಟಕದ ಎಸ್‌ಐಟಿ ಕಲೆ ಹಾಕಿದ ಮಾಹಿತಿಗಳು ಮತ್ತು ಹೈಕೋರ್ಟ್ ಉಸ್ತುವಾರಿಯಲ್ಲಿ ಸಿಬಿಐ ತನಿಖೆಗಳಿಂದ ಮಹಾರಾಷ್ಟ್ರದಲ್ಲಿ ನರೇಂದ್ರ ದಬೋಲ್ಕರ್ ಮತ್ತು ಗೋವಿಂದ ಪನ್ಸರೆ ಹಾಗೂ ಕರ್ನಾಟಕದಲ್ಲಿ ಎಂ ಎಂ ಕಲ್ಬುರ್ಗಿ ಹಾಗೂ ಗೌರಿ ಲಂಕೇಶ್ ಕೊಲೆಗಳ ಸಂಚಿನ ಸುಳಿವೂ ಇವಕ್ಕೆ ಸಂಬಂಧಪಟ್ಟ ಬಂಧನಗಳಿಂದ ಸಿಕ್ಕಿದೆ ಎನ್ನಲಾಗಿದೆ.

ಈ ಕೊಲೆಗಳಲ್ಲಿ ಮುಖ್ಯ ಪಾತ್ರವಿದೆಯೆನ್ನಲಾದ ಗೋವಾದ 'ಸನಾತನ್ ಸಂಸ್ಥಾ'ದ ಕಾರ್ಯಕರ್ತ ಈ ವೈಭವ್ ರಾವುತ್. ಆತ 2014ರಿಂದ, ಅಂದರೆ ಕೇಂದ್ರದಲ್ಲಿ ಬಿಜೆಪಿ ಸರಕಾರ ಬಂದ ಮೇಲೆ ನಲಾಸೊಪಾರದಲ್ಲಿ 'ಹಿಂದು ಗೋವಂಶ ರಕ್ಷಾ ಸಮಿತಿ' ಎಂಬ ಸಂಘಟನೆಯನ್ನು ಕಟ್ಟಿಕೊಂಡು ಚಟುವಟಿಕೆಗಳನ್ನು ನಡೆಸುತ್ತಿದ್ದಾನೆ. ಗೋವಿನ ರಕ್ಷಣೆಗೆ ನಿಂತಿರುವ ಒಬ್ಬ ವ್ಯಕ್ತಿ ಭಯೋತ್ಪಾದನಾ ಚಟುವಟಿಕೆಗಳನ್ನು ನಡೆಸಲು ಸಾಧ್ಯವಿಲ್ಲ ಎಂಬುದು ಆತನ ಬೆಂಬಲಿಗರ ತರ್ಕ. ಈ ಪ್ರತಿಭಟನಾಕಾರರಲ್ಲಿ ಹೆಚ್ಚಿನವರು ಸುತ್ತಲಿನ ದಹಾಣು, ಥಾಣೆ, ವಾಡ ಮತ್ತು ರಾಯಗಡ್ ಜಿಲ್ಲೆಯ ಆತನ ಭಂಡಾರಿ ಜಾತಿಯ ಜನಗಳು ಎನ್ನಲಾಗಿದೆ.

ಬಿಹಾರ: ಸಮಾಜ ಕಲ್ಯಾಣ ಮಂತ್ರಿಗಳ ರಾಜೀನಾಮೆ –ಸಿಬಿಐ ದಾಳಿ, ಶಸ್ತ್ರಾಸ್ತ್ರ ಕಾಯ್ದೆ ಅಡಿಯಲ್ಲಿ ಎಫ್‌ಐಆರ್

ಮುಝಫ್ಫರ್‌ಪುರ ಬಾಲಿಕಾ ಗೃಹದಲ್ಲಿ ಆಶ್ರಯ ಪಡೆದಿದ್ದ 34 ಹೆಣ್ಣುಮಕ್ಕಳ ಮೇಲೆ ಲೈಂಗಿಕ ಅತ್ಯಾಚಾರಗಳನ್ನು ನಡೆಸಿದ ಪ್ರಕರಣದಲ್ಲಿ ಕೊನೆಗೂ ರಾಜೀನಾಮೆ ನೀಡಬೇಕಾಗಿ ಬಂದಿರುವ ಬಿಹಾರದ ಸಮಾಜ ಕಲ್ಯಾಣ ಮಂತ್ರಿ ಮಂಜು ವರ್ಮ ಮತ್ತು ಆಕೆಯ ಪತಿಯ ಮೇಲೆ ಈಗ ಶಸ್ತ್ರಾಸ್ತ್ರ ಕಾಯ್ದೆಯ ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ವರದಿಯಾಗಿದೆ. ಭಾರೀ ಪ್ರತಿಭಟನೆಗಳ ನಂತರ ಹೈಕೋರ್ಟ್ ಉಸ್ತುವಾರಿಯಲ್ಲಿ ಈ ಪ್ರಕರಣದ ಸಿಬಿಐ ತನಿಖೆ ನಡೆಯುತ್ತಿದೆ.

ಇದರ ಭಾಗವಾಗಿ ಸಿಬಿಐ ಮಂತ್ರಿಗಳ ಪತಿಯ ಸಂಬಂಧಿಕರ ಮನೆಯ ಮೇಲೆ ನಡೆಸಿದ ದಾಳಿಯಲ್ಲಿ 50 ಕಾರ್ಟ್ರಿಜ್‌ಗಳು ಪತ್ತೆಯಾದ ಹಿನ್ನೆಲೆಯಲ್ಲಿ ಈ ಎಫ್‌ಐಆರ್ ದಾಖಲಿಸಲಾಗಿದೆ.

ಪಾಟ್ನಾ ಮತ್ತು ಮುಝಫ್ಫರ್‌ಪುರದಲ್ಲಿನ ಮಂತ್ರಿಗಳ ನಿವಾಸದ ಮೇಲೆ ಮತ್ತು ಇತರ 10 ಸ್ಥಳಗಳಲ್ಲಿ ದಾಳಿ ನಡೆಸಿ ಸಿಬಿಐ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹಲವಾರು ದಸ್ತಾವೇಜುಗಳನ್ನು, ಫೋಟೋ ಅಲ್ಬಂಗಳನ್ನು, ಬ್ಯಾಂಕ್ ಪಾಸ್‌ಬುಕ್‌ಗಳನ್ನು ವಶಪಡಿಸಿಕೊಂಡಿದೆ ಎನ್ನಲಾಗಿದೆ.

ಈ ಮಾಜಿ ಮಂತ್ರಿಗಳ ಪತಿ ಈ ಕಾಂಡದ ಮುಖ್ಯ ಆರೋಪಿಯಾದ ಬ್ರಜೇಶ್ ಠಾಕುರ್‌ನೊಂದಿಗೆ ಶಾಮೀಲಾಗಿರುವ ಬಲವಾದ ಗುಮಾನಿಯಿದೆ. ಈಗ ಆತ ಕಾಣೆಯಾಗಿದ್ದಾರೆ. ಸಿಬಿಐ ಈ ಮಾಜಿಮಂತ್ರಿಗಳ ಕಾರ್ಯದರ್ಶಿಯಾಗಿದ್ದ ಅಮರೇಶ್ ಕುಮಾರ್ ಮತ್ತು ಆತನ ಪತ್ನಿ ಪೂನಂ ಕುಮಾರಿಯವರನ್ನು ಬಂಧಿಸಿದೆ. ಈಕೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ಉಪನಿರ್ದೇಶಕರಾಗಿದ್ದು ಇದರಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪ ಇದೆ.

ಈ ಪ್ರಕರಣ ಬಯಲಿಗೆ ಬಂದ ನಂತರ ಬಹಳ ದಿನಗಳ ವರೆಗೆ ಬಿಹಾರ ಮುಖ್ಯಮಂತ್ರಿಗಳು ತಮ್ಮ ಸಮಾಜ ಕಲ್ಯಾಣ ಮಂತ್ರಿಗಳು ಅಪರಾಧಿಯೆನ್ನಲು ಸಾಧ್ಯವಿಲ್ಲ ಎನ್ನುತ್ತ ಆಕೆಯ ರಾಜೀನಾಮೆಯ ಆಗ್ರಹವನ್ನು ತಳ್ಳಿ ಹಾಕುತ್ತ ಬಂದರು. ಈಕೆ ಜೆಡಿ(ಯು) ಪಕ್ಷದವರಾಗಿದ್ದರೂ ರಾಜ್ಯ ಉಪಮುಖ್ಯಮಂತ್ರಿಯಾಗಿರುವ ಬಿಜೆಪಿ ಮುಖಂಡ ಕೂಡ ಇವರ ಬೆಂಬಲಕ್ಕೆ ನಿಂತರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಮುಖ್ಯ ಆರೋಪಿ ಬ್ರಜೇಶ್ ಠಾಕುರ್‌ಗೆ ಜೈಲಿನಲ್ಲಿ ವಿವಿಧ ಕಾಯಿಲೆಗಳ ನೆಪದಲ್ಲಿ ರಾಜಾತಿಥ್ಯ ಸಿಗುತ್ತಿದೆಯಂತೆ.

ರಾಜ್ಯಗಳ ಸುತ್ತ

ಉತ್ತರಪ್ರದೇಶ ಮುಖ್ಯಮಂತ್ರಿಗಳನ್ನು ವಿಚಾರಣೆಗೆ ಒಳಪಡಿಸಬಾರದೇಕೆ? –ಸುಪ್ರಿಂ ಕೋರ್ಟ್ ಪ್ರಶ್ನೆ

ಆಗಸ್ಟ್ 20ರಂದು ಸುಪ್ರಿಂ ಕೋರ್ಟ್ ಉತ್ತರಪ್ರದೇಶ ಸರಕಾರಕ್ಕೆ ಒಂದು ನೋಟೀಸು ಜಾರಿ ಮಾಡಿದೆ. ಅದರಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್‌ರನ್ನು 2007ರಲ್ಲಿ ಗೋರಖಪುರದಲ್ಲಿ ದ್ವೇಷ ಭಾಷಣ ಮಾಡಿದ ಕೇಸಿನಲ್ಲಿ ವಿಚಾರಣೆಗೆ ಗುರಿಪಡಿಸಬಾರದೇಕೆ ಎಂದು ಈ ನೋಟೀಸಿನಲ್ಲಿ ಕೇಳಲಾಗಿದೆ ಎಂದು ವರದಿಯಾಗಿದೆ.

ಅಲಹಾಬಾದ್ ಹೈಕೋರ್ಟಿನ ವಕೀಲರಾದ ಅಸದ್ ಹಯಾತ್ ಮತ್ತು ಪತ್ರಕರ್ತ ಪರ್ವೇಝ್ ಪರ್ವಾಝ್ ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸುತ್ತಿರುವ ಮುಖ್ಯ ನ್ಯಾಯಾಧೀಶರ ನೇತೃತ್ವದ ಮೂವರು ನ್ಯಾಯಾಧೀಶರ ಪೀಠ ಈ ನೋಟಿಸಿಗೆ ನಾಲ್ಕು ವಾರಗಳೊಳಗೆ ಉತ್ತರ ಸಲ್ಲಿಸಬೇಕು ಎಂದು ಹೇಳಿದೆ.

ಜನವರಿ 27, 2007 ರಂದು ಮೊಹರ್ರಂ ಮೆರವಣಿಗೆ ಸಂದರ್ಭದಲ್ಲಿ ಹಿಂದು ಮತ್ತು ಮುಸ್ಲಿಂ ಸಮುದಾಯಗಳ ನಡುವೆ ಘರ್ಷಣೆ ನಡೆಯಿತು. ನಂತರ ರಾಜಕುಮಾರ್ ಅಗ್ರಹಾರಿ ಎಂಬ ವ್ಯಕ್ತಿಯ ಸಾವು ಆಗಿತ್ತು. ಆ ಘರ್ಷಣೆಯ ಸಂದರ್ಭದಲ್ಲಿ ಆಗ ಗೋರಖ್‌ಪುರ ಕ್ಷೇತ್ರದ ಲೋಕಸಭಾ ಸದಸ್ಯರಾಗಿದ್ದ ಯೋಗಿ ಆದಿತ್ಯನಾಥ ಮಾಡಿದ ದ್ವೇಷ ಭಾಷಣ ದ್ವೇಷ ಭಾವನೆಯನ್ನು ಪ್ರಚೋದಿಸಿ ಹಿಂಸಾಚಾರಕ್ಕೆ ಕಾರಣವಾಯಿತು ಎನ್ನಲಾಗಿದೆ.

ಈ ಸಾವಿನ ನಂತರ ನಗರದಲ್ಲಿ ಕರ್ಫ್ಯೂ ವಿಧಿಸಲಾಯಿತು. ಆದರೂ ಯೋಗಿಯವರು ಗೋರಖ್‌ಪುರ ರೈಲ್ವೆ ನಿಲ್ದಾಣದ ಎದುರಲ್ಲಿ ಸೆಕ್ಷನ್ 144 ಉಲ್ಲಂಘಿಸಿ ಮುಸ್ಲಿಮರ ವಿರುದ್ಧ 'ಹಗೆ ತೀರಿಸಿಕೊಳ್ಳಬೇಕು' ಎಂದು ಭಾಷಣ ಮಾಡಿದರು. ಇದರ ನಂತರ ಗೋರಖ್‌ಪುರ ಅತ್ಯಂತ ಭೀಕರ ಕೋಮು ಗಲಭೆಗಳನ್ನು ಕಂಡಿತು. ಇಬ್ಬರು ಮುಸ್ಲಿಂ ಯುವಕರಲ್ಲದೆ, ಮಸೀದಿಗಳು, ಮನೆಗಳು, ಬಸ್‌ಗಳು, ರೈಲು ಬೆಂಕಿಗಾಹುತಿಯಾದವು.

ಆದಿತ್ಯನಾಥ್ ಮೇಲೆ ಎರಡು ಗುಂಪುಗಳ ನಡುವೆ ವೈರತ್ವ ಬೆಳೆಸಿದರೆಂಬ ಎಫ್‌ಐಆರ್ ಹಾಕಲಾಯಿತು. ಬಂಧನವಾಗಿ 11 ದಿನ ಪೋಲೀಸ್ ಕಸ್ಟಡಿಯಲ್ಲೂ ಇದ್ದರು.

ಮೇಲೆ ಹೇಳಿದ ಇಬ್ಬರು ಈ ಕುರಿತು ಗಲಭೆ ಮತ್ತು ಕೊಲೆಯ ಸೆಕ್ಷನ್‌ಗಳ ಅಡಿಯಲ್ಲಿ ತನಿಖೆ ನಡೆಸಬೇಕು ಎಂದು ಅಲಹಾಬಾದ್ ಹೈಕೋರ್ಟಿನಲ್ಲಿ ಅರ್ಜಿ ಸಲ್ಲಿಸಿದರು.

ತಾನು ಈ ದ್ವೇಷಭಾಷಣ ಮಾಡಿದ್ದಾಗಿ ಅವರೇ ಒಂದು ಟಿಲಿವಿಶನ್ ಶೋನಲ್ಲಿ ಹೆಮ್ಮೆಯಿಂದ ಹೇಳಿಕೊಂಡಿರುವುದು ದಾಖಲಾಗಿದೆ. ಆದರೂ ಈ ಬಗ್ಗೆ ಅಲಹಾಬಾದ್ ಹೈಕೋರ್ಟಿನಲ್ಲಿ ಮೇಲೆ ಹೇಳಿದ ಇಬ್ಬರ ಅರ್ಜಿಯ ತನಿಖೆಯಲ್ಲಿ ಇದನ್ನು ಸಾಕ್ಷಿಯಾಗಿ ಪ್ರಸ್ತುತಪಡಿಸಲಿಲ್ಲ. ಇದನ್ನು ಉಪೇಕ್ಷಿಸಿದ ಅಲಹಾಬಾದ್ ಹೈಕೋರ್ಟ್ ಕಳೆದ ಫೆಬ್ರುವರಿಯಲ್ಲಿ ಈ ಮೊಕದ್ದಮೆಯನ್ನು ವಜಾ ಮಾಡಿತು.

ಆದ್ದರಿಂದ ಈಗ ಇದನ್ನು ಪ್ರಶ್ನಿಸಿ ಈ ಇಬ್ಬರು ಸುಪ್ರಿಂ ಕೋರ್ಟಿನಲ್ಲಿ ಅರ್ಜಿ ಹಾಕಿದ್ದಾರೆ.

ಹರ್ಯಾಣ ಸಿಪಿಐ(ಎಂ) ಕೇಂದ್ರದ ಮತ್ತು ರಾಜ್ಯದ ಬಿಜೆಪಿ ಸರಕಾರಗಳ ಜನ–ವಿರೋಧಿ ಧೋರಣೆಗಳನ್ನು ಬಯಲಿಗೆಳೆದು ಎಡಪಕ್ಷಗಳ ಧೋರಣೆಗಳನ್ನು ಒಂದು ಪರ್ಯಾಯವಾಗಿ ಮುಂದಿಡುವ ಸಂದೇಶ ಯಾತ್ರೆಯನ್ನು ರಾಜ್ಯಾದ್ಯಂತ ನಡೆಸುತ್ತಿದೆ. ಇದರಲ್ಲಿ ರಾಜ್ಯ ಮುಖಂಡರೊಂದಿಗೆ ಪೊಲಿಟ್‌ಬ್ಯುರೊ ಸದಸ್ಯರಾದ ನೀಲೋತ್ಪಲ ಬಸು ಅವರು ಭಾಗವಹಿಸುತ್ತಿದ್ದಾರೆ.



ಪ್ರಧಾನ ಮಂತ್ರಿ ಬೆಳೆ ವಿಮಾ ಯೋಜನೆ ರೈತರ ಬಗ್ಗೆ ತಮ್ಮ ಕಾಳಜಿಯನ್ನು ಬಿಂಬಿಸುತ್ತದೆ ಎಂದು ಪ್ರಧಾನಿಗಳು ಹೇಳುತ್ತಿದ್ದಾರೆ. ಆದರೆ ರಾಜಸ್ಥಾನದ ಹನುಮಾನ್‌ಗಡ ಜಿಲ್ಲೆಯ ರಾಮಗಢ್ ಬ್ಲಾಕ್‌ನಲ್ಲಿ ಇದರ ಅಡಿಯಲ್ಲಿ ಪರಿಹಾರಕ್ಕಾಗಿ ಹೋರಾಟಕ್ಕೆ ಇಳಿಯಬೇಕಾಗಿ ಬಂದಿದೆ. ಆಗಸ್ಟ್ 20ರಂದು ನೂರಾರು ರೈತರು ಗಂಗಾನಗರ–ದಿಲ್ಲಿ ಹೆದ್ದಾರಿಯಲ್ಲಿ ರಾಸ್ತಾ–ರೋಕೋ ನಡೆಸಿದರು. ಇವರು ಜೂನ್ 26ರಿಂದ ಈ ಹೋರಾಟ ನಡೆಸುತ್ತಿದ್ದಾರೆ. ತಾವು ಪ್ರೀಮಿಯಂ ಹಣವನ್ನು ಸರಿಯಾಗಿ ಕಟ್ಟುತ್ತಿದ್ದರೂ, ತಮ್ಮ ಬೆಳೆನಷ್ಟಗಳಿಗೆ ಪರಿಹಾರ ಕೊಡುತ್ತಿಲ್ಲ ಎಂದು ಪ್ರತಿಭಟನೆ ನಡೆಸಿದಾಗ ಜುಲೈ 26 ರೊಳಗೆ ಇತ್ಯರ್ಥ ಮಾಡುವುದಾಗಿ ಭರವಸೆ ನೀಡಿದ ಆಡಳಿತ ಅದನ್ನು ಈಡೇರಿಸದಿದ್ದಾಗ ಈ ರೈತರು ಮತ್ತೆ ಹೋರಾಟಕ್ಕಿಳಿದಿದ್ದಾರೆ.



ಇಸ್ರೇಲ್ : ಯಹೂದಿ ರಾಷ್ಟ್ರ-ಪ್ರಭುತ್ವ ಕಾನೂನು ವಿರುದ್ಧ ಪ್ರತಿಭಟನೆ



ನಾಗರಾಜ ನಂಜುಂಡಯ್ಯ

ಸುಮಾರು 30 ಸಾವಿರಕ್ಕೂ ಹೆಚ್ಚು ಜನರು, ಹಲವರು ಇಸ್ರೇಲಿನ ಯಹೂದಿಗಳು ಹಾಗೂ ಇಸ್ರೇಲ್ ನಲ್ಲಿ ಈಗಾಗಲೇ ವಾಸಿಸುತ್ತಿರುವ ಪ್ಯಾಲೇಸ್ಟಿನಿಯನ್ ಅರಬ್ಬೀ ಪ್ರಜೆಗಳು ಒಗ್ಗೂಡಿ ಈ ಪ್ರತಿಭಟನೆಯನ್ನು ನಡೆಸಿದ್ದಾರೆ. ಅಮೇರಿಕದ ಅಣತಿಯಂತೆ ಆಡಳಿತ ನಡೆಸುತ್ತಿರುವ ಅದರ ಕೈಗೊಂಬೆ ಬಲಪಂಥೀಯ ಪ್ರಧಾನಿ ಬೆಂಜಮಿನ್ ನೇತನ್ಯಾಹು ಸರಕಾರವು ಈ ಕಾನೂನನ್ನು ತನ್ನ ಸಂಸತ್ತಿನಲ್ಲಿ ಅನುಮೋದನೆ ಮಾಡಿದೆ. ಇಸ್ರೇಲ್ ರಾಷ್ಟ್ರದಲ್ಲಿ ಯಹೂದಿ ಪಾತ್ರವನ್ನು ಮಾತ್ರ ದೃಢಿಕರಿಸುವ ಈ ಕಾನೂನಿನ ವಿರುದ್ಧ ವ್ಯಾಪಕವಾದ ಬೃಹತ್ ಪ್ರತಿಭಟನೆಗಳು ಇಸ್ರೇಲಿನ ಇತರೆ ಪ್ರದೇಶಗೂ ಹಬ್ಬಿ, ಆ ಮೂಲಕ "ಯಹೂದಿ ರಾಷ್ಟ್ರ-ಪ್ರಭುತ್ವ ಕಾನೂನನ್ನು ರದ್ದುಗೊಳಿಸಬೇಕೆಂದ" ಆಗ್ರಹಿಸಿದ್ದಾರೆ. ಆದರೆ ನೇತನ್ಯಾಹು ಸರಕಾರ ಇದಾವುದಕ್ಕೂ ಸೊಪ್ಪು ಹಾಕುತ್ತಿಲ್ಲ. ಬದಲಿಗೆ ತನ್ನ ಕಾನೂನನ್ನು ಸಮರ್ಥನೆ ಮಾಡಿಕೊಳ್ಳಲು ವಿಪುಲ ಪ್ರಯತ್ನಗಳನ್ನು ಮುಂದುವರಿಸುತ್ತಿದೆ.

ತೀವ್ರ ಖಂಡನೆಗೆ ಒಳಪಟ್ಟ ಕಾನೂನು

ತಮ್ಮ ತಾಯ್ನಾಡಿನ ಹಕ್ಕನ್ನು ಒತ್ತಾಯಿಸಿ ಕಳೆದ ನಾಲ್ಕು ತಿಂಗಳಿಂಗಿಂತಲೂ ಹೆಚ್ಚು ಕಾಲದಿಂದ ಪ್ಯಾಲೇಸ್ಟಿನಿಯನ್ನರು ಪ್ರತಿಭಟನೆ ನಡೆಸುತ್ತಿದ್ದಾರೆ. ಆದರೆ ಇಸ್ರೇಲ್ ಸರ್ಕಾರವು ಅವರ ಹಕ್ಕುಗಳನ್ನು ಇನ್ನೆಂದೂ ಮರುಪಡೆಯಲು ಸಾಧ್ಯವಾಗದಂತೆ ಖಚಿತ ಪಡಿಸುವ ನಿಟ್ಟಿನಲ್ಲಿ ಈ ರಾಷ್ಟ್ರೀಯ ರಾಜ್ಯ ಕಾನೂನನ್ನು ತಂದಿದೆ. ಆ ಮೂಲಕ ಪ್ಯಾಲೇಸ್ಟಿನಿಯನ್ ಜನರ ತಾಯ್ನಾಡಿನ ಹಕ್ಕಿಗಾಗಿ ಹೋರಾಡುವ ಅವರ ಮನೋಬಲವನ್ನು ಕುಂದಿಸಿ ಪರಿಸ್ಥಿತಿಯನ್ನು ಮತ್ತಷ್ಟು ಬಿಗಿಗೊಳಿಸುವ ಪ್ರಯತ್ನದಲ್ಲಿ ಸಜ್ಜಾಗಿದೆ. ಈ ದೀರ್ಘಕಾಲದ ಪ್ರತಿಭಟನೆಗಳನ್ನು ಹತ್ತಿಕ್ಕಲು ಸರಕಾರ ತನ್ನ ಸೈನ್ಯದ ಬಲವನ್ನು ಬಳಸಿಕೊಂಡಿದೆ. ಇದರಲ್ಲಿ ಕನಿಷ್ಠ 164 ಪ್ಯಾಲೇಸ್ಟಿನಿಯನ್ ಜನರು ಈಗಾಗಲೇ ಕೊಲ್ಲಲ್ಪಟ್ಟು, ಸುಮಾರು 18,000 ಕ್ಕಿಂತ ಹೆಚ್ಚು ಜನರು ಗಾಯಗೊಂಡಿದ್ದಾರೆ. ಇದೀಗ ಈ ಕಾನೂನು ಜಾರಿಗೆ ತರುವುದರ ಮೂಲಕ, ಪ್ಯಾಲೇಸ್ಟಿನಿಯನ್ ರ ಎಲ್ಲಾ ಹಕ್ಕುಗಳನ್ನು ವಾಸ್ತವವಾಗಿ ನಿರಾಕರಿಸುವ ಸಂಚು ನಡೆಸಲಾಗುತ್ತಿದೆ. ಇದರಿಂದಾಗಿ ಪ್ಯಾಲೇಸ್ಟಿನಿಯನ್ ಜನರು ಇಸ್ರೇಲ್ ನಲ್ಲಿ "ದ್ವಿತೀಯ ದರ್ಜೆಯ ಪ್ರಜೆಗಳಾಗಿ" ಇನ್ನು ಮುಂದೆ ಬದುಕ ಬೇಕಾಗುತ್ತದೆ. ಇದು ತೀವ್ರವಾಗಿ ಖಂಡನೆಗೆ ಒಳಗಾಗಿರುವ ವಿಚಾರವಾಗಿದೆ.

ಹೊಸ ಕಾನೂನಿನಲ್ಲಿ ಏನಿದೆ ?

ಇಸ್ರೇಲ್ ರಾಷ್ಟವು ಯಾವುದೇ ಲಿಖಿತ ಸಂವಿಧಾನವನ್ನು ಹೊಂದಿಲ್ಲ. ಆದರೆ ಅದರ ಬದಲಿಗೆ ಅದು 13 ಮೂಲ ಕಾನೂನು ಗಳನ್ನು ಹೊಂದಿದೆ. ಅವರ ಅನುಕೂಲಕ್ಕೆ ತಕ್ಕ ಹಾಗೆ ಕಾಲಾನುಕ್ರಮವಾಗಿ ಅವುಗಳನ್ನು ಸಂಸತ್ತಿನಲ್ಲಿ ಅಂಗೀಕಾರ ಮಾಡಿಕೊಂಡು ಬಂದಿದೆ. ಈ ನಿಟ್ಟಿನಲ್ಲಿ, ಕಳೆದ ಜುಲೈ ತಿಂಗಳಲ್ಲಿ ಇಸ್ರೇಲಿನ ಸಂಸತ್ತು 14 ನೇ ಮೂಲಭೂತ ನಿಯಮವನ್ನು ಅಂಗೀಕಾರ ಮಾಡಿಕೊಂಡಿತು. ಅದೇ "ಯಹೂದಿ ರಾಷ್ಟ್ರ-ಪ್ರಭುತ್ವ ಕಾನೂನು" ಇದೀಗ ಇದು ಈ ದೇಶದ ಮೂಲಭೂತ ಕಾನೂನುಗಳ ಭಾಗವಾಗಿದೆ. ಈ ಕಾನೂನುಗಳೆಲ್ಲಾ "ಸಾಂವಿಧಾನಿಕ ಸಿಂಧುತ್ವ" ಹೊಂದಿರುತ್ತವೆ. ಪ್ರಸ್ತುತ ಯಹೂದಿ ರಾಷ್ಟ್ರ-ಪ್ರಭುತ್ವದ ಕಾನೂನಿನ ಕೆಲವು ಪ್ರಮುಖ ಅಂಶಗಳನ್ನು ಗಮನಿಸೋಣ. "ಇಸ್ರೇಲ್ ರಾಷ್ಟವು ಯಹೂದಿ ಜನಾಂಗದ ಪ್ರಭುತ್ವ ಮಾತ್ರವಾಗಿರುತ್ತದೆ ಹಾಗೂ ಇಸ್ರೇಲ್ ನಲ್ಲಿ ರಾಷ್ಟ್ರೀಯ ಸ್ವಯಂ-ನಿರ್ಣಯದ ಹಕ್ಕಿನ ನೆರವೇರಿಕೆ ಯಹೂದಿ ಜನರಿಗೆ ಮಾತ್ರ ಅನನ್ಯ ವಾಗಿರುತ್ತವೆ. ಯಹೂದಿ ಜನಾಂಗದ ಸಾಂಪ್ರದಾಯಿಕ, ಸಾಂಸ್ಕೃತಿಕ, ಐತಿಹಾಸಿಕ ಮತ್ತು ಧಾರ್ಮಿಕ ಆಸ್ತಿಗಳನ್ನು ರಕ್ಷಿಸಲು ರಾಜ್ಯವು ಕಾರ್ಯ ನಿರ್ವಹಿಸುತ್ತದೆ. ಯಹೂದಿ ವಸಾಹತು ರಾಷ್ಟ್ರೀಯ ಮೌಲ್ಯ ವೆಂದು ಬಯಸುತ್ತದೆ. ಅದರ ಸ್ಥಾಪನೆ ಮತ್ತು ಅಭಿವೃದ್ಧಿ ಗೆ ಪ್ರೋತ್ಸಾಹಿಸಲು ಮತ್ತು ಉತ್ತೇಜಿಸಲು ಅವಕಾಶ ನೀಡುತ್ತದೆ. ಒಂದು ಏಕೀಕೃತ ಮತ್ತು ಸಂಪೂರ್ಣ ನಗರವಾದ "ಜೆರುಸಲೇಮ್" ಇಸ್ರೇಲಿನ ರಾಜಧಾನಿ ಯಾಗಿರುತ್ತದೆ. ವಿಶ್ವದ ಯಾವುದೇ ಮೂಲೆಯಲ್ಲಿ ವಾಸಿಸುತ್ತಿರುವ ಯಹೂದಿಗಳ ವಲಸೆಗೆ ಹಾಗೂ ಬಹಿಷ್ಕಾರದ ಒಗ್ಗೂಡಿಸುವಿಕೆಗೆ ಇಸ್ರೇಲ್ ಯಾವಾಗಲೂ ತೆರೆದಿರುತ್ತದೆ. ಇದುವರೆಗೂ ಅಧಿಕೃತವಾಗಿದ್ದ, ಅರೇಬಿಕ್ ಭಾಷೆಯ ಎಲ್ಲಾ ವಿಶೇಷ ಸ್ಥಾನಮಾನವನ್ನು ಕಿತ್ತು ಹಾಕಲಾಗಿದೆ. ಅದರ ಬದಲಿಗೆ "ಹೀಬ್ರೂ" ಭಾಷೆಯನ್ನು ರಾಜ್ಯ ಭಾಷೆಯೆಂದು ಈ ಹೊಸ ಕಾನೂನು ಘೋಷಿಸುತ್ತದೆ.

ಸ್ವಾತಂತ್ರ್ಯದ ಘೋಷಣೆಗಳ ಹಿಂಪಡೆತ

1948 ರಲ್ಲಿ ಸುಮಾರು 7 ಲಕ್ಷಕ್ಕೂ ಹೆಚ್ಚು ಪ್ಯಾಲೇಸ್ಟಿನಿಯನ್ ಜನರನ್ನು ತಾಯ್ನಾಡಿನಿಂದ ಹೊರಹಾಕಿದ್ದ "ನಕ್ಬಾ" ದಿನವನ್ನು ನೆನಪು ಮಾಡಿಕೊಂಡಾಗ, ಈ ಹೊಸ ಕಾನೂನು ಪ್ಯಾಲೇಸ್ಟಿನಿಯನ್ ಜನರ ಜೀವನವನ್ನು ಮತ್ತಷ್ಟು ಹದಗೆಡಿಸುತ್ತದೆ. ಆ ನಕ್ಬಾ ದಿನ ಇಸ್ರೇಲ್ ರಚನೆಗೊಂಡ ಸ್ವಾತಂತ್ರ್ಯ ದಿನವಾಗಿತ್ತು. ಆ ಸಂದರ್ಭದಲ್ಲಿ ಸ್ವಾತಂತ್ರ್ಯದ ಹಲವು ಘೋಷಣೆ ಗಳನ್ನು ಇಸ್ರೇಲ್ ರಾಜ್ಯವು ಅನುಸರಿಸಿತು. ಅಂದು ಹೊಸದಾಗಿ ರೂಪುಗೊಂಡ ಇಸ್ರೇಲ್ ರಾಜ್ಯ"ಸಂಪೂರ್ಣ, ಸಾಮಾಜಿಕ ಮತ್ತು ರಾಜಕೀಯ ಹಕ್ಕುಗಳನ್ನು, ಧರ್ಮ, ಜನಾಂಗ ಅಥವಾ ವರ್ಣಭೇದದ ಹೊರತಾಗಿ ಎಲ್ಲಾ ನಿವಾಸಿಗಳಿಗೂ ಸಮಾನತೆ ನೀಡಲಾಗಿತ್ತು. ಧರ್ಮದ ಸ್ವಾತಂತ್ರ್ಯ, ಭಾಷೆ, ಶಿಕ್ಷಣ ಮತ್ತು ಸಂಸ್ಕೃತಿಯ ಖಾತರಿಯನ್ನು ನೀಡಲಾಗಿತ್ತು". ಅಂತಹ ಭರವಸೆಗಳನ್ನು ಹೊಂದಿದ್ದ ಘೋಷಣೆ ಗಳಿದ್ದರೂ ಸಹಾ, ಇಸ್ರೇಲ್ ನಲ್ಲಿ ಸಮಾನತೆಯ ಆಚರಣೆ ಯಾವತ್ತೂ ಖಾತರಿಯಾಗಿರಲಿಲ್ಲ ಎಂಬುದು ಸ್ಥಾಪಿತವಾಗಿದ್ದ ವಾಸ್ತವಿಕತೆ. ಆದರೆ, ಈ ಹೊಸ ಯಹೂದಿ ರಾಷ್ಟ್ರ ರಾಜ್ಯ ಕಾನೂನು ಇದ್ದ ಅಲ್ಪ-ಸ್ವಲ್ಪ ರಕ್ಷಣೆಯನ್ನು ಕೂಡ ತೆಗೆದು ಹಾಕಿದೆ. ಆದರಿಂದಾಗಿ, ಅಲ್ಪಸಂಖ್ಯಾತರ ಭವಿಷ್ಯವು ಮತ್ತಷ್ಟು ಆತಂಕಕ್ಕೆ ಸಿಲುಕುತ್ತದೆ.

ಅರಬ್ಬರು ಎರಡನೇ ದರ್ಜೆ ಪ್ರಜೆಗಳು

ಇಸ್ರೇಲ್ ಯಹೂದಿ ರಾಷ್ಟದ ರಾಜ್ಯ ಕಾನೂನಿನಿಂದಾಗಿ, ಸುಮಾರು 88 ಲಕ್ಷಕ್ಕೂ ಹೆಚ್ಚು ಅಂದರೆ, ಇಸ್ರೇಲ್ ನ ಜನಸಂಖ್ಯೆಯಲ್ಲಿ ಸುಮಾರು ಶೇಕಡಾ ಇಪ್ಪತ್ತೊಂದು ರಷ್ಟು ಜನಸಂಖ್ಯೆ ಹೊಂದಿರುವ ಪ್ಯಾಲೇಸ್ಟಿನಿಯನ್ ಅರಬ್ಬರನ್ನು ಎರಡನೇ ದರ್ಜೆಯ ಪ್ರಜೆಗಳನ್ನಾಗಿಸುತ್ತದೆ. ಒಂದು ಪ್ರಸಿದ್ಧ ದೈನಂದಿನ ಪತ್ರಿಕೆಯ ಸಂಪಾದಕೀಯ ಈ ರೀತಿ ಹೇಳಿದೆ. "ಇಸ್ರೇಲಿನಲ್ಲಿ ಈಗಾಗಲೇ ತೀವ್ರ ದುಷ್ಪರಿಣಾಮಗಳನ್ನು ಎದುರಿಸುತ್ತಿರುವ ಅಲ್ಪಸಂಖ್ಯಾತ ಪ್ಯಾಲೇಸ್ಟಿನಿಯನ್ ರು ಇದೀಗ ಯಹೂದಿ ರಾಜ್ಯ ವೆಂದು ಇಸ್ರೇಲ್ ಅನ್ನು ಘೋಷಣೆ ಮಾಡಿರುವುದರಿಂದ ಹೆಚ್ಚು ರೀತಿಯಾಗಿ ವರ್ಣ ಭೇದ ತಾರತಮ್ಯವನ್ನು ಅನುಭವಿಸ ಬೇಕಾಗುತ್ತದೆ ಎಂದಿದೆ. ಅರಬ್ಬರನ್ನು ಹೆದರಿಸಿ ಬೆದರಿಸಿ ರಾಜ್ಯದಿಂದ ಉಚ್ಚಾಟಿಸಲು ನಡೆಸಿರುವ ಅಧಿಕೃತ ಕಾನೂನು ಕ್ರಮ ಇದಾಗಿದೆ. ಜೊತೆಗೆ, ಇನ್ನು ಮುಂದೆ, ಯಹೂದಿ ರಾಜ್ಯದ ಹಿಡಿತದಲ್ಲಿ ನಾವು ಆರ್ಥಿಕ ಹಕ್ಕುಗಳಿಗಾಗಿ ನರಳಬೇಕಾಗುತ್ತದೆ ಎಂದು ಅರಬ್ ನಾಲ್ಕು ಪಕ್ಷಗಳ ಒಕ್ಕೂಟದ ಮುಖ್ಯಸ್ಥ ಅಯ್ಮಾನ್ ಒಡೆಹ್ ರವರು ಹೇಳಿಕೆ ನೀಡಿ ನಮಗೆ ಕತ್ತಲೆ ದಿನಗಳು ಆವರಿಸುತ್ತವೆ ಎಂದಿದ್ದಾರೆ.

ಈ ಕಾನೂನು ತಾರತಮ್ಯವನ್ನು ಒಂದು ಸಾಂವಿಧಾನಿಕ ಮೌಲ್ಯ ವನ್ನಾಗಿ ಪರಿವರ್ತನೆ ಗೊಳಿಸುತ್ತದೆ ಮತ್ತು ಬಹಿರಂಗವಾಗಿಯೇ ಯಹೂದಿ ಪ್ರಾಬಲ್ಯವನ್ನು ಬೆಂಬಲಿಸುತ್ತದೆ. ಈಗಾಗಲೇ, ಯಹೂದಿ ವಸಾಹತು ಸ್ಥಾಪಿಸುವ ಹೆಸರಿನಲ್ಲಿ ಪ್ಯಾಲೇಸ್ಟಿನಿಯನ್ ರನ್ನು ತಮ್ಮ ಮನೆಗಳು ಮತ್ತು ಭೂಮಿಯಿಂದ ಬಿಟ್ಟು ಓಡಿಸುತ್ತಿದ್ದಾರೆ. ವರ್ಣ ಭೇದ ನೀತಿಯ ನಿರ್ಮಾಣದ ಮೂಲಕ ಪ್ಯಾಲೇಸ್ಟಿನಿಯನ್ ರು ವಾಸಿಸುವ ಅನೇಕ ಪ್ರದೇಶಗಳು ಈಗಾಗಲೇ ದ್ವೀಪಗಳಾಗಿ ಪರಿವರ್ತನೆ ಗೊಂಡಿವೆ. ಅವರ ಮನೆಗಳು, ಮಾರುಕಟ್ಟೆ ಗಳು, ಶಾಲಾ ಕಾಲೇಜುಗಳು ಮತ್ತು ಇವರ ಪೂಜಾ ಸ್ಥಳಗಳು ಸ್ಥಳಾಂತರಗೊಂಡು ಇಸ್ರೇಲ್ ನಿಂದ ಪ್ರತ್ಯೇಕಿಸಲಾಗುತ್ತಿದೆ. ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸ್ಥಳಾಂತರಿಸುವ ಸಂಧರ್ಭಗಳಲ್ಲಿ ಪ್ಯಾಲೇಸ್ಟಿನಿಯನ್ ರನ್ನು ಅವಮಾನಿಸಲಾಗುತ್ತಿದೆ. ಪ್ಯಾಲೇಸ್ಟಿನಿಯನ್ ರು ಜೆರುಸೆಲಂ ನಿಂದ ತಮ್ಮ ಹಕ್ಕುಗಳನ್ನು ಹಿಂಪಡೆಯಬೇಕಾಗಿದೆ. ಏಕೆಂದರೆ ಇವರು ಇಸ್ರೇಲ್ ರಾಜ್ಯಕ್ಕೆ ನಿಷ್ಠರಾಗಿಲ್ಲ ಎಂದು ಭಾವಿಸಿ ಅಧಿಕಾರಗಳು ಚಿತ್ರ ಹಿಂಸೆ ಕೊಡುವ ಮೂಲಕ ತೀವ್ರ ತಾರತಮ್ಯ ವೆಸಗುತ್ತಿದ್ದಾರೆ.

ಟೆಲ್ ಅವಿವ್ ನಿಂದ ತನ್ನ ದೂತ ವಾಸವನ್ನು ವರ್ಗಾಯಿಸಲು ಅಮೇರಿಕ ಸರ್ಕಾರದ ನಿರ್ಧಾರವನ್ನು ಪ್ರಚೋದಿಸಲಾಗುತ್ತಿದೆ. ಜೆರುಸಲಂ ಅನ್ನು ಇಸ್ರೇಲ್ ನ ರಾಜಧಾನಿಯೆಂದು ಘೋಷಿಸಿರುವುದು ವಿಶ್ವ ಸಂಸ್ಥೆಯ ನಿಯಮಗಳಿಗೆ ವಿರುದ್ಧವಾಗಿದೆ. 1967 ರಲ್ಲಿ ಘೋಷಣೆ ಮಾಡಿದ ಪ್ಯಾಲೇಸ್ಟಿನಿಯನ್ ಗಡಿಗಳ ಪ್ರದೇಶ ಅಥವಾ ಈಗಿನ ಜೆರುಸೆಲಂ ಅನ್ನು ಪ್ಯಾಲೇಸ್ಟಿನಿಯನ್ ರಾಜಧಾನಿ ಎಂದು ಸ್ವೀಕರಿಸಬೇಕೆಂಬ ವಿಶ್ವ ಸಂಸ್ಥೆಯ ನಿಯಮಗಳನ್ನು ಈ ಹೊಸ ಕಾನೂನು ಗಾಳಿಗೆ ತೂರಿ, ಅಧಿಕೃತ ವಾಗಿ ಪ್ಯಾಲೇಸ್ಟಿನಿಯನ್ ಜನರ ರಾಜ್ಯದ ಅಸ್ತಿತ್ವದ ಹಕ್ಕನ್ನು ಸಂಪೂರ್ಣವಾಗಿ ಕಿತ್ತುಕೊಳ್ಳಲಾಗಿದೆ.

ಇಸ್ರೇಲ್ ಸಂಸತ್ತಿನಲ್ಲಿ 62–55 ಮತಗಳಿಂದ ಅಂದರೆ ತುಂಬಾ ಕಡಿಮೆ ಅಂತರದಲ್ಲಿ ಈ ಹೊಸ ನಿಯಮವು ಅನುಷ್ಠಾನಕ್ಕೆ ಬಂದಿದೆ. ಇಸ್ರೇಲ್ ನ ಈ ನೀತಿಯನ್ನು ಅನೇಕ ಯಹೂದಿ ಸಂಘಟನೆಗಳೂ ಕೂಡ ಬಹಿರಂಗವಾಗಿಯೇ ಪ್ರತಿಭಟನೆ ಯಲ್ಲಿ ಪಾಲ್ಗೊಳ್ಳುವ ಮೂಲಕ ಉಗ್ರವಾಗಿ ಖಂಡಿಸಿದ್ದಾರೆ. ಇಂತಹ ಸಂಘಟನೆ ಗಳ ಪಟ್ಟಿ ಉದ್ದವಾಗಿದ್ದು, ಅವುಗಳಲ್ಲಿ ಪ್ರಮುಖ ವಾಗಿ,"ದಿ ಅಮೇರಿಕನ್ ಜ್ಯೂಯಿಷ್ ಸಮಿತಿ, ನ್ಯೂ ಇಸ್ರೇಲ್ ಫಂಡ್, ಯೂನಿಯನ್ ಫಾರ್ ರಿಫಾರ್ಮ್ ಜುಡಿಸಮ್," ಇತ್ಯಾದಿಯಾಗಿವೆ. ಇದರೊಂದಿಗೆ, ನೇತುನ್ಯಾಹು ಕ್ಯಾಬಿನೆಟ್ ನಲ್ಲಿನ ಹಣಕಾಸಿನ ಪ್ರಸಕ್ತ ಸಚಿವರೊಬ್ಬರು, 'ಇಸ್ರೇಲ್ ಅನ್ನು ಯಹೂದಿ ರಾಜ್ಯವೆಂದು ವ್ಯಾಖ್ಯಾನಿಸುವುದು ಸರಿಯಲ್ಲ'ವೆಂದಿದ್ದಾರೆ. ಪ್ರತಿಭಟನೆಗಳು ಇಸ್ರೇಲಿನಾದ್ಯಂತ ವ್ಯಾಪಕವಾಗಿ ಹಬ್ಬಿದೆ. ಅನೇಕ ರಾಜಕೀಯ ಪಕ್ಷಗಳು ಈ ಕಾನೂನಿನ ವಿರುದ್ಧ ಚಳುವಳಿಯ ಭಾಗವಾಗಿದ್ದಾರೆ. ಇಸ್ರೇಲ್ ನ ಎಲ್ಲಾ ನಾಗರಿಕರು ಮನೆಯಿಂದ ಹೊರಬಂದು ಚಳುವಳಿಯಲ್ಲಿ ಭಾಗವಹಿಸಿ ವರ್ಣ ಭೇದ ನೀತಿಯ ವಿರುದ್ಧ ಜಂಟಿಯಾಗಿ ಹೋರಾಡಲು ಕರೆ ನೀಡಲಾಗಿದೆ. ಜನರು ಕೂಡಾ ಅಷ್ಟೆ ದೊಡ್ಡ ಪ್ರಮಾಣದಲ್ಲಿ ಸ್ಪಂದಿಸುತ್ತಿದ್ದಾರೆ. ಅವುಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ, " ಇಸ್ರೇಲ್ ಕಮ್ಯೂನಿಸ್ಟ್ ಪಾರ್ಟಿ, ಹದಾಶ್, ಮೆರೆಟ್ಜ್, ತಾಲ್ ಮತ್ತು ನವೀಕರಣಕ್ಕಾಗಿ ಅರಬ್ ಚಳವಳಿಗಾರರು ಮತ್ತು ಇತರ ಸಾವಿರಾರು ಇಸ್ರೇಲ್ ನ ಸಂಘಟನೆ ಗಳು ". ಕರೆಗೆ ಒಗ್ಗೊಟ್ಟು ಪ್ರತಿಕ್ರಿಯಿಸಿದ್ದಾರೆ. ಇಸ್ರೇಲಿನ ವಿವಿಧ ನಗರಗಳಲ್ಲಿ ಪ್ರತಿಭಟನೆಯನ್ನು ಆಯೋಜಿಸಲಾಗಿದೆ. ಕಾನೂನಿನ ಸಿಂಧುತ್ವವನ್ನು ಪ್ರಶ್ನಿಸಿ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಗಿದೆ.

ಪ್ರತಿಭಟನೆಯಲ್ಲಿ ಡ್ರೂಜ್ ಮತ್ತು ಪ್ಯಾಲೇಸ್ಟಿನಿಯನ್ ಧ್ವಜಗಳ ಹಾರಟ :

ಈ ಪ್ರತಿಭಟನೆಯ ಪ್ರಮುಖ ಸಂಘಟಕರಾದ "ಅರಬ್ ಹೈಯರ್ ಮಾನಿಟರಿಂಗ್ ಸಮಿತಿ " ವಿಶೇಷವಾಗಿ ಪ್ರತಿಭಟನೆಯಲ್ಲಿ ಪ್ಯಾಲೇಸ್ಟಿನಿಯನ್ ಧ್ವಜಗಳನ್ನು ಹಾರಿಸಬಾರದು ಎಂಬ ಕರೆ ನೀಡಿತ್ತು. ಕಾರಣವೆಂದರೆ, ಇಸ್ರೇಲಿನ ಉದಾರವಾದಿ ಝಿಯಾನಿಸ್ಟ್ ಗಳು ಪ್ರತಿಭಟನೆ ಯಲ್ಲಿ ಪ್ಯಾಲೇಸ್ಟಿನಿಯನ್ ಧ್ವಜಗಳನ್ನು ಎತ್ತಿಹಿಡಿದರೆ ಪ್ರತಿಭಟನೆ ಯನ್ನು ಬಹಿಷ್ಕಾರ ಮಾಡುತ್ತೇವೆಂಬ ಬೆದರಿಕೆಯ ಕರೆಯನ್ನು ಈ ಸಮಿತಿ ಮನ್ನಿಸಿತ್ತು. ಅವರನ್ನು ಸಮಾಧಾನ ಗೊಳಿಸಲು ಧ್ವಜ ಹಾರಿಸುವುದು ಬೇಡವೆಂದಿತ್ತು. ಆದಾಗ್ಯೂ, ಧ್ವಜ ಗಳು ಹಾರಾಡಿರುವುದನ್ನು ಪೋಟೋಗಳು ತೋರಿಸಿಕೊಟ್ಟಿವೆ. ಇದು ಪ್ರತಿಭಟನೆಯ ಸ್ವರೂಪವನ್ನು ಪ್ರತಿಬಿಂಬಿಸುತ್ತದೆ. ಪ್ಯಾಲೇಸ್ಟಿನಿಯನ್ ಧ್ವಜ ಮತ್ತು ಚಿಹ್ನೆ ಗಳನ್ನು ಹೊಸ ಕಾನೂನು ತಡೆ ಹಿಡಿಯುವುದನ್ನು ಹಾಗೂ ನಾವುಗಳು ಎರಡನೆಯ ದರ್ಜೆಯ ಪೌರತ್ವವನ್ನು ಸ್ವೀಕರಿಸುವುದಿಲ್ಲ ವೆಂಬ ಪ್ರಬಲವಾದ ಭಾವನೆಗಳನ್ನು ಪ್ರತಿಭಟನೆ ಯಲ್ಲಿ ವ್ಯಕ್ತ ಪಡಿಸಲಾಗಿದೆ ಎಂಬ ವಿಶ್ಲೇಷಣೆ ರಾಜಕೀಯ ಪಂಡಿತರು ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ

ಇಸ್ರೇಲ್ ನ ಸಣ್ಣ ಅರಬ್-ಭಾಷಿಕ ಇಸ್ಲಾಮಿಕ್ ಪಂಥದ ಡ್ರೂಝ್ ಜನಾಂಗದ ಬಹುಪಾಲು ಜನರು 1956 ರಿಂದಲೂ ಝಿಯಾನಿಸ್ಟ್ ಆಡಳಿತಕ್ಕೆ ಬೆಂಬಲ ನೀಡುತ್ತಾ ಬಂದಿದ್ದಾರೆ. ಇದೀಗ ಇವರೆಲ್ಲರೂ ಹೊರಬಂದು ಈ ಹೊಸ ಕಾನೂನು ನನ್ನು ಬದಲಾಯಿಸಬೇಕು ಎಂದು ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವ ಮೂಲಕ ನೇತನ್ಯಾಹು ನಾಯಕತ್ವದ ಆಡಳಿತ ವನ್ನು ಒತ್ತಾಯಿಸುತ್ತಿದ್ದಾರೆ.

ಅನೇಕರ ಸೌಹಾರ್ದ ಯುತ ಬೆಂಬಲ

ಪ್ರೊಫೆಸರ್ ನೋಮ್ ಚೋಮ್ಸ್ಕಿ ಯವರು ಬೆಂಬಲ ವ್ಯಕ್ತಪಡಿಸಿದವರಲ್ಲಿ ಪ್ರಮುಖ ರಾಗಿದ್ದಾರೆ. ಪ್ರತಿಭಟನೆ ಯ ಸ್ವರೂಪವನ್ನು ನಿರ್ದಿಷ್ಟ ವಾಗಿ ಆಯೋಜಿಸಿರುವ ಸಂಘಟಕ ರಾದ "ಕಮ್ಯೂನಿಸ್ಟ್ ಪಾರ್ಟಿ ಆಫ್ ಇಸ್ರೇಲ್' (ಸಿಪಿಐ) ಮತ್ತು ಹಾದಶ್ ರು, ಪ್ರತಿಭಟನೆ ಯನ್ನು ಮತ್ತಷ್ಟು ತೀಕ್ಷ್ಣವಾಗಿ ನಡೆಸುವ ಸಲುವಾಗಿಯೇ ಚರ್ಚಿಸಲು ಆಯೋಜಿಸಿರುವ 'ಕಾನ್ಫರೆನ್ಸ್' ಗೆ ನೇರವಾಗಿ ಪ್ರೊಫೆಸರ್ ಚೋಮ್ಸ್ಕಿಯವರು ಕಾನೂನಿಗೆ ಸಂಬಂಧ ಪಟ್ಟಂತೆ ನಿರ್ದಿಷ್ಟವಾದ ಸಲಹೆಗಳ ಒಂದು ಪತ್ರ ಬರೆದು ತಮ್ಮ ಅಧಿಕೃತ ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ. ಹಾಗೆಯೇ ಅಮೇರಿಕದ ಬೆಂಬಲಿತ ಸೌದಿ ಅರೇಬಿಯಾ ಸೇರಿದಂತೆ ಪಶ್ಚಿಮ ಏಷ್ಯಾದ ಬಹುತೇಕ ಎಲ್ಲಾ ಸರ್ಕಾರಗಳು ನೇತನ್ಯಾಹು ಆಡಳಿತದ ಈ ಕಾನೂನನ್ನು ತೀವ್ರವಾಗಿ ಖಂಡಿಸಿ, ಇದು ವರ್ಣಭೇದ ಜನಾಂಗೀಯ ತಾರತಮ್ಯ ದ ದ್ವೇಷಕ್ಕೆ ಎಡೆಮಾಡಿಕೊಡುತ್ತದೆ. ಆದ್ದರಿಂದ ವಾಪಸ್ಸು ಪಡೆಯಲು ಆಗ್ರಹಿಸಿದ್ದಾರೆ. ಈ ಧ್ವನಿಯಲ್ಲಿ ಯುರೋಪಿಯನ್ ಒಕ್ಕೂಟವು ಸೇರಿಕೊಂಡಿದೆ.

ಭ್ರಷ್ಟಾಚಾರಿ ಬಲ ಪಂಥೀಯ ಆಡಳಿತಗಾರ ನೇತನ್ಯಾಹು

ಇಸ್ರೇಲಿನ 70 ವರುಷಗಳ ಇತಿಹಾಸದಲ್ಲಿ ಅತಿ ಹೆಚ್ಚಿನ ಬಲಪಂಥೀಯ ಆಡಳಿತದ ಸರಕಾರದ ನೇತೃತ್ವ ವಹಿಸಿರುವ ನೇತನ್ಯಾಹು, ಈ ಯಹೂದಿ ರಾಷ್ಟ್ರದ ರಾಜ್ಯ ಕಾನೂನನ್ನು ಸಮರ್ಥಿಸಿಕೊಂಡು, ವಾಪಸ್ಸು ಪಡೆಯಲು ನಿರಾಕರಿಸುತ್ತಿದ್ದಾನೆ. ಏಕೆಂದರೆ, ಇವನು ಮತ್ತು ಇವನ ಆಡಳಿತ ಅತೀವವಾದ ಭ್ರಷ್ಟಾಚಾರದಲ್ಲಿ ಮುಳುಗಿಹೋಗಿದೆ. ಇವರ ಸರಕಾರದ ಮೇಲೆ ಭ್ರಷ್ಟಾಚಾರದ ಅನೇಕ ಆರೋಪಗಳಿವೆ. ಈ ಹಿನ್ನೆಲೆಯಲ್ಲಿ ತನ್ನ ಭ್ರಷ್ಟ ಕಾರ್ಯಗಳಿಂದ ದೇಶದ ಮತ್ತು ಜಗತ್ತಿನ ಗಮನವನ್ನು ಬೇರೆ ಕಡೆ ತಿರುಗಿಸಲು ಅಮೇರಿಕ ದೊಂದಿಗೆ ಸೇರಿಕೊಂಡು, ಈ ಕಾನೂನನ್ನು ಜಾರಿಗೆ ತರಲಾಗಿದೆ ಎಂಬ ಬಲವಾದ ಆರೋಪ ವನ್ನು ಪ್ರತಿಭಟನೆ ಕಾರರು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಪ್ರತಿಭಟನೆ ಯ ನೇತೃತ್ವ ವಹಿಸಿರುವವರನ್ನು "ಈ ಎಡಪಂಥೀಯರು ದ್ರೋಹಿಗಳು" ಎಂದು ಕೆಟ್ಟದಾಗಿ ಆರೋಪಿಸಲಾಗಿದೆ.

ಭಾರತ ಸರ್ಕಾರದ ಮೌನವನ್ನು ಬಯಲಿಗೆಳೆಯಬೇಕು

ಇಡೀ ಜಗತ್ತೇ ಒಂದು ಕಡೆ, ಇಸ್ರೇಲಿನ ಈ ಯಹೂದಿ ರಾಷ್ಟ್ರ ಕಾನೂನನ್ನು ಖಂಡಿಸುತ್ತಿರುವಾಗ, ಮತ್ತೊಂದು ಕಡೆ, ಒಂದು ಪ್ರಮುಖ ಧ್ವನಿ ಯಾಗಿರುವ ನಮ್ಮ ದೇಶದ ಆಡಳಿತಗಾರರು ಮೂಕ ಪ್ರೇಕ್ಷಕರಾಗಿರುವುದು ಹಾಗೂ ಅಮೇರಿಕ ಮತ್ತು ಇಸ್ರೇಲಿನ ಒತ್ತಾಯಕ್ಕೆ ಸಿಕ್ಕಿಹಾಕಿಕೊಂಡು, ಇಸ್ರೇಲ್ ಪರವಾದ ನೀತಿಯನ್ನು ಅನುಸರಿಸುತ್ತಿರುವುದು ಸರಿಯಾದ ನಿಲುವಲ್ಲವೆಂಬುದು ಅನೇಕ ರಾಜಕೀಯ ವಿಶ್ಲೇಷಕರ ಅಭಿಪ್ರಾಯವಾಗಿದೆ. ಆರ್.ಎಸ್.ಎಸ್. ಕಾರ್ಯಸೂಚಿಯನ್ನು ಮಾತ್ರ ಜಾರಿಗೊಳಿಸುವ ನಿಟ್ಟಿನಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ನೇತೃತ್ವದ ಎನ್.ಡಿ.ಎ. ಸರಕಾರ ತನ್ನ ಮಿಲಿಟರಿ, ಆರ್ಥಿಕ ಹಾಗೂ ರಾಜಕೀಯ ಸಂಬಂಧಗಳನ್ನು ಇಸ್ರೇಲ್ ನೊಂದಿಗೆ ಕಡಿತಗೊಳಿಸಬೇಕಾದ ಸಂದರ್ಭ ಇದಾಗಿದೆ. ಹಾಗೆಯೇ, ಇಸ್ರೇಲ್ ನೊಂದಿಗೆ ಎಲ್ಲಾ ವಿತರಣೆ ಮತ್ತು ನಿರ್ಬಂಧಗಳ ಚಳುವಳಿಯನ್ನು ಬಲಪಡಿಸಬೇಕಾಗಿದೆ. ಆದರೆ ಪ್ರಸ್ತುತ ಬಿಜೆಪಿ ಸರಕಾರ, ಇಸ್ರೇಲಿನ ನೇತುನ್ಯಾಹು ನೇತೃತ್ವದ ಝಿಯಾನಿಸ್ಟ್ ಲಿಕುಡ್ ಪಕ್ಷದೊಂದಿಗೆ ತನ್ನ ಗುರು ಆರ್.ಎಸ್.ಎಸ್. ಸೈದ್ಧಾಂತಿಕ ವಾಗಿ ಆಕರ್ಷಣೆ ಹೊಂದಿರುವ ಕಾರಣದಿಂದಾಗಿ ಮೌನಕ್ಕೆ ಶರಣಾದಂತಿದೆ. ಈ ಅಮಾನವೀಯ ಸಂಬಂಧ ವನ್ನು ಬಯಲಿಗೆಳೆಯಬೇಕಾಗಿದೆ. ●

JANASHAKTHI KANNADA VARA PATRIKE AUG 27-SEP 2, 2018 Price: Rs. 10/- Date of Publication: 24 AUGUST 2018 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283









ಕೊಡಗು ಮತ್ತು ಕೇರಳ ನೆರೆ ಪರಿಹಾರಕ್ಕಾಗಿ ಹಣ ಮತ್ತು ಸಾಮಗ್ರಿಗಳನ್ನು ಹಲವು ಕಡೆ ಸಂಗ್ರಹಿಸಲಾಯಿತು. ಇದರಲ್ಲಿ ಸಿಪಿಐ(ಎಂ), ಎಸ್.ಎಫ್.ಐ., ಡಿ.ವೈ.ಎಫ್.ಐ., ಜೆ.ಎಂ.ಎಸ್ ಸ್ಥಳೀಯ ಘಟಕಗಳು ಸಂಘಟಿಸಿದ್ದವು.







ವಿಜ್ಞಾನ ಹೇಗೆ ಅಪ್ರಸ್ತುತವಾಗಲು ಸಾಧ್ಯ?....

ಪುಟ 6 ರಿಂದ

ಕೈಗಾರಿಕೆಗಳಲ್ಲಿ ಬಳಸಿದಾಗ ಅದರ ಪರಿಣಾಮಗಳ ಬಗ್ಗೆ ಅಧ್ಯಯನ ಮಾಡಿದರು. ಬಂಡವಾಳ ಸಂಪುಟ 1 ರ 'ಯಂತ್ರಗಳು ಮತ್ತು ಆಧುನಿಕ ಕೈಗಾರಿಕೆ" ಎಂಬ ಅಧ್ಯಾಯದಲ್ಲಿ ತಂತ್ರಜ್ಞಾನದ ಬಗ್ಗೆ ವಿಶ್ಲೇಷಣೆ ಸ್ಪಷ್ಟವಾಗಿ ನಿರೂಪಿತವಾಗಿದ್ದು ಅದರ ಸಾರಾಂಶವನ್ನು ಪ್ರೊ. ಉಡುಪ ವಿವರಿಸಿದರು. ಯಂತ್ರಗಳನ್ನು ಕೈಗಾರಿಕೆಗಳಲ್ಲಿ ಬಳಸಿದ್ದರಿಂದ ಶ್ರಮದ ಸ್ವರೂಪದಲ್ಲಿ ಮತ್ತು ಸಾಮಾಜಿಕವಾಗಿ ಆದ ಪರಿಣಾಮಗಳ ಬಗ್ಗೆ ಮಾರ್ಕ್ಸ್ ವಿವರವಾಗಿ ದಾಖಲಿಸಿ ತಂತ್ರಜ್ಞಾನದ ಕೆಲವು ಸಾಮಾನ್ಯ ವಿಶ್ಲೇಷಣೆಗಳನ್ನು ಮಾಡುತ್ತಾರೆ. ಯಾಂತ್ರೀಕರಣದಿಂದಾಗಿ ಕಾರ್ಮಿಕರ ಕೆಲಸದ ಅವಧಿ ಮತ್ತು ತೀವ್ರತೆ ಹೆಚ್ಚಿದ್ದು, ಕೂಲಿಯಲ್ಲಿ ಕಡಿತ, ಕಾರ್ಮಿಕರ ಚೌಕಾಶಿಯ ಶಕ್ತಿಯಲ್ಲಿ ಕಡಿತ, ಕೌಶಲ್ಯ ಮತ್ತು ಸ್ವಾಭಿಮಾನದ ನಷ್ಟ, ಮಹಿಳಾ ಬಾಲಕರ ದುಡಿತದ ಹೆಚ್ಚಳ, ಪಾಳಿ ಕೆಲಸ – ಇವೆಲ್ಲ ಪರಿಣಾಮಗಳನ್ನು ವಿವರಿಸುತ್ತಾರೆ. ಇವುಗಳ ಮೂಲಕ 'ವಿಮೋಚನಾಕಾರಿ ಸಾಧ್ಯತೆ ಇರುವ ಬಂಡವಾಳಶಾಹಿ ತಂತ್ರಜ್ಞಾನದ ಉತ್ಪಾದಕತೆ ಮತ್ತು ಅದರ ಬಳಕೆಯ ಮೂಲಕ ದುಡಿಯುವ ಜನರ ಬಾಳನ್ನು ಇನ್ನಷ್ಟು ದುರ್ಭರಗೊಳಿಸುವ ಅದರ ನೈತಿಕತೆ (ಅಥವಾ ಅದರ ಅಭಾವ) – ಇವುಗಳ ನಡುವೆ ಇರುವ ವೈರುಧ್ಯವನ್ನು' ಉದಾಹರಣೆ ಸಮೇತ ವಿವರಿಸುತ್ತಾರೆ.



ಇದರ ವಿರುದ್ಧ ಯಂತ್ರ–ವಿನಾಶದ ಲುಡ್ಡೈಟ್ ಚಳುವಳಿಯ ಅಸಂಗತತೆ ಮತ್ತು ಬದಲಾಗಿ ರಾಜಕೀಯ ಪ್ರಜ್ಞೆ ಬೆಳೆಸುವ ಅಗತ್ಯತೆ ಬಗೆಗೂ ಹೇಳುತ್ತಾರೆ. ಆ ಮೇಲಿನ ಸ್ವಯಂ–ಚಾಲೀಕರಣ (ಅಟೊಮೇಶನ್ – ಯಂತ್ರದ ನಿಯಂತ್ರಣಕ್ಕೂ ಮನುಷ್ಯನ ಬದಲು ಇನ್ನೊಂದು ಕಂಪ್ಯೂಟರ್ ಅಥವಾ ಯಂತ್ರದಿಂದ), ರೊಬೋಟೀಕರಣ, ಕೃತಕ ಬುದ್ಧಿಮತ್ತೆಯಿಂದ 'ಬೌದ್ಧಿಕ ಕೆಲಸ'ಗಳಲ್ಲೂ ಮನುಷ್ಯನನ್ನು ಕಿತ್ತು ಹಾಕುವ ಪ್ರಯತ್ನ, ಇಂಟರ್ನೆಟ್ ಬಳಸಿ 'ಕಣ್ಗಾವಲು ಬಂಡವಾಳಶಾಹಿ' ಬೆಳೆಸುವ ಪ್ರಯತ್ನ – ಇತ್ಯಾದಿಗಳ ಇಂದಿನ ಯುಗದಲ್ಲೂ ತಂತ್ರಜ್ಞಾನದ ಬಗ್ಗೆ ಮಾರ್ಕ್ಸ್ ಹೇಳಿದ ವೈರುಧ್ಯವೇ ಇನ್ನೂ ಪ್ರಧಾನವಾಗಿರುವ ಬಗ್ಗೆ ವಿವರಿಸಿದರು. ಆದೇ ಸಮಯದಲ್ಲಿ ತಂತ್ರಜ್ಞಾನವನ್ನೇ ವೈರಿಯೆಂದು ಕಾಣುವ ಬದಲು ಬಂಡವಾಳಶಾಹಿ ವರ್ಗ ಸ್ವರೂಪದ ಬಗೆಗೆ ಜಾಗೃತಿ ಮೂಡಿಸುವ ಬಗೆಗೆ ಒತ್ತಿ ಹೇಳಿದರು. ವಿಜ್ಞಾನ ತಂತ್ರಜ್ಞಾನಗಳನ್ನೇ 'ವಿಲನ್' ಆಗಿಸುವ ಮತ್ತು ಆ ಮೂಲಕ ಅದರ ವರ್ಗ ಸ್ವರೂಪ ಮರೆಸುವ ಪೋಸ್ಟ್ ಮಾಡರ್ನಿಸ್ಟ್ ಸಿದ್ಧಾಂತಗಳ ಬಗೆಗೂ ಅವರು ಎಚ್ಚರಿಕೆ ನೀಡಿದರು.

'ಮಾರ್ಕ್ಸ್ ಮತ್ತು ತತ್ವಶಾಸ್ತ್ರ' ಎಂಬ ವಿಷಯದ ಬಗ್ಗೆ ಡಾ. ಭಾಸ್ಕರ ಮಯ್ಯ ಅವರು ಮಾತನಾಡಿದರು. ವಿಜ್ಞಾನಗಿಂತ ಬೇರೆಯೂ ಮೇಲೂ ಅಲ್ಲದ, ಆದರೆ ವಿಜ್ಞಾನಕ್ಕೂ ಬುದ್ದಿ ಹೇಳಬಲ್ಲದ್ದು ಗತಿತಾರ್ಕಿಕ ಭೌತವಾದ ಎಂದು ಹೇಳುತ್ತಾ, ಅದರ ವಿವಿಧ ಅಂಶಗಳು ಮತ್ತು ಸತ್ಯ ದರ್ಶನಕ್ಕೆ ಅದರ ಆವಶ್ಯಕತೆ ಬಗ್ಗೆ ವಿವರಿಸಿದರು. ಭಾವನಾವಾದ ಮತ್ತು ಭೌತವಾದ, ಯಾಂತ್ರಿಕ ಭೌತವಾದ ಮತ್ತು ಗತಿತಾರ್ಕಿಕ ಭೌತವಾದಿ ದೃಷ್ಟಿಕೋಣಗಳ ಬಗ್ಗೆ ನಿತ್ಯಜೀವನದ ಉದಾಹರಣೆಗಳಿಂದ ಅವರು ವಿವರಿಸಿದರು.

ಮಧ್ಯಾಹ್ನದ ಗೋಷ್ಠಿ ಅಧ್ಯಕ್ಷತೆ ವಹಿಸಿದ್ದ ಹಿರಿಯ ಸಿಪಿಐ ನಾಯಕ ಪಿ.ವಿ.ಲೋಕೇಶ್ ಮಾತನಾಡಿ ಕೋಮುವಾದಿ ತಾತ್ವಿಕತೆ ವ್ಯಾಪಕವಾಗಿ ಹರಡುತ್ತಿರುವ ಸನ್ನಿವೇಶದಲ್ಲಿ, ಮಾರ್ಕ್ಸ್‌ವಾದವನ್ನು ಜನರ ಅದರಲ್ಲೂ ಯುವಜನರತ್ತ ಒಯ್ಯುವ ತುರ್ತು ಅಗತ್ಯದ ಬಗ್ಗೆ ಒತ್ತಿ ಹೇಳಿ, ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗುವಂತೆ ಕರೆ ನೀಡಿದರು. ಮಂಗಳೂರು ಸಮುದಾಯದ ಮನೋಹರ ವಾಮಂಜೂರು ಮಧ್ಯಾಹ್ನದ ಗೋಷ್ಠಿಯ ನಿರೂಪಣೆಯನ್ನೂ, ವಾಸುದೇವ ಉಚ್ಚಿಲ್ ವಂದನಾರ್ಪಣೆಯನ್ನೂ ಮಾಡಿದರು. ●

JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**